ನಮ್ಮ ಮಾನಸ

ಸಂಪುಟ : 3 ಡಿಸೆಂಬರ್ 2009 ಸಂಚಿಕೆ : 7



ತತ್ಕಾಲ್ ಪೋಡಿ ಯೋಜನೆ

ಕರ್ನಾಟಕವು ರೈತರಿಗಾಗಿ 'ಭೂಮಿ ಯೋಜನೆ' ರೂಪಿಸಿ ದೇಶದಲ್ಲೇ ಭೂ ದಾಖಲೆಗಳನ್ನು ಗಣೀಕೀಕರಿಸಿದ ಮೊಟ್ಟ ಮೊದಲ ರಾಜ್ಯ. ವಿಶ್ವಸಂಸ್ಥೆಯಿಂದಲೇ ಈ ವಿನೂತನ ಯೋಜನೆಯು ಮೆಚ್ಚುಗೆಗೆ ಪಾತ್ರವಾದುದು ಹೆಮ್ಮೆಯ ಸಂಗತಿ. ರಾಜ್ಯ ಸರ್ಕಾರವು ಈಗ ತನ್ನ ರೈತರಿಗಾಗಿ ಮತ್ತೊಂದು ನೂತನ ಯೋಜನೆಯನ್ನು ಜಾರಿಗೊಳಿಸುತ್ತಿದೆ, ಅದುವೇ "ತತ್ಕಾಲ್ ಪೋಡಿ" ಯೋಜನೆ.

ಈ ಯೋಜನೆಯಿಂದ ರೈತರು ತಮ್ಮ ಜಮೀನಿನ ಅಳತೆ ಮತ್ತು ನಕ್ಷೆಯನ್ನು ಪಡೆಯುವರು. ದೋಷರಹಿತ ಮತ್ತು ಯಾರಿಂದಲೂ ತಿದ್ದುಪಡಿಗೆ ಅವಕಾಶವಾಗದ ಈ ದಾಖಲೆಯೊಂದಿಗೆ ರೈತರು ತಮ್ಮ ಜಮೀನಿನ ಬಗ್ಗೆ ಸಂಪೂರ್ಣ ಮಾಹಿತಿ ಹೊಂದಿದಂತಾಗುವುದು. ಅಲ್ಲದೆ ಅವರು ಇನ್ನು ಮುಂದೆ ಮ್ಯುಟೇಷನ್ ಪೋಡಿಗಾಗಿ ಕಾಯಬೇಕಿಲ್ಲ. ಸರ್ಕಾರವು ತತ್ಕಾಲ್ ಪೋಡಿ ಯೋಜನೆ ಹಮ್ಮಿಕೊಂಡಿರುವುದರಿಂದ ಇದರ ಲಾಭ ಪಡೆಯುವವರು. ರೂ: 500/– ಪಾವತಿಸಿದಲ್ಲಿ ಒಂದು ತಿಂಗಳಲ್ಲಿ (ಸಮಸ್ಯೆ ರಹಿತ ದಾಖಲೆಗಳಿಗೆ ಅನ್ವಯ) ಅಳತೆ ಮಾಡಿ ಮ್ಯುಟೇಶನ್ ಪೋಡಿ ದುರಸ್ತಿ ಕಾರ್ಯ ಪೂರೈಸಿ ಹೊಸ ಹಕ್ಕು ದಾಖಲೆ ಒದಗಿಸಲಾಗುವುದು.

ಈ ಕಾರ್ಯಕ್ಕೆ ರಾಷ್ಟ್ರದಲ್ಲಿಯೇ ಮೊದಲ ಬಾರಿಗೆ ಜಾರಿಗೆ ತಂದಿರುವ ಪರವಾನಗಿ ಭೂಮಾಪಕರನ್ನು ಬಳಸಲಾಗುವುದು. ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಮೂಲಕ ಕರ್ನಾಟಕವು ಪೋಡಿ ರಹಿತ ರಾಜ್ಯವನ್ನಾಗಿಸುವ ದಿಸೆಯಲ್ಲಿ ಪ್ರಮುಖ ಹೆಜ್ಜೆಯಿಟ್ಟಿದೆ.

ರೈತರು ಈ ಯೋಜನೆಯ ಲಾಭ ಪಡೆಯಲು ವಿನಂತಿ.

ಹೆಚ್ಚಿನ ಮಾಹಿತಿಗಾಗಿ ರೈತರು ತಮಗೆ ಸಂಬಂಧಿಸಿದ ಈ ಕೆಳಕಂಡ ಯಾವುದಾದರೊಂದು ಕಛೇರಿಯನ್ನು ಸಂಪರ್ಕಿಸಬಹುದು.

- **ತಾಲ್ಲೂಕು ಕಛೇರಿ**
- **ಜಿಲ್ಲಾಧಿಕಾರಿಗಳ ಕಛೇರಿ**
- **ಆಯುಕ್ತರು, ಭೂಮಾಪನ ಇಲಾಖೆ, ಬೆಂಗಳೂರು.**

ಕರ್ನಾಟಕ ವಾರ್ತೆ

ನಮ್ಮ ಮಾನಸ

ಡಿಸೆಂಬರ್ 2009

ಸಂಪುಟ : 3   ಸಂಚಿಕೆ : 8

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಸಂಪಾದಕ ಮಂಡಳಿ
ಚಂಪಾವತಿ ಹೆಚ್.ಎಸ್., ಸವಿತಾ ಎ.
ವೆಂ. ವನಜಾ, ಗೀತಾ, ಎಚ್.ಎಸ್. ಪುಷ್ಪಾ.

ಸಲಹೆ – ಸಹಕಾರ
ಇಳಾ ವಿಜಯಾ, ಸುಮಿತ್ರಾಬಾಯಿ ಬಿ.ಎನ್.

ಮಾನಸ ಬಳಗ
ತಸ್ನೀಂ ತಾಜ್, ವೇದವಲ್ಲಿ ಜಿ.ವಿ.
ವತ್ಸಲ ವೈ.ಎನ್., ಶ್ಯಾಮಲ, ತಾಜುಮಾ

ಚಂದಾ ವಿವರ

ಬಿಡಿಪ್ರತಿ	**8–00 ರೂ.**
ವಾರ್ಷಿಕ ಚಂದಾ	**100–00 ರೂ.**
(ವಿಶೇಷ ಸಂಚಿಕೆಯೊಂದಿಗೆ)	
ಸಂಸ್ಥೆಗಳಿಗೆ	**150–00 ರೂ.**

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ

2329, 12ನೇ ಮೈನ್, 2ನೇ ಹಂತ,
ವಿಜಯನಗರ, ಮೈಸೂರು – 570 017

ಪ್ರಾರಂಭ : 'ಮಾನುಷಿ' (1985ರಲ್ಲಿ),
ಅನಂತರ 'ಮಾನಸ',
ಈಗ 'ನಮ್ಮ ಮಾನಸ'

ಸಂಪಾದಕೀಯ

ಮಹಿಳೆಯರನ್ನು ಮನೆಗೆ ಕಳಿಸುವ ಹುನ್ನಾರ

ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಗೊಂದಲ ಎಬ್ಬಿಸಿ ಪಂಚಾಯ್ತಿ ಮಟ್ಟದಲ್ಲಿ ಶೇ. 50ರಷ್ಟು ಮೀಸಲಾತಿಯನ್ನು ಮಹಿಳೆಯರಿಗೆ ನೀಡಬೇಕೆಂಬ ಮಸೂದೆಯ ನಡುವೆ ಪ್ರಸ್ತುತ ರಾಜಕಾರಣದಲ್ಲಿ ಕ್ರಿಯಾಶೀಲರಾಗಿ ತೊಡಗಿಸಿಕೊಂಡ ಮಹಿಳೆಯರನ್ನು ಮೂಲೆಗುಂಪಾಗಿ ಸುತ್ತಿರುವುದು ಪುರುಷಪ್ರಧಾನ ರಾಜಕಾರಣದ ದುಷ್ಟತನವನ್ನು ಪ್ರತಿಬಿಂಬಿಸುತ್ತದೆ. ಇತ್ತೀಚೆಗೆ ಶೋಭಾ ಕರಂದ್ಲಾಜೆಯವರಿಂದ ರಾಜೀನಾಮೆ ಪಡೆಯಲು ನಡೆಸಿದ ಪ್ರಹಸನ ಇದಕ್ಕೆ ಉತ್ತಮ ನಿದರ್ಶನವಾಗಿದೆ. ತೋಳ್ಬಲ, ಹಣದ ಬಲ ಹಾಗೂ ಜಾತಿ ಅಂಶಗಳೇ ಪ್ರಧಾನ ವಾಗಿರುವ ಇಂದಿನ ರಾಜಕಾರಣದಲ್ಲಿ ಚಾಲ್ತಿಗೆ ಬಂದು, ಅಷ್ಟೇ ಕ್ಷಿಪ್ರವಾಗಿ ಮೂಲೆ ಗುಂಪಾಗುತ್ತಿರುವ ಮಹಿಳೆಯರು ನಮ್ಮ ಮುಂದಿದ್ದಾರೆ. ಭಾರತೀಯ ಜನತಾಪಕ್ಷವೂ ಸಹ ಮಹಿಳೆಯರನ್ನು ಮೂಲೆಗುಂಪು ಮಾಡುವಲ್ಲಿ ಮುಂಚೂಣಿಯಲ್ಲಿದೆ. ಉಮಾಭಾರತಿ, ವಸುಂಧರಾರಾಜೆ, ಒಂದು ಹಂತದಲ್ಲಿ ಸುಷ್ಮಾಸ್ವರಾಜ್, ಕರ್ನಾಟಕದಲ್ಲಿ ಶಕುಂತಲಾ, ಶೋಭಾ ಕರಂದ್ಲಾಜೆ ಮುಂತಾದವರ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಮಹಿಳಾ ಮೀಸಲಾತಿಯ ಪರವಾಗಿ ಮಾತನಾಡುವ ಭಾರತೀಯ ಜನತಾ ಪಕ್ಷದ ಸರ್ಕಾರದಲ್ಲಿ ಇಂದು ಮಹಿಳೆಯರನ್ನು ಪ್ರತಿನಿಧಿಸಲು ಏಕೈಕ ಮಹಿಳೆಯೂ ಮಂತ್ರಿಮಂಡಲದಲ್ಲಿ ಇಲ್ಲ!

ಹಿಂದೂಧರ್ಮ ಹಾಗೂ ಮಹಿಳೆಯರನ್ನು ಮಾತೃದೇವತೆಯಾಗಿ ವೈಭವೀಕರಿಸುತ್ತಾ ಮಹಿಳೆಯರ ಮತ ಬ್ಯಾಂಕನ್ನು ಸೃಷ್ಟಿಸುವ ಪ್ರಯತ್ನವನ್ನು ಭಾರತೀಯ ಜನತಾ ಪಕ್ಷ ಸದಾ ಮಾಡುತ್ತಲೇ ಬಂದಿದೆ. ಪಕ್ಷ ಕಟ್ಟುವ ತಳಮಟ್ಟದ ಸಂಘಟನೆಗಳಲ್ಲಿ ಮಹಿಳೆಯರು ಕ್ರಿಯಾಶೀಲರಾಗುವುದು, ಸಭೆ, ಸಮಾರಂಭಗಳಿಗೆ ಮಹಿಳೆಯರನ್ನು ಸೇರಿಸುವಂತಹ ಕಾರ್ಯಚಟುವಟಿಕೆಗಳಲ್ಲಿ ಮಹಿಳಾ ನಾಯಕತ್ವ ಪಕ್ಷಕ್ಕೆ ಅನಿವಾರ್ಯವಾಗುತ್ತದೆ. ಧರ್ಮ, ದೇವರು, ಸೌಂದರ್ಯಲಹರಿ, ಗೋಪೂಜೆ ಮುಂತಾದ ಧಾರ್ಮಿಕ ನೆಲೆಯ ಕಾರ್ಯಗಳ ಹಿನ್ನೆಲೆಯಲ್ಲಿ ಮಹಿಳೆಯರನ್ನು ಸಂಘಟಿಸಲು ಮಹಿಳಾ ನಾಯಕಿಯರೇ ಮುಂಚೂಣಿಯಲ್ಲಿರುವಂತೆ ನೋಡಿಕೊಳ್ಳಲಾಗಿದೆ.

ಹೀಗೆ, ಪಕ್ಷ ಕಟ್ಟುವುದಕ್ಕೆ ಪಕ್ಷವನ್ನು ಅಧಿಕಾರಕ್ಕೆ ತರುವುದಕ್ಕೆ ಮಹಿಳೆಯರ ಕೊಡುಗೆ ಅನಿವಾರ್ಯವಾಗುತ್ತದೆ. ಆದರೆ ಒಮ್ಮೆ ಪಕ್ಷ ಅಧಿಕಾರ ಪಡೆಯಿತೆಂದರೆ, ಹಾಗೂ ಆಡಳಿತ ನಡೆಸುವ ಸಂದರ್ಭದಲ್ಲಿ ಮಹಿಳೆಯರ ಕೊಡುಗೆ ಗೌಣವಾಗಿಬಿಡುತ್ತದೆ. ಮಹಿಳೆಯರು ಅಧಿಕಾರ ಪಡೆದರೆ, ಅದನ್ನು ಕಿತ್ತುಕೊಳ್ಳಲು, ಕೆಳಗಿಳಿಸಲು ಅಥವಾ ಮೂಲೆಗುಂಪು ಮಾಡಲು ನಡೆಸುವ ಹುನ್ನಾರಗಳು ಪುರುಷ ರಾಜಕಾರಣದ ಕುತ್ಸಿತತನ. ಚಾರಿತ್ರ್ಯಹೀನ ರಾಜಕಾರಣಿಗಳೇ ಮಹಿಳೆಯರ ಚಾರಿತ್ರ್ಯವಧೆ ಮಾಡುವುದು ವಿಪರ್ಯಾಸ. ರಾಜಾಸ್ಥಾನದಲ್ಲಿ ಪಕ್ಷದ ಸೋಲಿಗೆ ವಸುಂಧರಾರಾಜೆಯವರೇ ಕಾರಣವೆಂಬ ಆರೋಪವನ್ನು ಹೊರಿಸಿ, ಅವರಿಂದ ರಾಜೀನಾಮೆಯನ್ನು ಪಡೆಯಲಾಯಿತು. 'ರಾಜಾಸ್ಥಾನದಲ್ಲಿ ಪಕ್ಷದ ಸೋಲಿಗೆ ನಾನು ಕಾರಣವಾದರೆ, ರಾಷ್ಟ್ರೀಯಮಟ್ಟದಲ್ಲಿ ಪಕ್ಷದ ಹೀನಾಯವಾದ ಸೋಲಿಗೆ ರಾಷ್ಟ್ರೀಯ ನಾಯಕರು ಕಾರಣವಾಗುತ್ತಾರೆ, ಹಾಗಿದ್ದರೆ ಅವರೂ ರಾಜೀನಾಮೆ ನೀಡಬೇಕು', ಎಂಬ ಆಕೆಯ ಸವಾಲು ಪಕ್ಷದ ನಾಯಕರಲ್ಲಿ ಮುಜುಗರವನ್ನು ಉಂಟುಮಾಡಿತು. ಪಕ್ಷದ ಸಂಘಟನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಉಮಾಭಾರತಿ ಪಕ್ಷದಿಂದಲೇ ಹೊರಹೋಗುವುದು ಅನಿವಾರ್ಯವಾಯಿತು. ಶೋಭಾ ಸಹ 'ನಾನು ಮಾಡಿದ ತಪ್ಪೇನು ಎಂದು ಸಾಬೀತು ಮಾಡಲಿ' ಎಂಬ ಮಾತನ್ನು ಗಟ್ಟಿ ಧ್ವನಿಯಲ್ಲಿ ಹೇಳಿದರೂ ತಮ್ಮ ಕುರ್ಚಿಯನ್ನು ಭದ್ರ ಮಾಡಿಕೊಳ್ಳಲು ನಿರ್ಧರಿಸಿದ ನಾಯಕರ ಒತ್ತಡಕ್ಕೆ ಶೋಭಾ ಮಣಿಯಲೇ ಬೇಕಾಯಿತು. ಈ ಎಲ್ಲಾ ಮಹಿಳೆಯರಿಗೆ ಮರಳಿ ಮನೆಗೆ ಹೋಗಿ ಎಂಬ ಸಂದೇಶವನ್ನು ಪಕ್ಷದ ನಾಯಕರು ವಿವಿಧ ಸಂದರ್ಭದಲ್ಲಿ ನೀಡಿದ್ದಾರೆ.

ಕುಟುಂಬದಲ್ಲಿ ಮಹಿಳೆಯರು ನಿರ್ವಹಿಸುವ ಜವಾಬ್ದಾರಿಯನ್ನೇ ಸ್ವಲ್ಪ ವಿಸ್ತರಿಸಿಕೊಂಡು ರಾಜಕಾರಣದಲ್ಲೂ ಅದೇ ಮಾದರಿಯ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಹೋಗಬೇಕೆಂದು ಪುರುಷ ರಾಜಕಾರಣಿಗಳು ಬಯಸುತ್ತಾರೆ. ರಾಜಕೀಯದಲ್ಲೂ ಆಕೆಗೆ ದ್ವಿತೀಯ ದರ್ಜೆ. ಪುರುಷಪ್ರಧಾನ ಸಮಾಜಕ್ಕೂ ಅಧಿಕಾರಕ್ಕೂ ಇರುವ ನಂಟು ಬಹಳ ಸಂಕೀರ್ಣವಾದುದು. ಮಹಿಳೆಯರು ರಾಜಕೀಯ ಅಧಿಕಾರದಲ್ಲಿ ಪಾಲುದಾರರಾಗುವುದನ್ನು ಪುರುಷರಿಗೆ ಸಹಿಸಲು ಸಾಧ್ಯವಾಗುವುದಿಲ್ಲ. ಮಹಿಳೆ ಮತ್ತು ಅಧಿಕಾರದ ಪರಿಕಲ್ಪನೆಯನ್ನು ಒಪ್ಪಿಕೊಳ್ಳಲು ಪುರುಷರಿಗೆ ಅಹಂಕಾರ ಅಡ್ಡಬರುತ್ತದೆ.

ಮಹಿಳೆಯರು ಪುರುಷರಿಗೆ ಪೂರಕವಾದ ಪಾತ್ರವನ್ನು ವಹಿಸುತ್ತಾ ಬರುವುದು ಪಿತೃಪ್ರಧಾನ ಸಂಸ್ಕೃತಿಯ ಪೋಷಣೆಗೆ ನೆರವಾಗುತ್ತದೆ. ಹಾಗಾಗಿಯೇ ಆರ್.ಎಸ್.ಎಸ್. ನಾಯಕರು ಶೋಭಾರವರಿಗೆ ಸಾಮಾನ್ಯ ಕಾರ್ಯಕರ್ತರೊಂದಿಗೆ ಕೆಲಸ ಮಾಡಿ ವಿಶ್ವಾಸ ಗಳಿಸುವಂತೆ ಬುದ್ಧಿಮಾತನ್ನು ಹೇಳಿದ್ದಾರೆ. ಮಹಿಳೆಯರು ಸಹ ಕೃಪಾ ಪೋಷಿತ ರಾಜಕಾರಣವನ್ನು ಬಿಟ್ಟು ಸ್ವಸಾಮರ್ಥ್ಯದ ನೆಲೆಯಲ್ಲಿ ಬೆಳೆಯುವುದು, ಅಧಿಕಾರ ದೊರೆತಾಗ ಸೂಕ್ತವಾಗಿ ಹಾಗೂ ಸಮರ್ಥವಾಗಿ ನಿಭಾಯಿಸುವುದು ಮುಖ್ಯ. ಶತಮಾನಗಳಿಂದ ಶೋಷಿತರಾದ ಮಹಿಳೆಯರ ಹಾಗೂ ದಲಿತರ ಮೇಲೆ ವಿಶೇಷವಾದ ಹಾಗೂ ಹೆಚ್ಚಿನ ಜವಾಬ್ದಾರಿ ಇರುವುದನ್ನು ಚಾರಿತ್ರಿಕ ಕಾರಣಕ್ಕಾಗಿ ಮನಗಾಣಬೇಕಾಗಿದೆ.

* * *

ಮಹಳೆಯರು ಪ್ರಜ್ಞಾವಂತರಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸಿ, ಕೆಲವು ಕಾನೂನುಗಳ ಸವಲತ್ತನ್ನು ಪಡೆಯುತ್ತಿದ್ದಂತೆಯೇ ಮಹಿಳೆಯರ ವಿರುದ್ಧ ಹೋರಾಟ ನಡೆಸುವಂತಹ ಪುರುಷ ಸಂಘಟನೆಗಳು ಹೆಚ್ಚಾಗಿ ಕಾಣಿಸಿಕೊಳ್ಳತೊಡಗಿವೆ. ಮಹಿಳೆಯರ ಸ್ಥಾನ ಮನೆಯಲ್ಲಿಯೇ ಎಂಬಂತಹ ಧೋರಣೆಯನ್ನು ಇವರು ಪ್ರತಿಪಾದಿಸುತ್ತಾರೆ. ದೆಹಲಿಯ 'ಅಖಿಲ ಭಾರತೀಯ ಪತ್ನಿ ವಿರೋಧಿ ಮೋರ್ಚಾ'ದ ಮುಂಚೂಣಿಯಲ್ಲಿರುವ ರಾಮ್‌ಪ್ರಕಾಶ್ ಚುಗ್ 1988ರಲ್ಲಿ 'ಕ್ರೈಮ್ ಎಗೆನೆಸ್ಟ್ ಮ್ಯಾನ್' ಸೆಲ್‌ವೊಂದನ್ನು ಸ್ಥಾಪಿಸಿದ್ದಾರೆ. ಮೂರು ಬಾರಿ ಮದುವೆಯಾಗಿರುವ ಈತನ 'Husbands of the world unite, you have nothing to lose, but your wives' - ಎಂಬಂತಹ ಘೋಷಣೆ 'ಭಾರತೀಯ ಪತ್ನಿ ವಿರೋಧಿ ಮೋರ್ಚಾ'ದ ನಿಲುವಾಗಿದೆ. ಕರ್ನಾಟಕದಲ್ಲಿ ಕೂಡಾ ಇತ್ತೀಚೆಗೆ 'ಮಹಿಳೆಯರೇ ಮನೆಗೆ ಹಿಂತಿರುಗಿ, ಪುರುಷರ ನಿರುದ್ಯೋಗಕ್ಕೆ ಮಹಿಳೆಯರೇ ಕಾರಣ' ಎಂದು ಪ್ರತಿಭಟನೆ ನಡೆಸಲಾಗಿದೆ. ಕೊಯ್‌ಮತ್ತೂರ್, ಲಕ್ನೋದಲ್ಲಿ ಇರುವ 'ದಿ ಸೇವ್ ಇಂಡಿಯನ್ ಫ್ಯಾಮಿಲಿ' ಚಳವಳಿ ಕೌಟುಂಬಿಕ ದೌರ್ಜನ್ಯ ಕಾನೂನು, ವರದಕ್ಷಿಣೆ ಕಾನೂನು, ಲೈಂಗಿಕ ದೌರ್ಜನ್ಯದ ಕಾನೂನುಗಳು ದುರ್ಬಳಕೆಯಾಗುತ್ತಿವೆ. ಹಾಗಾಗಿ ಪುರುಷರು ಇದಕ್ಕೆ ಬಲಿಪಶುಗಳಾಗುತ್ತಿದ್ದಾರೆ ಎನ್ನುತ್ತದೆ. 'ನ್ಯಾಷನಲ್ ಕಮಿಷನ್ ಫಾರ್ ಮೆನ್' ಎಂಬುದು ಸ್ಥಾಪಿತವಾಗಬೇಕೆಂಬುದು ಇವರ ಬೇಡಿಕೆಯಾಗಿದೆ. ಒಟ್ಟಾಗಿ ಜಗತ್ತಿನಾದ್ಯಂತ ಅಲ್ಲಲ್ಲಿ ಕಂಡುಬರುತ್ತಿರುವ ಇಂತಹ ಪುರುಷ ಸಂಘಟನೆಗಳು ಮಹಿಳೆಯ ಸಮಾನತೆಯನ್ನು ಭೇಷರತ್ತಾಗಿ ವಿರೋಧಿಸುವ ನೆಲೆಗಟ್ಟಿನ ಮೇಲೆಯೇ ಕೆಲಸ ಮಾಡುತ್ತಿವೆ.

ಇಲ್ಲಿ ನಾವು ಸ್ಪಷ್ಟಪಡಿಸಬೇಕಾದ ವಿಚಾರಗಳೆಂದರೆ

- ಮಹಿಳಾ ಚಳವಳಿ ಪುರುಷರ ವಿರೋಧಿ ಚಳವಳಿಯಲ್ಲ. ಜಾತಿ, ವರ್ಗ, ವರ್ಣದ ವಿಶಾಲವಾದ ಚೌಕಟ್ಟಿನಲ್ಲಿ ಮಹಿಳಾ ಸಮಾನತೆಯ ಪ್ರಶ್ನೆಯನ್ನು ಅರ್ಥೈಸಿಕೊಳ್ಳಲಾಗಿದೆ. ಇಡಿಯ ವ್ಯವಸ್ಥೆಯ ವಿರುದ್ಧದ ಹೋರಾಟದ ತಾತ್ತ್ವಿಕ ನಿಲುವನ್ನು ಹೊಂದಿರುವ ಮಹಿಳಾ ಚಳವಳಿ ಈ ವ್ಯವಸ್ಥೆಯಲ್ಲಿ ಭಾಗಿಯಾಗಿರುವ ಪುರುಷ/ಮಹಿಳೆ ಇಬ್ಬರನ್ನೂ, ಪಿತೃಪ್ರಧಾನ ಮೌಲ್ಯ ಹೊಂದಿರುವ ಪ್ರತಿಯೊಂದನ್ನೂ ಈ ವ್ಯವಸ್ಥೆಯ ಭಾಗವಾಗಿಯೇ ನೋಡಿ ವಿರೋಧಿಸುತ್ತದೆ.
- ಮಹಿಳೆಯರ ಪರವಾಗಿ ಬಂದಿರುವ ಅನೇಕ ಕಾನೂನುಗಳಿಗೆ ಮಹಿಳೆಯರ ಚಾರಿತ್ರಿಕ ಹೋರಾಟದ ನೆಲೆ ಇದೆ. ಸಾಮುದಾಯಿಕವಾಗಿ ಮಹಿಳೆಯರು ಅನುಭವಿಸುತ್ತಿರುವ ಹಿಂಸೆಯನ್ನು ತಡೆಗಟ್ಟಲು ಬಂದಿರುವ ಅನೇಕ ಕಾನೂನುಗಳು ಅಲ್ಲಲ್ಲಿ ದುರ್ಬಳಕೆಯಾಗುತ್ತಿರುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಹಾಗೆಂದ ಮಾತ್ರಕ್ಕೆ ಮಹಿಳಾ ಪರವಾಗಿರುವ, ಮಹಿಳೆಯರಿಗೆ ರಕ್ಷಣೆ ನೀಡುತ್ತಿರುವ ಕೌಟುಂಬಿಕ ದೌರ್ಜನ್ಯ ಕಾನೂನು, ವರದಕ್ಷಿಣೆ ಕಾನೂನು, ಲೈಂಗಿಕ ದೌರ್ಜನ್ಯ ಕಾನೂನು ತೆಗೆದು ಹಾಕಬೇಕೆಂದು ಅರ್ಥವಲ್ಲ. ಇಲ್ಲಿರುವ ಏರು ಪೇರುಗಳನ್ನು ಗುರುತಿಸುವ ಕೆಲಸ ನಡೆಯಬೇಕಾಗಿದೆ.
- ಪಿತೃಪ್ರಧಾನ ಮೌಲ್ಯ ಹೊಂದಿರುವಂಥವರು ನಡೆಸುವ ಶೋಷಣೆಯ ಬೇರುಗಳನ್ನು ಗುರುತಿಸುವ, ನ್ಯಾಯದ ಪರವಾಗಿ ಹೋರಾಡುವ ಕೆಲಸವನ್ನು ಮಹಿಳಾ ಚಳವಳಿ ಎಂದಿನಿಂದಲೂ ಮಾಡುತ್ತಲೇ ಇದೆ.

ಮಹಿಳೆಯರನ್ನು ಮನೆಗೆ ಕಳಿಸುವ ಹುನ್ನಾರದಲ್ಲಿರುವ ಪುರುಷ ಸಂಘಟನೆಗಳು ಮಹಿಳಾ ಚಳವಳಿಯ ತಾತ್ತ್ವಿಕತೆಯನ್ನು, ಅದರ ವಿಶಾಲವಾದ ಚೌಕಟ್ಟನ್ನು ಅರ್ಥೈಸಿಕೊಂಡಲ್ಲಿ, ಮಾನವೀಯ ನೆಲೆಯ ಮೌಲ್ಯಗಳು ಸಮಾಜದ ಆರೋಗ್ಯಪೂರ್ಣ ಬೆಳವಣಿಗೆಗೆ ಅವಶ್ಯಕ ಎಂಬುದನ್ನು ಮನಗಾಣಬಲ್ಲರು. ಈ ದಿಕ್ಕಿನಲ್ಲಿ ಪುರುಷ ಸಂಘಟನೆಗಳು ಕೆಲಸ ಮಾಡಲಿ ಎಂದು ಆಶಿಸಬಹುದಾಗಿದೆ. ❑

ಒಳಗಿನ ಪುಟಗಳಲ್ಲಿ....



ಮಾನವ ಹಕ್ಕುಗಳ ಉಲ್ಲಂಘನೆ; ಮಹಿಳೆಯರೇ ಬಲಿ

● *ಸೇತುಮಾಧವ ಎಂ.ವಿ.*


Human Rights ಅಂದರೆ "Rights to which people are certified simply because they are human beings, regardless of their nationality, race, etchnicity gender or Religion". ಎಂದು ವ್ಯಾಖ್ಯಾನಿಸಲಾಗಿದೆ. ಇನ್ನೊಂದು ವ್ಯಾಖ್ಯೆಯ ಅನ್ವಯ "ಜನ್ಮಜಾತವಾಗಿರುವ ಹಕ್ಕುಗಳು" ಎಂದೂ ಹೇಳಲಾಗಿದೆ. ಈ ವ್ಯಾಖ್ಯಾನಗಳನ್ನು ಆಯಾ ದೇಶಗಳ ಸಂವಿಧಾನಗಳೂ ಅಂಗೀಕರಿಸಿವೆ. ಆದರೆ, ವಾಸ್ತವದಲ್ಲಿ ನಡೆಯುತ್ತಿರುವ ಚಿತ್ರಣವೇ ಬೇರೆ. ವಿಶ್ವದೆಲ್ಲೆಡೆ ಮಾನವ ಹಕ್ಕುಗಳ ಉಲ್ಲಂಘನೆ ಅವ್ಯಾಹತವಾಗಿ ನಡೆದಿದೆ. ರಾಜಕೀಯವಾಗಿ ಸರ್ಕಾರಗಳು ಎಲ್ಲ ದಮನಕಾರಿ ಸೂತ್ರವನ್ನೂ ಅಳವಡಿಸಿಕೊಂಡು, ಅಧಿಕೃತವಾಗಿ ಚಲಾಯಿಸುವ ಅಧಿಕಾರವಾಗಿ ಬಿಟ್ಟಿದೆ. ಹೀಗಾಗಿ, ಮಾನವನ ಮೂಲಭೂತ ಹಕ್ಕುಗಳು ಚ್ಯುತಿಗೊಂಡು, ಸರಕಾರದ ಅಮಾನುಷ ಪ್ರವೃತ್ತಿಗೆ ಸಾಕ್ಷಿಯಾಗುವ ಘಟನೆಗಳು ನಮ್ಮ ಕಣ್ಣೆದುರೇ ನಡೆಯುತ್ತಿವೆ. ಈ ಎಲ್ಲದರ ಪರಿಣಾಮ ಮಹಿಳೆಯ ಮೇಲೆ ಅಗಾಧವಾದ ಪ್ರಭಾವ ಬೀರುವುದರೊಂದಿಗೆ, ಅನಿವಾರ್ಯವಾಗಿ ತನ್ನ ಬದುಕು, ಹಕ್ಕುಗಳಿಗಾಗಿ ಹೋರಾಡಬೇಕಾಗಿದೆ. ಆದರೆ, ಶಸ್ತ್ರ ಸನ್ನದ್ಧವಾದ ಆಡಳಿತಾರೂಢ ಸರಕಾರಗಳು ಜನಪರ ಧೋರಣೆ, ಜನಶಕ್ತಿ, ಜನಪರ ಹೋರಾಟಗಳನ್ನು ಕಡೆಗಣಿಸಿ, ಕೆಲವರ ಹಿತಾಸಕ್ತಿಗಾಗಿ ಸಂಪನ್ಮೂಲಗಳಿಂದ ಹಿಡಿದು ಎಲ್ಲವನ್ನೂ ಹರಾಜು ಹಾಕಲು ಸಿದ್ಧವಾಗಿ ನಿಂತಿವೆ. ವಿಶೇಷ ಆರ್ಥಿಕ ವಲಯ 'ಅಭಿವೃದ್ಧಿ', ಆಂತರಿಕ ಬಿಕ್ಕಟ್ಟು... ಹೀಗೆ ಯಾವುದೋ ನೆಪದಲ್ಲಿ, ಬಹುಸಂಖ್ಯಾತ ಜನರ ಆಶೋತ್ತರಗಳನ್ನೂ ಮೂಲಭೂತ ಹಕ್ಕುಗಳನ್ನೂ ಕಡೆಗಣಿಸುವ ಪ್ರವೃತ್ತಿಯನ್ನು ಖಂಡಿಸಲೇ ಬೇಕಾಗಿದೆ.

ಇಂದು ಮಾನವನ ಹಕ್ಕುಗಳ ಉಲ್ಲಂಘನೆ ಕೇವಲ ಭಾರತದಲ್ಲಿ ಮಾತ್ರ ನಡೆಯುತ್ತಿಲ್ಲ. ಲ್ಯಾಟಿನ್ ಅಮೆರಿಕ ದೇಶಗಳು, ಪ್ಯಾಲೇಸ್ಟೀನ್, ಬರ್ಮಾ, ಭಾರತ... ಹೀಗೆ ಎಲ್ಲೆಡೆಯೂ ನಡೆಯುತ್ತಿರುವ ಮಾನವನ ಹಕ್ಕುಗಳ ದಮನತೆಯ ವಿರುದ್ಧ ಇಂದು ದನಿ ಎತ್ತಲೇ ಬೇಕಾಗಿದೆ. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ, ಮಹಿಳಾ ಆಯೋಗಗಳು ಈ ನಿಟ್ಟಿನಲ್ಲಿ ಏನು ಮಾಡುತ್ತಿವೆ ಎಂಬುದೂ ಪ್ರಶ್ನಾರ್ಹ. ಮಣಿಪುರ, ಭಾರತದೇಶದ ಈಶಾನ್ಯ ಭಾಗದಲ್ಲಿರುವ ಪುಟ್ಟರಾಜ್ಯ. ಏಳು ಅಕ್ಕ-ತಂಗಿಯರ ನಾಡೆಂದೇ ಪ್ರಚಲಿತವಾಗಿರುವ ಈಶಾನ್ಯ ಭಾಗದ ರಾಜ್ಯಗಳಲ್ಲಿ ಮಣಿಪುರವೂ ಒಂದು. ಕೇವಲ 20 ಲಕ್ಷ ವಿಭಿನ್ನ ಮೂಲನಿವಾಸಿ ಪಂಗಡಗಳಿಂದ ಕೂಡಿರುವ ಜನಸಂಖ್ಯೆಯ ಈ ನಾಡಿಗೆ 2000ಕ್ಕೂ ಹೆಚ್ಚಿನ ವರ್ಷದ ಇತಿಹಾಸವಿದೆ. ಮುಂಚಿನಿಂದಲೂ ಸ್ವತಂತ್ರ ಸಂಸ್ಥಾನವಾಗಿಯೇ ಇದ್ದ ಮಣಿಪುರ 1949ರಲ್ಲಿ ಭಾರತ ದೇಶದೊಂದಿಗೆ ವಿಲೀನಗೊಂಡಿತು. ಅಂದಿನಿಂದ ಇಂದಿನವರೆಗೂ ಅವ್ಯಾಹತವಾಗಿ,

ಮಾನವ ಹಕ್ಕುಗಳ ವ್ಯಾಪ್ತಿ

ಭಾರತದಲ್ಲಿ ಪ್ರಜೆಗಳಿಗೆ ಮೂಲಭೂತ ಹಕ್ಕುಗಳನ್ನು ನೀಡಲಾಗಿದ್ದರೂ, ವಿವಿಧ ಕ್ಷೇತ್ರ ಹಾಗೂ ವಿವಿಧ ಸಮುದಾಯಗಳಿಗೆ ಸಂಬಂಧ ಪಟ್ಟ ಮಾನವ ಹಕ್ಕುಗಳ ಉಲ್ಲಂಘನೆಯಾದ ಸಂದರ್ಭದಲ್ಲೆಲ್ಲ ಜನಸಮುದಾಯ ಹೋರಾಟವನ್ನು ನಡೆಸುತ್ತಲೇ ಬಂದಿದೆ. ಇಂತಹ ಹೋರಾಟಗಳ ಮೂಲಕ ನಿರ್ದಿಷ್ಟ ಸಮಸ್ಯೆಗಳನ್ನು ಸಮಾಜದ ಹಾಗೂ ಸರ್ಕಾರದ ಗಮನ ಸೆಳೆಯಲಾಗಿದೆ. ಹಾಗಾಗಿ ಕಾಲದಿಂದ ಕಾಲಕ್ಕೆ ಮಾನವ ಹಕ್ಕುಗಳ ವ್ಯಾಪ್ತಿ ವಿಸ್ತಾರವಾಗುತ್ತಲೇ ಬಂದಿದೆ. ನಿರಾಶ್ರಿತರ ಸಮಸ್ಯೆ, ಸಂಪನ್ಮೂಲಗಳ ಮೇಲೆ ಹಕ್ಕು, ಜೀವಿಸುವ ಹಕ್ಕು, ಸ್ಥಳಾಂತರದ ಸಮಸ್ಯೆ, ಅತ್ಯಾಚಾರ, ಮರಣ ದಂಡನೆ, ನಕಲಿ ಎನ್‌ಕೌಂಟರ್, ದುಡಿಯುವ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳ, ಸತಿ ಹೋಗುವುದು, ಬಾಲ್ಯವಿವಾಹ, ಅಭಿವ್ಯಕ್ತಿ ಸ್ವಾತಂತ್ರ್ಯ, ದಲಿತರ ಸಮಸ್ಯೆ, ವೈದ್ಯಕೀಯ ಸಂಶೋಧನೆ, ಕೌಟುಂಬಿಕ ದೌರ್ಜನ್ಯ, ಎಚ್.ಐ.ವಿ./ಏಯ್ಡ್ಸ್, ಪ್ರವಾಸೋದ್ಯಮ, ಮೂಲ ನಿವಾಸಿಗಳ ಸಮಸ್ಯೆ, ಬಾಲಕಾರ್ಮಿಕರು, ವೇಶ್ಯಾವೃತ್ತಿ, ನಿರ್ಲಕ್ಷಿತ ಮಕ್ಕಳು, ಕಾಣೆಯಾಗುವ ಮಹಿಳೆಯರು, ಮಾಹಿತಿ ಹಕ್ಕು ಹೀಗೆ ಹಲವಾರು ಸಮಸ್ಯೆಗಳು ಮಾನವ ಹಕ್ಕುಗಳ ವ್ಯಾಪ್ತಿಗೆ ಸೇರುತ್ತವೆ. ಹಕ್ಕು ಎಂಬುದರ ಪುನರ್‌ವ್ಯಾಖ್ಯಾನದ ಪ್ರಯತ್ನ ನಡೆಯುತ್ತಲೇ ಬಂದಿದೆ.

'ಶರ್ಮಿಳಾ ಐರೋಮ್'



ಕಳೆದ ಒಂದು ದಶಕದಿಂದ ಆಮರಾಣಂತ ಉಪವಾಸವನ್ನು ಕೈಗೊಂಡಿರುವ 36ರ ಆಸುಪಾಸಿನ ಮಹಿಳೆ 'ಶರ್ಮಿಳಾ ಐರೋಮ್', ತನ್ನ ಜನರಿಗೆ "ಮೆಯಟೊಂಬಿ" ಎಂದೇ ಪರಿಚಿತ. 2000 ಇಸವಿಯಲ್ಲಿ ಮಣಿಪುರದ ಈಶಾನ್ಯಭಾಗದ "ಮಾಲೋಮ್" ಎಂಬಲ್ಲಿ 10 ಜನ ನಾಗರಿಕರನ್ನು ಬಸ್‌ನಿಲ್ದಾಣದಲ್ಲಿ ಹಾಡಹಗಲೇ ಕೊಂದ ಸೇನೆ (ಅಸ್ಸಾಂ ರೈಫಲ್ಸ್)ಯ ದುಷ್ಟ ಪ್ರವೃತ್ತಿಯ ವಿರುದ್ಧ ಆಕೆ ಸಮರ ಸಾರಿದ್ದಾಳೆ. ಮೂಗಿನಿಂದ ಬಲವಂತವಾಗಿ ಆಕೆಗೆ ಆಹಾರ ನೀಡಿ, ಜೀವ ಉಳಿಸುವ ಪ್ರಯತ್ನ ನಡೆದಿದೆ. ಆದರೆ ಶರ್ಮಿಳಾ ತನ್ನ ದೃಢ ನಿಲುವಾದ, ಸೇನೆಯ ವಾಪಸಾತಿ ಹಾಗೂ ನೆಮ್ಮದಿಯ ನಾಗರಿಕ ಬದುಕು ಕೊಡಿ ಎಂಬ ಬೇಡಿಕೆಗಾಗಿ ತನ್ನ ಬದುಕನ್ನೇ ಮುಡಿಪಾಗಿಟ್ಟಿದ್ದಾಳೆ. ಮಣಿಪುರದ ಬಹುಸಂಖ್ಯಾತ "ಮೆಯಿಟೆಸ್" ಪಂಗಡಕ್ಕೆ ಸೇರಿರುವ ಶರ್ಮಿಳಾರ ಹೋರಾಟ ವಿಶ್ವದ ಗಮನ ಸೆಳೆಯಬಾರದೆಂಬ ಭಾರತದ ಎಲ್ಲ ಪ್ರಯತ್ನಗಳನ್ನು ಆಕೆ ಮುರಿದಿದ್ದಾಳೆ. 2007ರ ವಿಶ್ವ ಮಟ್ಟದ ಮಾನವಹಕ್ಕುಗಳ "ಗ್ವಾಂಜು ಮಾನವ ಹಕ್ಕು" ಪ್ರಶಸ್ತಿಯನ್ನೂ ಪಡೆದಿದ್ದಾಳೆ.

ಅವಿರತವಾಗಿ ಘರ್ಷಣೆಯೇ ಬದುಕಾಗಿಬಿಟ್ಟಿದೆ. ಕಳೆದ ಐದು ದಶಕಗಳಲ್ಲಿ 20,000ಕ್ಕೂ ಹೆಚ್ಚು ಮಂದಿ ಶಸಸ್ತ್ರ ದಾಳಿಯಲ್ಲಿ ಮಡಿದಿದ್ದಾರೆ. ಇಂದೂ 30ಕ್ಕೂ ಹೆಚ್ಚು ಸಶಸ್ತ್ರ ಗುಂಪುಗಳು ಸಕ್ರಿಯವಾಗಿವೆ. ಇದಲ್ಲದೆ, ಭಾರತೀಯ ಸೇನೆಯ ಡಜನ್‌ಗಟ್ಟಲೆ ಬೆಟಾಲಿಯನ್ ಗಳು ಹಾಗೂ ಭಾರತೀಯ ಪ್ಯಾರಾಮಿಲಿಟರಿ ಶಕ್ತಿಗಳು ಇಲ್ಲಿ ಝಾಂಡಾ ಊರಿವೆ.

ಭಾರತದ ಇತರೆ ರಾಜ್ಯಗಳಿಗೆ ಹೋಲಿಸಿದರೆ, ಮಣಿಪುರ ಅತಿ ಹೆಚ್ಚು ಜನಾಂಗೀಯ ಘರ್ಷಣಾತ್ಮಕ ರಾಜ್ಯವಾಗಿದೆ. ಅಧಿಕೃತ ಅಂಕಿ–ಅಂಶಗಳಂತೆ 2006ರ ಒಂದೇ ವರ್ಷದ ಅವಧಿಯಲ್ಲಿ 300ಕ್ಕೂ ಹೆಚ್ಚು ಮಂದಿ ಜೀವ ಕಳೆದುಕೊಂಡಿದ್ದಾರೆ. ಮಾನವ ಹಕ್ಕುಗಳ ಸಂಘಟನೆಯ ಅಂದಾಜಿನಂತೆ ಅಧಿಕೃತ ಸಂಖ್ಯೆಗಿಂತ ಹೆಚ್ಚೇ ಇದೆ. ಬಂದೂಕಿನ ಸದ್ದಿಲ್ಲಿ ಸಾಯದ ದಿವಸವೇ ಇಲ್ಲ ಎಂಬಂತಾಗಿದೆ.

ಒಟ್ಟು, 29 ವಿವಿಧ ಗುಂಪುಗಳಲ್ಲಿ ಹರಿದು ಹಂಚಿಹೋಗಿರುವ ಜನಸಂಖ್ಯೆಯಲ್ಲಿ 20ಕ್ಕೂ ಹೆಚ್ಚು ಗುಂಪುಗಳು ಸ್ವಾಯತ್ತತೆಯನ್ನು ಸಾಧಿಸುವ ಛಲದಲ್ಲಿ ಹಿಂಸಾತ್ಮಕ ಬದುಕಿಗೆ ರಹದಾರಿ ಮಾಡಿಕೊಟ್ಟಿದ್ದಾರೆ. ಸಮೃದ್ಧವಾಗಿರಬೇಕಿದ್ದ ಅಲ್ಲಿಯ ಆರ್ಥಿಕ ಪರಿಸ್ಥಿತಿ ನಿರುದ್ಯೋಗ, ವೇಶ್ಯಾವಾಟಿಕೆ, ಏಡ್ಸ್, ಮಾದಕ ವಸ್ತುಗಳ ಕಳ್ಳಸಾಗಾಣಿಕೆಯಿಂದಾಗಿ ದಿಕ್ಕು ತಪ್ಪಿದೆ.

ಆಂತರಿಕ ಜನಾಂಗೀಯ ಗುಂಪು ಘರ್ಷಣೆಗಳನ್ನೇ ಬಂಡವಾಳ ಮಾಡಿಕೊಂಡ ಸೇನಾಶಕ್ತಿ ಇಂದು ನಿತ್ಯ ಮಾರಣಹೋಮಕ್ಕೆ ನಾಂದಿ ಹಾಡಿದೆ. 'ಮಂಗೋಲಿಯನ್' ಚಹರೆ ಮಣಿಪುರಿಗಳದು. ಆಂತರಿಕ ಜನಾಂಗೀಯ ಘರ್ಷಣೆಯಿಂದ ಆರಂಭಗೊಂಡು ಅನ್ಯಭಾಷಿಗಳ ದಾಳಿಗೆ ನಲುಗಿ 1958ರ "ಸಶಸ್ತ್ರ ಪಡೆಯ ವಿಶೇಷ ಅಧಿಕಾರ'ದ ನೀತಿಯಿಂದ ಇಲ್ಲಿಯ ಜನತೆ ತತ್ತರಿಸಿಹೋಗಿದ್ದಾರೆ. ಇಂದು ಅನಿಶ್ಚಿತತೆಯಲ್ಲಿ ಜೀವನ ಕಳೆಯುವಂತಾಗಿದೆ. ಇವುಗಳ ಪ್ರಭಾವ ಮಹಿಳೆಯರ ಮೇಲೆ ಅತ್ಯಂತ ಗಾಢವಾಗಿ ತಟ್ಟಿದೆ. ಮೂಲಭೂತ ಹಕ್ಕುಗಳು ಗಾಳಿಗೆ ತೂರಿವೆ. ಅಮಾನುಷತೆ, ಕ್ರೌರ್ಯ, ಹಿಂಸೆ ನಿತ್ಯ ಬದುಕಿನ ಸಂಗಾತಿಗಳಾಗಿವೆ. ಒಂದೆಡೆ, ಯಾರು ಯಾರನ್ನು ಕೊಂದರೆಂದೇ ತಿಳಿಯದ ವಾತಾವರಣ, ಇನ್ನೊಂದೆಡೆ, ಅಧಿಕಾರದ ಪರಮಾವಧಿಯ ಸ್ವೇಚ್ಛಾಚಾರ, ಮಹಿಳೆಯರ ಮಾನಭಂಗ, ಹಿಂಸೆ, ಬಂದೂಕಿನ ನಳಿಗೆಗೆ ಬದುಕನ್ನು ಮೀಸಲಾಗಿಟ್ಟು ಅನ್ಯ ಮಾರ್ಗವಿಲ್ಲದೆ, ಹೋರಾಟದ ದಾರಿಯನ್ನು ತುಳಿಯಲೇ ಬೇಕಾಗಿದೆ. ಇಲ್ಲಿ ಮಾನವ ಹಕ್ಕುಗಳ ಹರಣವಾಗುತ್ತಿದೆ. ತತ್ಫಲವಾಗಿ ಊಹಿಸಲೂ ಸಾಧ್ಯವಾಗದ ಪ್ರತಿಭಟನೆಯ ಮಾದರಿಗಳು ರೂಪುಗೊಳ್ಳುತ್ತಿವೆ.

ಇದು ಮಣಿಪುರದಲ್ಲಿ ಮಾತ್ರವಲ್ಲ, ಸ್ವಗೌರವ ಕಾಪಾಡಿಕೊಳ್ಳಲು ಬದುಕಿಗಾಗಿ ಹೋರಾಟ ನಡೆಸುವ, ಅಭಿವೃದ್ಧಿಯ ಹೆಸರಿನಲ್ಲಿ ಮೂಲ ನಿವಾಸಿಗಳನ್ನು ಎತ್ತಂಗಡಿ ಮಾಡುವ ಅಧಿಕಾರಶಾಹಿ ಹುನ್ನಾರಗಳ ವಿರುದ್ಧ ದೇಶದ ಎಲ್ಲೆಡೆ ಹೋರಾಟಗಳು ನಡೆಯುತ್ತಿವೆ. ಎಲ್ಲ ಹೋರಾಟಗಳನ್ನೂ ಹತ್ತಿಕ್ಕಿ ಹಿತಾಸಕ್ತಿಗಳನ್ನು ಕಾಪಾಡಲು ಇಲ್ಲ ಸಲ್ಲದ ಆರೋಪಗಳನ್ನು ಹೊರಿಸಿ, ಮಾನವ ಹಕ್ಕುಗಳನ್ನು ಉಲ್ಲಂಘಿಸಿ ಅಮಾನವೀಯವಾಗಿ ಕತ್ತಲಕೂಪಕ್ಕೆ ತಳ್ಳಲಾಗುತ್ತಿದೆ.

ಇಂತಹ ಮೂಲಭೂತ ಮಾನವಹಕ್ಕುಗಳ ದಮನ ಕುರಿತ ವಸ್ತುವನ್ನೇ ಕೇಂದ್ರವಾಗಿಟ್ಟುಕೊಂಡ ಸಾಕ್ಷ್ಯಚಿತ್ರೋತ್ಸವವನ್ನು ಇದೇ ತಿಂಗಳ ನವೆಂಬರ್ 2, 4 ಮತ್ತು 5ರಂದು ಮಾನಸ ಮತ್ತು ಸುಚಿತ್ರಾ ಫಿಲ್ಮ್ ಸೊಸೈಟಿಯವರು ಜಂಟಿಯಾಗಿ ಸಂಘಟಿಸಿದ್ದು ಅತ್ಯಂತ ಪ್ರಸ್ತುತ ಹಾಗೂ ಔಚಿತ್ಯಪೂರ್ಣವಾಗಿತ್ತು. ಚಿತ್ರೋತ್ಸವದಲ್ಲಿ ಪ್ರದರ್ಶಿತಗೊಂಡ ಚಿತ್ರಗಳು: (i) Soldiers in sarong (ii) True lies in Manipur (iii) Development flows from the barrel of the gun (iv) Prisioners of conscience (v) Jashm -e- Azadi

"Soldiers in sarong" ಚಿತ್ರದಲ್ಲಿ ಮಣಿಪುರದ ಐತಿಹಾಸಿಕ ಹಿನ್ನೆಲೆಯನ್ನು ನೀಡುತ್ತಲೇ ವಾಸ್ತವದ ಚಿತ್ರಣವನ್ನು ಅತ್ಯಂತ ಪ್ರಭಾವಯುತವಾಗಿ ನಿರೂಪಿಸಲಾಗಿದೆ. 'ಸಾರೊಂಗ್' ಎನ್ನುವುದು ಮಣಿಪುರದ ಸಾಂಪ್ರದಾಯಿಕ ಉಡುಗೆಯ ಹೆಸರು. ಈಗಾಗಲೇ ನೀಡಿರುವ ಹಿನ್ನೆಲೆಯಲ್ಲಿ ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ಘರ್ಷಣೆ, ಅದನ್ನು ಹತ್ತಿಕ್ಕಲು ಸೇನೆ, ಪ್ಯಾರಾಮಿಲಿಟರಿ ಹಾಗೂ ಸ್ಥಳೀಯ ಪೊಲೀಸರು. ಇದರೊಂದಿಗೆ ಅಸ್ಸಾಂ ಹಾಗೂ ಮಣಿಪುರವನ್ನು 'ಗಲಭೆಪೀಡಿತ' ಪ್ರದೇಶವೆಂದು ಘೋಷಿಸಿ, ಸಶಸ್ತ್ರ ಸೇನಾ ಪಡೆಗೆ 'ವಿಶೇಷ ಅಧಿಕಾರ'ವನ್ನು ನೀಡಿರುವುದು ಸ್ಥಳೀಯರ ಬದುಕನ್ನು ನಿತ್ಯ ನರಕವಾಗಿಸಿದೆ. ಇದರಲ್ಲಿ ಭಾವನಾತ್ಮಕವಾಗಿ ಕೌಟುಂಬಿಕ ಜವಾಬ್ದಾರಿಯನ್ನು ಹೊತ್ತು ನಲುಗುತ್ತಿರುವುದು ಮಹಿಳೆ. ನಿರುದ್ಯೋಗಿ ಗಂಡಸರು ದುಶ್ಚಟಗಳ ದಾಸರಾಗಿ ಒಂದು ರೀತಿಯ ಸ್ಥಿತಪ್ರಜ್ಞರಂತಿದ್ದರೆ ಮಹಿಳೆ ಆತ್ಮಗೌರವವನ್ನು ಕಾಪಾಡಿಕೊಳ್ಳುತ್ತಾ, ಕುಟುಂಬದ ಆರ್ಥಿಕತೆಯನ್ನೂ ನಿರ್ವಹಿಸುತ್ತಾ ತನ್ನೆದುರೇ ನಡೆಯುವ ಅಮಾನುಷ ಪ್ರವೃತ್ತಿಯನ್ನು

ವಿರೋಧಿಸುವ ಹೋರಾಟಗಾರ್ತಿಯೂ ಆಗಿದ್ದಾಳೆ. 'ಮಾತೃಪ್ರಧಾನ' ವ್ಯವಸ್ಥೆಯ ಬುನಾದಿ ಬಿರುಕು ಬಿಟ್ಟಿದೆ. ಗಂಡ, ಸಹೋದರ, ಸಹೋದರಿ, ಹೆಂಡತಿ ಮಕ್ಕಳು ಯಾವುದೇ ಭೇದಭಾವವಿಲ್ಲದೆ ನಿರ್ದಾಕ್ಷಿಣ್ಯವಾಗಿ ಹತರಾಗುತ್ತಿದ್ದಾರೆ. ಮಹಿಳೆಯರ ಮಾನಭಂಗ ನೀರು ಕುಡಿದಷ್ಟು ಸಲೀಸಾಗಿಬಿಟ್ಟಿದೆ. ಇಷ್ಟೆಲ್ಲ ಕ್ರೌರ್ಯ ನಡೆಯುತ್ತಿದ್ದರೂ ಸೇನಾಧಿಕಾರಿಗಳಿಗೆ ಪ್ರಶಸ್ತಿಗಳನ್ನು ನೀಡಿ, ಗೌರವಿಸುವ ನಮ್ಮ ಆಡಳಿತಾರೂಢ ಪಕ್ಷಗಳು ಒಮ್ಮೆಯಾದರೂ 'ಮಾನವ ಹಕ್ಕುಗಳು ಎಂದರೇನು' ಎಂದು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡುತ್ತಾರೆಯೇ?

CNN-IBN ವಾರ್ತಾವಾಹಿನಿ 30 ನಿಮಿಷಗಳ ಅವಧಿಯ "ಮಣಿಪುರದ ನಿಜವಾದ ಸುಳ್ಳುಗಳು" ಎಂಬ ಚಿತ್ರವನ್ನು ನಿರ್ಮಿಸಿದೆ. ಅರಿಜಿತ್ ಸೇನ್ ಎಂಬ ವರದಿಗಾರ ಮಣಿಪುರದೆಲ್ಲೆಡೆ ಓಡಾಡಿ ಅಲ್ಲಿಯ ಪರಿಸ್ಥಿತಿಯನ್ನು, ಮಾನವ ಹಕ್ಕುಗಳ ತೀವ್ರ ದಮನವನ್ನು ಜಗತ್ತಿಗೆ ತೋರಿಸುವ ಪ್ರಯತ್ನ ಮಾಡಿದ್ದಾರೆ. ನಿತ್ಯನರಕ ಸದೃಶ ಬದುಕು ಹಾಗೂ ಸೇನಾಪಡೆಗೆ ನೀಡಲಾಗಿರುವ ವಿಶೇಷ ಅಧಿಕಾರವನ್ನು ವಿರೋಧಿಸಿ ಅಲ್ಲಿಯ ಜನರು ಪ್ರತಿಭಟಿಸುತ್ತಿದ್ದಾರೆ. ಅದರಲ್ಲಿ ಪ್ರಮುಖವಾಗಿ 10 ವರ್ಷಗಳಿಂದ ಆಮರಣಾಂತ ಉಪವಾಸ, ಪ್ರತಿಭಟನೆಯನ್ನು ನಡೆಸಿರುವ **ಶರ್ಮಿಳಾ ಐರೋಮ್** ಗಮನಾರ್ಹ.

"ಬಂದೂಕಿನ ನಳಿಗೆಗಳಿಂದ ಹರಿಯುತ್ತಿದೆ ಅಭಿವೃದ್ಧಿ" ಎಂಬ ಸಾಕ್ಷ್ಯಚಿತ್ರ ಮೂಲತಃ ಮೂಲನಿವಾಸಿಗಳ ಎತ್ತಂಗಡಿಯನ್ನು ಕುರಿತದ್ದಾಗಿದೆ. ಮಹಾರಾಷ್ಟ್ರ ಹಾಗೂ ಗುಜರಾತ್ ಗಡಿಯಲ್ಲಿ ನಿರ್ಮಿಸಲು ಹೊರಟಿರುವ ಬಂದರು, ಛತ್ತೀಸ್‌ಗಡದಲ್ಲಿ ನಿರ್ಮಿಸಲು ಆಯೋಜಿಸಿರುವ ಕಾರ್ಖಾನೆ, ಒರಿಸ್ಸಾ ರಾಜ್ಯದಲ್ಲಿ 'ಉತ್ಕಾಲ್ ಅಲ್ಯೂಮಿನಿಯಂ' ಕಂಪನಿಯು ಮೂಲನಿವಾಸಿಗಳನ್ನು ನಡೆಸಿಕೊಳ್ಳುವ ರೀತಿ, ಮಧ್ಯಪ್ರದೇಶದ ಬಸ್ತಾರ್‌ನಲ್ಲಿ ಅರಣ್ಯ ಇಲಾಖೆ ಹಮ್ಮಿಕೊಂಡಿರುವ ಅಭಿವೃದ್ಧಿ ಯೋಜನೆ... ಎಲ್ಲ ಕಡೆಯೂ ಜನಪರ ಹೋರಾಟಗಳ ಹತ್ತಿಕ್ಕುವಿಕೆ, ಜನಾಭಿಪ್ರಾಯಗಳಿಗೆ ಸಿಗದ ಮನ್ನಣೆ, ಮಾನವ ಹಕ್ಕುಗಳ ಉಲ್ಲಂಘನೆಯನ್ನು ನಿರೂಪಿಸುತ್ತದೆ.

"ಜಾಗೃತ ಕೈದಿಗಳು" 1978ರಲ್ಲಿ ನಿರ್ಮಿತವಾದ ಚಿತ್ರ. 1975ರಲ್ಲಿ ಘೋಷಿಸಿದ ತುರ್ತುಪರಿಸ್ಥಿತಿ ಸಮಯದಲ್ಲಿ ದೇಶಾದ್ಯಂತ ಸಾವಿರಾರು ರಾಜಕೀಯ ಧುರೀಣರನ್ನು ಬಂಧಿಸಿ, ವಿವಿಧ ಬಂದೀಖಾನೆಯಲ್ಲಿರಿಸಿದ ಘಟನೆ ಇಂದಿಗೂ ಹಸಿಹಸಿಯಾಗಿದೆ. ಸರ್ವೋದಯ ಚಳವಳಿಯ ನಾಯಕ ಜಯಪ್ರಕಾಶ್ ನಾರಾಯಣ ಅವರನ್ನೂ ಸೆರೆಮನೆಗೆ ತಳ್ಳಿ, ಮಾನವ ಹಕ್ಕುಗಳ ತೀವ್ರ ಉಲ್ಲಂಘನೆ, ತನ್ಮೂಲಕ ಇಂದಿರಾಗಾಂಧಿಯ ಪದಚ್ಯುತಿ. ಜನತಾ ಸರ್ಕಾರದ ಆಡಳಿತ ಬಂದರೂ, ರಾಜಕೀಯ ಕೈದಿಗಳು ಸರಳುಗಳ ಹಿಂದೆಯೇ ಇರಿಸಿದ್ದ ರಾಜಕೀಯ ಪಿತೂರಿಯನ್ನು ನವಿರಾಗಿ ನಿರೂಪಿಸುವ ಚಿತ್ರ ಇಂದಿಗೂ ಪ್ರಸ್ತುತ.

"ಜಶ್ನ್-ಇ-ಆಜಾದಿ" ಕಾಶ್ಮೀರದ ಭಯೋತ್ಪಾದನೆ, ಉಗ್ರಗಾಮಿಗಳು ಹಾಗೂ ಸೇನಾಪಡೆಗಳ ನಡುವೆ ಆಮ್ ಆದ್ಮಿಯ ಬದುಕು ಮೂರಾಬಟ್ಟೆಯಾಗಿರುವುದರ ಸವಿಸ್ತಾರದ ನಿರೂಪಣೆ ಇರುವ ಚಿತ್ರ. ಮಾನವಹಕ್ಕುಗಳ ಉಲ್ಲಂಘನೆ ಒಂದೆಡೆಯಾದರೆ, ನಿತ್ಯ ಬದುಕಿನ ಹೋರಾಟ ಇನ್ನೊಂದೆಡೆ. ಇವುಗಳ ಪರಿಣಾಮ ಬಹುತೇಕ ಮಹಿಳೆಯರ ಮೇಲೆ!

❑

ದರ್ಶನ



● *ಮ. ಶ್ರೀ. ಮುರಳೀಕೃಷ್ಣ*

ನಾಲ್ಕು ರಾಜಮಾರ್ಗಗಳು
ನಡುವೆ ತ್ರಿವರ್ಣ ದೀಪಗಳು
ಸಾಲುಗಟ್ಟಿ ನಿಲ್ಲುವ
ತರಾವರಿ ವಾಹನಗಳು
ರಂಗುರಂಗಿನ ಪೋಷಾಕುಗಳು
ಘಮ್ಮನೆ ಹರಡುವ ಸುವಾಸನೆ
ಹಲವು ಮುಖಗಳು
ಮುಖವಾಡಗಳು
ಪಕ್ಕದ ಮಾಲ್‌ನಲ್ಲಿ
ಬಿಕರಿಯಾಗುವ ಕನಸುಗಳು
ಜಗಮಗಿಸುವ ವಾತಾವರಣದಲ್ಲಿ
ವರ್ಣಲೋಕದ ಸೃಷ್ಟಿ
ನಿತ್ಯ ಮೆಂತ್ಯದ ಸೊಪ್ಪು
ಮಾರುವ ಹುಡುಗಿಗೆ
ಕೆಂಪು ದೀಪದ ಮೇಲೇ ಕಣ್ಣು
ಎಲ್ಲರಿಗೂ ಜಂಗಮರಾಗುವ ಧಾವಂತ
ಅವಳಿಗೋ ಸ್ಥಾವರವೇ ಇಷ್ಟ
ಬೇಕೆಯವರು ಸ್ಥಾವರವಾದಾಗಲೇ
ಅವಳು ಜಂಗಮಳಾಗುತ್ತಾಳೆ
ನಾಳೆಗಳನ್ನು ಕಾಣುತ್ತಾಳೆ

❑

ಅರುಣೋದಯ ಯುಗದ ಬರಹಗಾರ್ತಿಯರು

• *ಗಿರಿಜಾ ಶಾಸ್ತ್ರಿ*

ಸರೋಜಿನಿ ನಾಯ್ಡುರಂತಹ ಸ್ವಾತಂತ್ರ್ಯ ಹೋರಾಟಗಾರ ಮಹಿಳೆಯರ ಸಮಕಾಲೀನಳಾಗಿದ್ದ ಕಾರ್ನೀಲಿಯಾ ಸೊರಾಬ್ಜಿ ಬಗೆಗಿನ ಈ ಲೇಖನ ಸಮಾಜದ ಬಗೆಗಿನ ಆಕೆಯ ಕಳಕಳಿಯನ್ನು ಗುರುತಿಸುವುದರ ಜೊತೆಗೇ ಆಕೆಯಲ್ಲಿದ್ದ ವಸಾಹತುಶಾಹಿ ಮನಃಸ್ಥಿತಿಯನ್ನೂ ಬಿಚ್ಚಿಡುತ್ತದೆ. ಲಿಂಗಾಧರಿತ ಅಸಮಾನತೆಯ ಬಗ್ಗೆ ಹೋರಾಡುತ್ತಲೇ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಎತ್ತಿಹಿಡಿಯುತ್ತಿದ್ದ ಆಕೆಯ ನಿಲುವುಗಳು ರಾಷ್ಟ್ರೀಯ ಆಂದೋಲನದಲ್ಲಿದ್ದ ನಾಯಕ/ನಾಯಕಿಯರಿಂದ ಕಟು ಟೀಕೆಗೆ ಒಳಗಾಗಿವೆ. ಆಕೆಯಲ್ಲಿದ್ದ ಸ್ವ-ವಿಮರ್ಶೆಯ ಕೊರತೆ, ವೈರುಧ್ಯಗಳು ಹಾಗೂ ಹೆಣ್ಣುಮಕ್ಕಳ ಬಗೆಗಿನ ಆಕೆಯ ಕಾಳಜಿಗಳನ್ನು ಈ ಲೇಖನ ಒಟ್ಟಾಗಿ ಹಿಡಿದಿಡುತ್ತದೆ.



ಕಾರ್ನೀಲಿಯಾ ಸೊರಾಬ್ಜಿ (1866-1954)

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಪ್ರಾರಂಭದಲ್ಲಿಯೇ ಹುಟ್ಟಿಬಂದ ಮಹಿಳಾ ಪರ ಹೋರಾಟಗಾರ್ತಿ ಹಾಗೂ ಭಾರತದ ಮೊತ್ತ ಮೊದಲ ಬ್ಯಾರಿಸ್ಟರ್ ಎಂದರೆ ಕಾರ್ನೀಲಿಯಾ ಸೊರಾಬ್ಜಿಯೇ. "India Calling" (1934) ಎಂಬ ಅವಳ ಆತ್ಮಕಥೆಯನ್ನು ಸಂಪಾದಿಸಿ ಮರು ಪ್ರಕಾಶಿಸಿದ ಚಾಂದನಿ ಲೋಕುಗೆಯ ಪ್ರಕಾರ "ಅವಳ ಬದುಕೇ ಒಂದು ದೊಡ್ಡ ಸೇವಾಕ್ಷೇತ್ರ." ಭಾರತೀಯ ಜನಾನಾದಲ್ಲಿನ ಘೋಷಾ ಮಹಿಳೆಯರ ಉದ್ಧಾರಕ್ಕಾಗಿ ಕೈಗೊಂಡ ಆ ಸೇವೆಯೇ ಅವಳ ವೃತ್ತಿಯಾಯಿತು. 1866ರಲ್ಲಿ ನಾಸಿಕ್‌ನ ಶ್ರೀಮಂತ ಹಾಗೂ ಪಾಶ್ಚಾತ್ಯ ಆಧುನಿಕತೆಗೆ ತೆರೆದುಕೊಂಡ ಕುಟುಂಬವೊಂದರಲ್ಲಿ ಕಾರ್ನೀಲಿಯಾ ಜನಿಸಿದಳು. ಪ್ರಾರಂಭದಿಂದಲೂ ಅತಿ ಚುರುಕು ಬುದ್ಧಿಯ ಕಾರ್ನೀಲಿಯ ಓದುಬರಹದಲ್ಲಿ ತನ್ನ ಸಹಪಾಠಿಗಳೆಲ್ಲರಿಗಿಂತ ಮುಂದಿದ್ದಳು. 1883 ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಸೇರಿ, 1884ರಲ್ಲಿ ಆರ್ಟ್ಸ್ ಪರೀಕ್ಷೆಯಲ್ಲಿ ತೇರ್ಗಡೆಯಾದಳು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕೊಡಲಾಗುವ ಹಗ್ಲಿಂಗ್ ಶಿಷ್ಯವೇತನವನ್ನು ಮುಂಬಯಿ ವಿಶ್ವವಿದ್ಯಾಲಯದಿಂದ ಅವಳು ಪಡೆದುಕೊಳ್ಳುತ್ತಾಳೆ. 1887ರಲ್ಲಿ ಪುಣೆಯ ಡೆಕ್ಕನ್ ಕಾಲೇಜಿನಿಂದ ಪದವೀಧರೆಯಾದ ಮೊತ್ತಮೊದಲ ಮಹಿಳೆ ಕಾರ್ನೀಲಿಯಾ. ಹೀಗೆ ಅವಳು ಹಲವು ಪ್ರಥಮಗಳ ಒಡತಿಯಾಗುತ್ತಾ ಸಾಗುತ್ತಾಳೆ. ಬ್ರಿಟಿಷ್ ಭಾರತ ಸರಕಾರವು ಇಂಗ್ಲೆಂಡಿನಲ್ಲಿ ಅಧ್ಯಯನ ನಡೆಸಲು ಅವಳಿಗೆ ಶಿಷ್ಯ ವೇತನವನ್ನು ದಯಪಾಲಿಸುತ್ತದೆ. ಅದರೆ ಕೈಗೆ ಬಂದ ತುತ್ತು ಬಾಯಿಗೆ ಇಲ್ಲವಾಗುತ್ತದೆ. ಅವಳು ಮಹಿಳೆ ಎನ್ನುವ ಏಕಮಾತ್ರ ಕಾರಣದಿಂದಲೇ ಅವಳ ಶಿಷ್ಯವೇತನವನ್ನು ತಡೆಹಿಡಿಯಲಾಗುತ್ತದೆ. ಅಂದಿನಿಂದಲೇ ತನ್ನ ಹಕ್ಕುಗಳಿಗಾಗಿ ಅವಳ ಹೋರಾಟವು ಪ್ರಾರಂಭವಾಗುತ್ತದೆ. ಅನಂತರ ಅಹಮ್ಮದಾಬಾದಿನ ಕಾಲೇಜೊಂದರಲ್ಲಿ ಇಂಗ್ಲಿಷ್ ಸಾಹಿತ್ಯದ ಉಪನ್ಯಾಸಕಿಯಾಗಿ ತನ್ನ ವೃತ್ತಿಯನ್ನು ಪ್ರಾರಂಭಿಸುತ್ತಾಳೆ. ಇಷ್ಟರಲ್ಲಿಯೇ ಅವಳಿಗೆ 1889ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಿಂದ ವೈದ್ಯಕೀಯ ಶಿಕ್ಷಣಕ್ಕಾಗಿ ದೊರೆತ ಶಿಷ್ಯವೇತನವನ್ನು ಒಪ್ಪಿಕೊಂಡು ಇಂಗ್ಲೆಂಡಿಗೆ ಹೊರಡುತ್ತಾಳೆ. ಆದರೆ ಅವಳಿಗೆ ಆಶ್ರಯವನ್ನು ಕೊಡಲಿದ್ದವರು, ಹಾಗೂ ಇನ್ನಿತರ ಅಧಿಕಾರಿಗಳು ಅಧ್ಯಾಪನ ವೃತ್ತಿಗೆ ಅನುವಾಗುವಂತಹ ಸಾಹಿತ್ಯ ಮುಂತಾದ ವಿಷಯವನ್ನು ಅಭ್ಯಾಸಮಾಡಲು ಸೂಚಿಸುತ್ತಾರೆ. ಆದರೆ ಅವಳಿಗೆ ಕಾನೂನು ಶಿಕ್ಷಣವನ್ನು ಅಧ್ಯಯನ ಮಾಡಬೇಕೆಂಬ ಹಂಬಲವಿರುತ್ತದೆ. ಈ ಅಭಿರುಚಿಯು ಬಲವಾಗಲು ಅವಳ ಬಾಲ್ಯದ ಒಂದು ಘಟನೆಯು ಕಾರಣವಾಗಿರುತ್ತದೆ. ಕಾಥೇವಾಡ ವಿಧವೆಯೊಬ್ಬಳು ತನ್ನ ಆಸ್ತಿಯಿಂದ ವಂಚಿತಳಾಗಿ, ದುಃಖಿತಳಾಗಿ ಕಾರ್ನೀಲಿಯಾಳ ತಾಯಿಯ ಮುಂದೆ ಅಸಹಾಯಕಳಾಗಿ ನಿಂತಂತಹ ದೃಶ್ಯವು ಅವಳ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಬೀರಿರುತ್ತದೆ. ಇಂತಹ ವಂಚಿತ ಮಹಿಳೆಯರಿಗೆ ಏನಾದರೂ ಸಹಾಯ ಮಾಡಬೇಕೆಂಬ-ಅಂದು ಬೀಜರೂಪದಲ್ಲಿ ಹುದುಗಿದ್ದ-ಅಭಿಲಾಷೆಯು ಈಗ ಮೊಳಕೆಯೊಡೆಯಲು ಪ್ರಾರಂಭವಾಗುತ್ತದೆ. ಆದ್ದರಿಂದ ಕಾನೂನು ಶಿಕ್ಷಣಕ್ಕಾಗಿ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯಕ್ಕೆ ತನ್ನ ಕೋರಿಕೆಯನ್ನು ಸಲ್ಲಿಸುತ್ತಾಳೆ. ಆದರೆ ಅದು ನಿಷ್ಫಲವಾದರೂ ಅದೇ ವಿಶ್ವವಿದ್ಯಾಲಯದ ಕಾನೂನು ಕಾಲೇಜೊಂದರಲ್ಲಿ BCL ಪರೀಕ್ಷೆಗೆ ಕುಳಿತುಕೊಳ್ಳಲು ಅವಳಿಗೆ ಅನುಮತಿ ದೊರೆಯುತ್ತದೆ. ಆ ಪರೀಕ್ಷೆಯಲ್ಲಿ ತೇರ್ಗಡೆಯಾದರೂ ಅವಳಿಗೆ ಪುನಃ ಅದೇ ಮಹಿಳೆಯೆನ್ನುವ ಕಾರಣಕ್ಕಾಗಿಯೇ ಪದವಿಯು ದೊರೆಯದೇ ಹೋಗುತ್ತದೆ. ನಿರಾಶಳಾದ ಕಾರ್ನೀಲಿಯಾ 1894ರಲ್ಲಿ ಭಾರತಕ್ಕೆ ಮರಳಿ ಬರುತ್ತಾಳೆ. ಇದು ಅವಳ ವೈಯಕ್ತಿಕ ಹೋರಾಟದ ಒಂದು ಮಜಲಾದರೆ, ಭಾರತಕ್ಕೆ ಮರಳಿದನಂತರ ಅವಳ ಸಾರ್ವಜನಿಕ ನೆಲೆಯಲ್ಲಿನ ಹೋರಾಟದ

ಇನ್ನೊಂದು ಮಜಲು ಪ್ರಾರಂಭವಾಗುತ್ತದೆ. ಅವಳು ಸಾರ್ವಜನಿಕ ಕ್ಷೇತ್ರಕ್ಕೆ ಧುಮುಕಲು ಇಂಗ್ಲೆಂಡಿನ ಐರಿಷ್ ಲೇಖಕಿ ಉನಾಆರ್ಟ್‌ವೆಲ್ಡ್ ಟೇಲರ್ ಎನ್ನುವವಳ ಪ್ರಭಾವ ಕಾರಣವಾಗಿರುತ್ತದೆ. ಉನಾಟೇಲರಳು ಭಾರತ ಹಾಗೂ ಐರ್ಲೆಂಡುಗಳ ನಡುವೆ ಸಂಪ್ರದಾಯ, ಮೂಢನಂಬಿಕೆ, ಜಾನಪದಲೋಕ ಮುಂತಾದ ಸಾಂಸ್ಕೃತಿಕ ಸಾಮ್ಯತೆಯ ಕುರಿತಾದ ಅಧ್ಯಯನದಲ್ಲಿ ಆಸಕ್ತಳಾಗಿರುತ್ತಾಳೆ. "ಭಾರತದಲ್ಲಿನ ನನ್ನ ಆನಂತರದ ಶೋಧನೆಗಳಿಗೆ ಸ್ಫೂರ್ತಿಯೆಂದರೆ ಅವಳೇ" ಎಂದು ಕಾರ್ನೀಲಿಯಾ ತನ್ನ 'ಇಂಡಿಯಾ ಕಾಲಿಂಗ್' ಕೃತಿಯಲ್ಲಿ ಸ್ಪಷ್ಟವಾಗಿ ಉನಾಟೇಲರಳ ಬಗ್ಗೆ ಹೇಳಿಕೊಂಡಿದ್ದಾಳೆ. (ಕಾರ್ನೀಲಿಯಾ ಸೊರಾಬ್ಜಿ. ಪುಟ. 38. 2001) ಹೀಗೆ ಪಾಶ್ಚಾತ್ಯ ಆಲೋಚನೆ ಮತ್ತು ಪ್ರಭಾವಗಳನ್ನು ತನ್ನ ಮೈ ಮನಗಳ ತುಂಬ ತುಂಬಿಕೊಂಡು ಭಾರತದ ನೆಲದ ಮೇಲೆ ಕಾಲಿಟ್ಟ ಕಾರ್ನೀಲಿಯಾ ತನ್ನ ಸೇವೆಯನ್ನು ಮುಡಿಪಾಗಿರಿಸಿಕೊಳ್ಳುವುದು ಹೊಸ್ತಿಲಿನಾಚೆಯ ಸೂರ್ಯನನ್ನೇ ಕಾಣದ, ಮನೆಯ ಒಳಕೋಣೆಗಳಲ್ಲಿ, ಘೋಷಾದ ಕತ್ತಲಿನನಲ್ಲಿ ಬದುಕುತ್ತಿದ್ದ "ಫರದಾನಶೀನ್" (ಘೋಷಾದಲ್ಲಿರುವ ಜನಾನಾದ ಮಹಿಳೆಯರು)ಗಳಿಗೆ. ಮೊತ್ತ ಮೊದಲಿಗೆ ಘೋಷಾದಲ್ಲಿರುವ ನಿಜ ಅಂತಃಪುರವನ್ನು ಹೊರ ಜಗತ್ತಿಗೆ ತೆರೆದು ತೋರಿಸಿದ ಸಾಹಸ ಕಾರ್ನೀಲಿಯಾಳದು. ಶಕ್ತಿಯುತವಾದ ಪಿತೃಪ್ರಧಾನ ವ್ಯವಸ್ಥೆಯ ಹಿಡಿತದಲ್ಲಿ, ಪುರೋಹಿತಶಾಹಿಯ ಕುಯುಕ್ತಿಗಳಲ್ಲಿ, ಜನಾನಾದ ತಮ್ಮದೇ ಆದ ಸಂಪ್ರದಾಯ, ರೀತಿರಿವಾಜು ಹಾಗೂ ರಾಜಕಾರಣಗಳಲ್ಲಿ, ತಾವೇ ಆರೋಪಿಸಿಕೊಂಡ ಪರದೆಯ ಬಂಧನದಲ್ಲಿ ದಮ್ಮುಕಟ್ಟಿ ಮೂಗುಬ್ಬಸ ಪಡುತ್ತಿದ್ದ ಮಹಿಳೆಯರಿಗೆ ಮುಕ್ತವಾದ ಒಂದು ವಾತಾವರಣವನ್ನು ಕಲ್ಪಿಸಿಕೊಡಬೇಕೆಂದು ಹೊರಟ ಕಾರ್ನೀಲಿಯಾಳ ಪ್ರಯತ್ನಗಳು ಅವಳ ಸಾಹಸ ಹಾಗೂ ಆತ್ಮಸ್ಥೈರ್ಯದ ಪ್ರತೀಕವಾಗಿವೆ. ಇದು ಸದಾ ದೀನ ದರಿದ್ರರ ಸೇವೆಯಲ್ಲಿಯೇ ನಿರತಳಾಗಿ ಅವರ ಬಗೆಗೆ ಅತ್ಯಂತ ಕಾಳಜಿ ವಹಿಸುತ್ತಿದ್ದ ಕಾರ್ನೀಲಿಯಾಳ ತಾಯಿಯಿಂದಲೇ ಅವಳಿಗೆ ಬಂದ ಕೊಡುಗೆಯಾಗಿದೆ ಎಂದು ಕಾರ್ನೀಲಿಯಾಳೇ ತನ್ನ 'ಇಂಡಿಯಾ ಕಾಲಿಂಗ್' ಪುಸ್ತಕದಲ್ಲಿ ಹೇಳಿಕೊಳ್ಳುತ್ತಾಳೆ (ಅದೇ ಪು.19). ಸಮಾಜಸೇವೆಯಲ್ಲಿ ತೊಡಗಿಕೊಳ್ಳಲು ಕಾರ್ನೀಲಿಯಾ ಮಹಿಳೆಯರ ಹಕ್ಕುಗಳಿಗಾಗಿ ಹೋರಾಟವೊಂದನ್ನು ನಿರ್ಮಿಸಿಕೊಳ್ಳುವುದು ಅವಳ ವೈಯಕ್ತಿಕ ಹೋರಾಟದ ವಿಸ್ತೃತ ರೂಪವೇ ಆಗಿದೆ. ಇದು ಅವಳ ಸಾಹಸವನ್ನಲ್ಲದೆ ಘೋಷಾದಲ್ಲಿರುವ ಮಹಿಳೆಯರ ಅಸಹಾಯಕತೆಯನ್ನೂ, ಅಧಿಕಾರಯುತ ವ್ಯವಸ್ಥೆಯೊಂದರ ಪೊಳ್ಳುತನವನ್ನೂ ಬಯಲಾಗಿಸುತ್ತದೆ.

ಕಾರ್ನೀಲಿಯಾಳ 'ಇಂಡಿಯಾ ಕಾಲಿಂಗ್' ಮೇಲೆ ಹೇಳಿದ ಅಸಹಾಯಕತೆಗಳ ಮೊತ್ತವಾದ ಅನೇಕ ಮೊಕದ್ದಮೆಗಳ ದಾಖಲೆ ಯಾಗಿದೆ. ಮಕ್ಕಳಿಂದ, ಗಂಡಂದಿರಿಂದ, ಉಳಿದ ಇನ್ನಿತರ ಪುರುಷವರ್ಗ ದಿಂದ ವಂಚಿತರಾದ ಮಹಿಳೆಯರಿಗೆ ಕಾನೂನಿನ ಭದ್ರತೆಯನ್ನು ದೊರಕಿಸಿಕೊಡಲು ಹೋರಾಡಿದ ಕಾರ್ನೀಲಿಯಾಳಲ್ಲಿ ಅವಳ ವೈಯಕ್ತಿಕ ಯಶಸ್ಸೂ ಅಡಗಿದೆ. ಅಮರಪುರದ ರಾಣಿಯೊಬ್ಬಳನ್ನು ತನ್ನ ಪ್ರಾಣವನ್ನೇ ಪಣವಾಗಿಟ್ಟು ರಕ್ಷಿಸಿದ ಒಂದು ಸಾಹಸದ ಪ್ರಸಂಗವನ್ನು ಕಾರ್ನೀಲಿಯಾ ದಾಖಲಿಸುತ್ತಾಳೆ(ಪು. 87). ಅಮರಪುರದ ವಿದ್ಯಾವಂತಳಾದ ರಾಣಿಯು ಮೋಸಕ್ಕೆ ಒಳಗಾಗಿ ಒಬ್ಬ ಮೂರ್ಖಪತಿಯನ್ನು ಮದುವೆಯಾಗಿ, ಅನಂತರ ದಾಯಾದಿಗಳ ಕುತಂತ್ರಕ್ಕೆ ಸಿಕ್ಕಿ ಅತ್ಯಂತ ದಾರುಣವಾದ ಸ್ಥಿತಿಯಲ್ಲಿ ತನ್ನ ಮಗನೊಡನೆ ಯಾವುದೋ ಪಾಳು ಕೋಟೆಯೊಂದರಲ್ಲಿ ಬಂದಿಯಾಗಿರುವ ವಿಷಯವು ಕಾರ್ನೀಲಿಯಾಳಿಗೆ ತಿಳಿಯುತ್ತದೆ. ಅನೇಕ ಡಕಾಯಿತರ, ಕೊಲೆಗಾರರ, ವೈರಿಗಳ ಪಿತೂರಿಗಳ ನಡುವೆಯೂ ಅತ್ಯಂತ ಜಾಣ್ಮೆಯಿಂದ ಕಳ್ಳತನದಿಂದ ರಾಣಿಯನ್ನು ಪಾರುಮಾಡುತ್ತಾಳೆ. ಇಂತಹ ನೆಲೆಯಲ್ಲಿ ಅಸಹಾಯಕ ಮಹಿಳೆಯರಿಗೆ ಕೇವಲ ಕಾನೂನಿನ ರಕ್ಷಣೆಯನ್ನು ಮಾತ್ರವಲ್ಲದೆ ನೈತಿಕ ಸ್ಥೈರ್ಯವನ್ನು, ಆತ್ಮವಿಶ್ವಾಸವನ್ನು ತುಂಬುವುದರಲ್ಲಿ ನೆರವಾಗುತ್ತಾಳೆ. ಸರಕಾರವು ವಾರ್ಡ್ ಆಕ್ಟ್ ಕಾಯಿದೆಯನ್ನು 1904ರಲ್ಲಿ ಜಾರಿಗೆ ತರುವುದರ ಮೂಲಕ ವಿಧವೆಯರಿಗೆ ಕೆಲವು ಹಕ್ಕುಗಳನ್ನು ದಯಪಾಲಿಸಿತು. ಆಗ ಕಾರ್ನೀಲಿಯಾಳಿಗೆ ಹೊಸ ಆಶಾಕಿರಣವೊಂದು ದೊರೆಯುತ್ತದೆ. ಘೋಷಾದ ಹೆಣ್ಣುಮಕ್ಕಳ ಪರವಾಗಿ ಪುರುಷರೇ ಕಾರ್ಯನಿರ್ವಹಿಸುತ್ತಿದ್ದುದರಿಂದ ಅದರ ಪ್ರಾಮಾಣಿಕತೆಯು ಅನುಮಾನಾಸ್ಪದವಾದುದು. ಜನಾನಾದಲ್ಲಿರುವ ಹೆಣ್ಣುಮಕ್ಕಳು ತಾವೇ ನೇರವಾಗಿ ತಮ್ಮ ಹಕ್ಕುಗಳನ್ನು ಚಲಾಯಿಸಲು ಸಾಧ್ಯವಿಲ್ಲದುದರಿಂದ, ಸರಕಾರ ಹಾಗೂ ಜನಾನಾದ ನಡುವೆ ಮಧ್ಯವರ್ತಿಯಾಗಿ ಒಬ್ಬ ಮಹಿಳಾ ಅಧಿಕಾರಿಯ ಅಗತ್ಯವಿದೆಯೆಂದು ಬ್ರಿಟಿಷ್ ಸರಕಾರಕ್ಕೆ ಪತ್ರ ಬರೆಯುತ್ತಾಳೆ. ಆಗ ಮಹಿಳೆಯರು ನಿಸ್ಸಂಕೋಚವಾಗಿ ತಮ್ಮ ಹಕ್ಕುಗಳನ್ನು ನಿರ್ವಹಿಸಲು ಸಹಾಯಕವಾಗುವುದೆಂದು ಅವಳು ಆ ಮೂಲಕ ಅಭಿಪ್ರಾಯಪಟ್ಟಿದ್ದಳು. ಜನಾನಾದ ಮಹಿಳೆಯರ ಆರೋಗ್ಯ, ಶಿಕ್ಷಣ, ಇನ್ನಿತರ ಅವರ ವ್ಯವಹಾರ ಗಳನ್ನು ಇಂತಹ ಮಹಿಳಾ ಅಧಿಕಾರಿಯ ಸುಪರ್ದಿನಲ್ಲಿರಿಸುವುದು, ಜನಾನಾದ ಮಹಿಳೆಯರ ಸ್ವಭಾವಕ್ಕೆ ಸೂಕ್ತವಾದುದೆಂಬುದು ಅವಳ ಅಭಿಪ್ರಾಯವಾಗಿದ್ದಿತು. ಆದರೆ ಭಾರತದ ಬ್ರಿಟಿಷ್ ಸರ್ಕಾರವು ಕಾರ್ನೀಲಿಯಾಳ ಮಾತನ್ನು ಅನುಮೋದಿಸದೇ ಹೋಯಿತು. ಅನಂತರ 1906ರಲ್ಲಿ ಬಂಗಾಳ ಸರಕಾರವು ತನ್ನ ಪ್ರಾಂತ್ಯದ ಜನಾನಾಗಳ ವಾರ್ಡ್ ಅಧಿಕಾರಿಯಾಗಿ ಕೆಲಸ ನಿರ್ವಹಿಸಲು ಅವಳಿಗೇ ಕರೆ ನೀಡುತ್ತದೆ. ಬಂಗಾಳ, ಬಿಹಾರ, ಒರಿಸ್ಸಾ, ಅಸ್ಸಾಂ ಈ ನಾಲ್ಕೂ ಕ್ಷೇತ್ರದ ವಾರ್ಡುಗಳಿಗೆ ಅವಳ ಅಧಿಕಾರವು ಮೀಸಲಾಗಿರುತ್ತದೆ. ಆದರೆ ಕಾರ್ನೀಲಿಯಾ ಇಂಗ್ಲೆಂಡಿನಿಂದ ಕಾನೂನು ಪದವಿಯನ್ನು ಪಡೆಯದೆ, ಅಲ್ಲಿನ ಸರಕಾರದಿಂದ ನೇಮಕಗೊಳ್ಳದ ಕಾರಣ ಅವಳ ಸ್ಥಾನವನ್ನು ಭಾರತದ ಬ್ರಿಟಿಷ್ ಸರಕಾರವು ಕೆಳಗಿಳಿಸುತ್ತದೆ. ಯಾವ ವಿಶೇಷ ಸೌಲಭ್ಯಗಳೂ ಇಲ್ಲದೇ ಸಾಕಷ್ಟು ವೇತನವೂ ಇಲ್ಲದಂತಹ ಕೆಲಸವನ್ನು ಕಾರ್ನೀಲಿಯಾ ಒಪ್ಪಿಕೊಳ್ಳುವಲ್ಲಿ ಅವಳಿಗೆ ಆ ಕೆಲಸದ ಬಗ್ಗೆ ಇದ್ದ ಆಸಕ್ತಿ ಹಾಗೂ ನಿಷ್ಠೆಗಳೇ ಕಾರಣ. ಘೋಷಾ ಮಹಿಳೆಯರ ಕಷ್ಟ ಕೋಟಲೆಗಳ ನಿವಾರಣೆಯ ವಿರುದ್ಧದ ಹೋರಾಟದೊಂದಿಗೆ ಕಾರ್ನೀಲಿಯಾ ತನ್ನ ವೈಯಕ್ತಿಕ ಹೋರಾಟವನ್ನು ಗುರುತಿಸಿಕೊಳ್ಳುತ್ತಾಳೆ. ಆದುದರಿಂದಲೇ ಅವಳಿಗೆ ತನ್ನ ಕಾರ್ಯದಲ್ಲಿ ಒಂದು ರೀತಿಯ ತೃಪ್ತಿ ಹಾಗೂ ಆನಂದವಿದೆ. ಭಾರತೀಯ ಜನತೆಯನ್ನು ಅವರದೇ ಆದ ಹಿನ್ನೆಲೆಯಲ್ಲಿ ಅತಿ ನಿಕಟವಾಗಿ ಅಭ್ಯಾಸ ಮಾಡುವುದು ಒಂದು ರೀತಿಯ ರೋಚಕ ಅನುಭವವಾಗಿ ಅವಳಿಗೆ ಕಾಣುತ್ತದೆ. ಯಾರೂ ಪ್ರವೇಶಮಾಡದಂತಹ ಕನ್ನೆನೆಲದಲ್ಲಿ (off the beaten track) ಕಾರ್ಯಮಾಡುವಂತಹ ಸಾಹಸಮಯ ಸವಾಲುಗಳನ್ನು ಪ್ರೀತಿಯಿಂದ ಸ್ವೀಕರಿಸುತ್ತಾಳೆ. ಅವರ ಜಾನಪದಲೋಕ, ಪುರಾಣ, ನಂಬಿಕೆ, ಸಂಪ್ರದಾಯ, ಮಾಟ ಮಂತ್ರ, ಶಾಪಗಳು, ಪೂಜೆಗಳು ಇವುಗಳನ್ನು ಹತ್ತಿರದಿಂದ ಕಾಣುತ್ತಾಳೆ. ಈ ಎಲ್ಲದಕ್ಕಿಂತ ಮಿಗಿಲಾಗಿ ಜನಾನಾದ ಮಹಿಳೆಯರ ಸಾಹಚರ್ಯವು ಅವಳಿಗೆ ಬಹಳ ಸಂತೋಷವನ್ನು ಕೊಟ್ಟಿತೆಂದೂ ಅಂತಹ ಸಂತೋಷವೊಂದಕ್ಕೆ ಸಮನಾದ ಯಾವ ಸಂತೋಷವೂ ಇಲ್ಲವೆಂದೂ ಅವಳು ಅವರ ಜೊತೆಗೆ ಕಳೆದ ಸಂತೋಷದ ಕ್ಷಣಗಳನ್ನು ಉತ್ಸಾಹದಿಂದ ಹೇಳಿಕೊಳ್ಳುತ್ತಾಳೆ (ಅದೇ. ಪು. 133). ಇದು ಅವಳ ಮಹಿಳಾ ಪರವಾದ ಪ್ರಾಮಾಣಿಕ ಕಾಳಜಿಗಳಿಗೆ, ಅದನ್ನು ಕಾರ್ಯಗತಗೊಳಿಸುವಲ್ಲಿನ ಅವಳ ನಿಷ್ಕಾಮ ಕರ್ಮಕ್ಕೆ, ಸೇವಾಕಾಂಕ್ಷೆಗೆ ನಿದರ್ಶನಗಳಾಗಿವೆ. ಅವಳ ಹೋರಾಟವೆನ್ನುವುದು ಏಕಾಕಿಯಾಗಿರುವಂತಹದು. ಅವಳ ಸಹಾಯಕ್ಕೆಂದು ಅವಳಂತೆ ಕಾನೂನನ್ನು ಅಭ್ಯಾಸ ಮಾಡಿದ ಭಾರತೀಯ

ಯಾವ ಮಹಿಳೆಯೂ ಇಲ್ಲದೇ ಇದ್ದುದುದರ ಬಗ್ಗೆ ವಿಷಾದವನ್ನು ವ್ಯಕ್ತಪಡಿಸುತ್ತಾಳೆ. ಇಂಗ್ಲೆಂಡಿನಲ್ಲಿದ್ದ ಸ್ಕಾಟಿಷ್ ಮಹಿಳೆಯೊಬ್ಬಳು ಕಾರ್ನೀಲಿಯಾಳ ಸಹಾಯಕ್ಕೆಂದು ಭಾರತಕ್ಕೆ ಬರಲು ನಿರ್ಧರಿಸಿದ್ದರೂ, ಆಕೆಯು ಭಾರತೀಯ ಪ್ರಜೆಯಲ್ಲವೆನ್ನುವ ಕಾರಣದಿಂದ ಅವಳನ್ನು ನಿರಾಕರಿಸಲಾಗುತ್ತದೆ. ಹೀಗಾಗಿ ಕಾರ್ನೀಲಿಯಾಳ ಹೋರಾಟಕ್ಕೆ ಯಾವ ಬಲವೂ ದೊರಕದೆ ಅವಳು ಏಕಾಂಗಿಯಾಗಿಯೇ ಹೋರಾಡ ಬೇಕಾಗುತ್ತದೆ. ಈ ಹೋರಾಟದ ಪ್ರಕ್ರಿಯೆಯಲ್ಲಿ ಕಾರ್ನೀಲಿಯಾ ಕಂಡುಂಡ ಅನುಭವಗಳು ನೂರಾರು. ತನ್ನ ಪ್ರಯಾಣದಲ್ಲಿ ಸತಿ ಯಾಗುವುದರಿಂದ ತಪ್ಪಿಸಿಕೊಂಡ ಮಹಿಳೆಯೊಬ್ಬಳ ದಾರುಣಕತೆಯನ್ನು ದಾಖಲಿಸಿದ್ದಾಳೆ. ಕಾರ್ನೀಲಿಯಾಳ ಬಳಿಗೆ ಬಂದ ಆ ಮಹಿಳೆಯು ಬೆಂದು ಹೋಗಿರುವ ತನ್ನ ಸೊಟ್ಟ ಬೆರಳೊಂದನ್ನು ತೋರಿಸುತ್ತಾ "ಬೆಂದು ಹೋಗಿರುವ ಈ ನನ್ನ ಸೊಟ್ಟ ಬೆರಳುಗಳನ್ನು ನೋಡು, ನಾನು ಮೂರು ವರುಷದವಳಾಗಿನಿಂದಲೂ ನನಗೆ ಸುಟ್ಟುಕೊಳ್ಳುವ ತರಬೇತಿಯನ್ನು ಮನೆಯಲ್ಲಿ ನೀಡಲಾಗುತ್ತಿತ್ತು. ಕುದಿಯುವ ಅನ್ನವನ್ನು ನಾವು ಬರಿಗೈಗಳಿಂದಲೇ ತೊಳೆಸುತ್ತಿದ್ದೆವು. ಮುಂದೆ ಬೆಂಕಿಯಲ್ಲಿ ಸುಟ್ಟುಹೋಗುವುದನ್ನು ಸಹಿಸಿಕೊಳ್ಳಬೇಕಾದ ಪಾಠವನ್ನು ನಮಗೆ ಕಲಿಸಲಾಗುತ್ತಿತ್ತು. ಆದರೆ ನನ್ನ ಪತಿಯು ಗತಿಸುವ ಕಾಲಕ್ಕೆ ಕಾನೂನು ನನ್ನ ರಕ್ಷಣೆಗೆ ಬಂದದ್ದರಿಂದ ನಾನು ಸತಿ ಹೋಗುವುದರಿಂದ ಉಳಿದುಕೊಂಡೆ"(ಪು.135). ಆದರೆ ಈ ವಿಧವೆಯು ತನ್ನ ಮಗನಿಂದಲೂ ಸುಖ ಕಾಣದೆಹೋದ ವ್ಯಥೆಯನ್ನು ಅವಳ ಸಹಾಯಕ್ಕಾಗಿ ನಿಂತ ಕಾರ್ನೀಲಿಯ ಹೇಳುತ್ತಾಳೆ. ತಾಯಿಯ ಮರಣವನ್ನು ಬಹಿರಂಗವಾಗಿ ಆಶಿಸುತ್ತಿದ್ದ ಆಕೆಯ ಮಗ ಇನ್ನೂ ಜೀವಂತವಾಗಿರುವ ಅವಳನ್ನು ಸ್ಮಶಾನಕ್ಕೆ ಸುಡಲೆಂದು ಕರೆದೊಯ್ದ ಸುದ್ದಿಯು ಕಾರ್ನೀಲಿಯಾಳಿಗೆ ತಲುಪಿ ಅವಳು ಅಲ್ಲಿಗೆ ಬಂದು ಮಧ್ಯೆ ಪ್ರವೇಶ ಮಾಡಿದಾಗ ಸತಿಯಾಗುವ ಪುಣ್ಯದಿಂದ ಅವಳನ್ನು ತಪ್ಪಿಸಿದ್ದಕ್ಕಾಗಿ ಆಕ್ಷೇಪಿಸಿದಳೆಂದು ಕಾರ್ನೀಲಿಯಾ 'ಇಂಡಿಯಾ ಕಾಲಿಂಗ್' ಕೃತಿಯಲ್ಲಿ ಬರೆಯುತ್ತಾಳೆ. ಆದರೆ ಆಕೆ ಮಾರನೆಯ ದಿನವೇ ನಿಜವಾಗಿ ಸತ್ತಳೆಂದು ತಿಳಿದು ಕಾರ್ನೀಲಿಯಾ ಧಾವಿಸುವ ಹೊತ್ತಿಗೆ ಚಿತೆಗೆ ಬೆಂಕಿಯನ್ನು ಕೊಟ್ಟಿರುತ್ತಾರೆ. ಮರಣವನ್ನು ಅಧಿಕೃತವಾಗಿ ಪ್ರಮಾಣೀಕರಿಸಿಕೊಳ್ಳದೆ ಶವ ಸಂಸ್ಕಾರ ಮಾಡುವ ಬ್ರಾಹ್ಮಣರ ಅಮಾನವೀಯ ಪದ್ಧತಿಗಳನ್ನು ಆಕ್ಷೇಪಿಸುತ್ತಾ ಹೇಳುತ್ತಾಳೆ: "ಸಂಪ್ರದಾಯವಾದಿ ಜನರ ನಡುವೆ ಎಲ್ಲಿ ಮರಣಪ್ರಮಾಣದ (Death Certificate) ಪತ್ರಗಳ ಬಳಕೆಯು ಸಾಮಾನ್ಯ ಸಂಗತಿಯಲ್ಲವೋ, ಎಲ್ಲಿ ಸತ್ತವರನ್ನು ಕೂಡಲೇ ಸಂಸ್ಕಾರ ಮಾಡುವ ಆತುರವಿದೆಯೋ ಅಂತಹ ದೇಶದಲ್ಲಿ ಅಂತ್ಯಸಂಸ್ಕಾರಕ್ಕೆ ಒಳಗಾಗುವವರು ಜೀವಂತವಾಗಿದ್ದಿರಲಾರರು ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ" (ಅದೇ. ಪು. 137). ಬ್ರಾಹ್ಮಣರ ಶವವನ್ನು ಅನ್ಯರು ಮುಟ್ಟಬಾರದೆಂಬ ನಂಬಿಕೆಯು ಪ್ರಬಲವಾಗಿರುವ ಕಡೆ ಜೀವಂತವಾಗಿ ಅಂತ್ಯಕ್ರಿಯೆಗೆ ಒಳಗಾಗುವ ಮಹಿಳೆಯರ ಮೇಲಿನ ಅನ್ಯಾಯಗಳು ಬೆಳಕಿಗೆ ಬರದೇ ಹೋಗುವ ದುಃಸ್ಥಿತಿಯನ್ನಲ್ಲದೆ "ಸತಿ"ಯ ಹಿಂದಿರುವ ಕ್ರೌರ್ಯವನ್ನೂ ಬಯಲಾಗಿಸುತ್ತದೆ. ಸತಿ ವಿರೋಧದ ಕಾಯಿದೆಯು ಬಂದನಂತರ ಬಂಗಾಳದಲ್ಲಿ ಸತಿಹೋದ ಪ್ರಕರಣಗಳು ಅಧಿಕವಾದವು ಎಂದು ರಾಧಾಕುಮಾರ್ ಅವರು ತಮ್ಮ "History of Doing" ಕೃತಿಯಲ್ಲಿ ಅಭಿಪ್ರಾಯಪಟ್ಟಿರುವುದರ ಮಹತ್ವ ಅರಿವಾಗುತ್ತದೆ. ಸ್ಮಶಾನಕ್ಕೆ ಹೆಣವಾಗಿ ಹೋದವರು ಮರಳಿ ಮನೆಯೊಳಗೆ ಪ್ರವೇಶಿಸುವುದು ಅಶುಭವಾದಕಾರಣ, ಹಾಗೆ ಬದುಕುಳಿದ ಮಹಿಳೆಯರು ಹೆಣದ ಮೇಲಿನ ಹಣದಿಂದ ಪಿಶಾಚಿಗಳಂತೆ ಜೀವಿಸಬೇಕಾಗಿದ್ದ ಅಮಾನವೀಯ ಸಂಗತಿಗಳನ್ನು ತಮ್ಮ ಅನುಭವಗಳ ಮೂಲಕ ದಾಖಲಿಸುತ್ತಾಳೆ. ವಿಧವೆಯರ ಆಸ್ತಿಗಾಗಿ, ಆಭರಣಗಳಿಗಾಗಿ, ಹಕ್ಕು ಗಳಿಗಾಗಿ ತಾಯಂದಿರನ್ನ, ಶಿಶುಗಳನ್ನೂ ಬಿಡದೆ ಬಲಿ ತೆಗೆದುಕೊಳ್ಳುವ ಭಾರತೀಯ ಪಿತೃಪ್ರಧಾನ ವ್ಯವಸ್ಥೆಯ ಬಗೆಗೆ ಕಾರ್ನೀಲಿಯಾ ಕ್ರೋಧವ್ಯಕ್ತಪಡಿಸುತ್ತಾಳೆ.

ಐದು ವರುಷದ ಬಾಲಕನೊಬ್ಬ ತನ್ನ ತಾಯಿಯನ್ನು ಕಳೆದು ಕೊಂಡಾಗ ಅವಳ ಅಂತ್ಯಸಂಸ್ಕಾರವನ್ನು ಪುಟ್ಟ ಬಾಲಕನಿಂದಲೇ ಮಾಡಿಸಿ ಶವದ ಕಣ್ಣು ಹಾಗೂ ಉಗುರುಗಳಲ್ಲಿನ ಅಸ್ಥಿಯನ್ನು ಆ ಪುಟ್ಟಕೈಗಳೇ ತೆಗೆಯಬೇಕೆಂಬ ಬ್ರಾಹ್ಮಣರ ಹಟಕ್ಕೆ ಮಣಿಯದೆ ಬಾಲಕನ ತಾಯಿಗಿತ್ತ ವಚನದಂತೆ ಅವನನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳುವುದರ ಮೂಲಕ ಸಂಪ್ರದಾಯವಾದಿಗಳೆಲ್ಲರ ವಿರೋಧ ಕಟ್ಟಿಕೊಳ್ಳುತ್ತಾಳೆ ಕಾರ್ನೀಲಿಯಾ. ಆದರೆ ಸಾವಿನ ಸಂದರ್ಭದ ಅಮಾನವೀಯ ಆಚರಣೆಗಳ ಅಘಾತದಿಂದ ಒಂದು ಮಗುವನ್ನು ಪಾರುಮಾಡಿದ ತೃಪ್ತಿ ಲಭಿಸಿತೆಂದು ಅವಳು ಹೇಳಿಕೊಳ್ಳುತ್ತಾಳೆ (ಪು. 137).

ಜನಾನಾದ ಮಹಿಳೆಯರ ನಿಷ್ಕಪಟತೆಯನ್ನು ಪ್ರಶಂಸಿಸುತ್ತಾ, ಅವರ ಅಜ್ಞಾನವನ್ನು ಖಂಡಿಸಿ ಅವರಲ್ಲಿ ಅರಿವನ್ನು ಮೂಡಿಸುವಂತಹ ಸುಧಾರಣೆಯ ಕಾರ್ಯವನ್ನೂ ಮಾಡುತ್ತಾಳೆ. ಅತೀವ ಜ್ವರದ ತಾಪ ದಿಂದ ಬಳಲುತ್ತಿದ್ದ ಒಬ್ಬ ಹುಡುಗಿಗೆ ದೆವ್ವದಪೀಡೆ ಎಂಬ ಕಾರಣದಿಂದ ಮಾಂತ್ರಿಕ ಚಿಕಿತ್ಸೆಯನ್ನು ಕೊಡಲನುವಾದ ಮಹಿಳೆಯರನ್ನು ತಡೆದು ವೈದ್ಯರಿಂದ ಅವಳಿಗೆ ಉಪಚಾರ ಮಾಡಿಸುವುದರ ಮೂಲಕ ಅನೇಕ ಪಂಡಿತ ಪುರೋಹಿತರ ಕ್ರೋಧಕ್ಕೆ ಪಾತ್ರಳಾಗುತ್ತಾಳೆ. ಹಾಗೆಯೆ ಒಬ್ಬ ಎಳೆವಯಸ್ಸಿನ ಗರ್ಭಿಣಿ ಹುಡುಗಿಯನ್ನು ಕೂಡಾ ಇಂತಹುದೇ ಅಜ್ಞಾನದಿಂದ ಪಾರುಮಾಡುತ್ತಾಳೆ. ಹೀಗೆ ಜನಾನಾದ ಮಹಿಳೆಯರ ಮೂರ್ಖತನ, ಅಂಧಶ್ರದ್ಧೆ, ಸಾಂಪ್ರದಾಯಕತೆಗಳಿಗೆ ಸವಾಲಾಗಿ ನಿಲ್ಲುವ ಕಾರ್ನೀಲಿಯಾ ಕೇವಲ ಒಬ್ಬ ವಕೀಲಳಾಗಿ ಮಾತ್ರ ಕೆಲಸಮಾಡುವುದಿಲ್ಲ. ಅವಳ ಹೋರಾಟವೆನ್ನುವುದು ಘೋಷಾದಲ್ಲಿರುವ ಮಹಿಳೆಯರ ಅಂಧಶ್ರದ್ಧೆಯ ವಿರುದ್ಧ ಹಾಗೂ ಅದನ್ನು ಬಲಪಡಿಸುತ್ತಿರುವ ಭಾರತೀಯ ಪಿತೃಪ್ರಧಾನ ವ್ಯವಸ್ಥೆಯ ಬಗೆಗೇ ಆಗಿದೆ.

ಕಾರ್ನೀಲಿಯಾಳ ವೈಯಕ್ತಿಕ ಹೋರಾಟವೆಂಬುದೂ ಇದರ ಜೊತೆಜೊತೆಗೆ ನಡೆದೇ ಇದ್ದಿತು. ಭಾರತದಲ್ಲಿ ಮತ್ತೊಮ್ಮೆ ಕಾನೂನಿನ ಪರೀಕ್ಷೆಗೆ ಕುಳಿತು ಉತ್ತೀರ್ಣಳಾದರೂ ಆಕೆಗೆ "ಬಾರ್"ನಲ್ಲಿ ತನ್ನ ಹೆಸರನ್ನು ನೋಂದಾಯಿಸಲು ಪರವಾನಗಿ ದೊರೆಯದೇ ಹೋಯಿತು. ಇದಕ್ಕೆ ಕಾರಣ, ಇಂಗ್ಲೆಂಡಿನ ಮಹಿಳೆಯರಿಗೆ ಇಂತಹ ಪಾತ್ರವೊಂದು ದೊರಕುವ ಮೊದಲೇ ಭಾರತೀಯ ಮಹಿಳೆಗೆ ದಯಪಾಲಿಸುವುದು, ಬ್ರಿಟಿಷ್ ಸರಕಾರದ ಅಹಮಿಕೆಗೆ ಸವಾಲಿನ ಪ್ರಶ್ನೆಯಾಗಿದ್ದಿತು. ಕೊನೆಗೆ 1919ರಲ್ಲಿ ಭಾರತೀಯ ಮಹಿಳೆಯರಿಗೆ "ಬಾರ್ ಅಸೋಸಿಯೇಷನ್ನಿ"ನಲ್ಲಿ ಪ್ರವೇಶವನ್ನು ತೆರೆಯಲಾಗುತ್ತದೆ. ಹೀಗಾಗಿ ಕಾರ್ನೀಲಿಯಾ 1892ರಲ್ಲಿಯೇ ಕಾನೂನು ಪರೀಕ್ಷೆಯಲ್ಲಿ ಉತ್ತೀರ್ಣಳಾಗಿದ್ದರೂ, ಅವಳಿಗೆ ಅಧಿಕೃತವಾಗಿ ಮೊಕದ್ದಮೆಗಳನ್ನು ನಡೆಸುವ ಹಕ್ಕು ದೊರೆಯುವುದು

> *ಹೆಣ್ಣಿನ ಸಮಸ್ಯೆಯ ಉಗಮ ಗಮನಿಸಬೇಕು. ಹೆಣ್ಣಿನ ಶತ್ರು ಪುರುಷನಲ್ಲ. ಹೆಣ್ಣುಗಂಡಿನ ಅಸಮಾನತೆ ಆತ್ಯಂತಿಕವಾದ ವಿಧಿಯೂ ಅಲ್ಲ. ಅದು ಅಂತಿಮವಾಗಿ ದೇವರೇ ಕೊಟ್ಟ ತೀರ್ಪು ಎಂದೂ ಅದೇ ನಿರ್ಣಾಯಕ ಎಂದೂ ಕೈಕಟ್ಟಿ ಕೂರಬೇಕಿಲ್ಲ.*
> *–ಮಾನಸ*

1919ರ ಅನಂತರವೇ. ಅದೇ ವರುಷ ಅಲಹಾಬಾದಿನ ಹೈಕೋರ್ಟಿನಲ್ಲಿ ತನ್ನ ಹೆಸರನ್ನು ಕಾರ್ನೀಲಿಯಾ ನೋಂದಾಯಿಸುವುದರ ಮೂಲಕ ಭಾರತದ ಮಹಿಳೆಯರಲ್ಲಿ ಮೊತ್ತಮೊದಲನೆಯ ಬ್ಯಾರಿಸ್ಟರ್ ಆಗಿ ನೇಮಕವಾಗುತ್ತಾಳೆ. ಇದಕ್ಕಾಗಿ ಸುಮಾರು ಮೂರು ದಶಕಗಳ ಕಾಲ ಹೋರಾಡಿದ ಕಾರ್ನೀಲಿಯಾಳ ಹೋರಾಟಕ್ಕೆ ತಡವಾಗಿಯೇ ಆದರೂ ಸಿಕ್ಕ ಈ ಪ್ರತಿಫಲವು ಭಾರತೀಯ ಮಹಿಳಾ ಇತಿಹಾಸದ ಒಂದು ಮಹತ್ವದ ಘಟನೆಯಾಗಿದೆ. ಹೀಗಿದ್ದೂ ಅವಳಿಗೆ ಪದವಿಪತ್ರ ದೊರಕುವುದು ಮಾತ್ರ 1922ರಲ್ಲಿ ನಡೆದ ಘಟಿಕೋತ್ಸವದಲ್ಲಿಯೇ.

ಕಾರ್ನೀಲಿಯಾಳ ಮಹಿಳಾ ಪರವಾದ ಸಾಧನೆಗಳನ್ನು ಗಮನದಲ್ಲಿಟ್ಟುಕೊಂಡೂ ಅವಳ ಆಲೋಚನೆಗಳಲ್ಲಿದ್ದ ಅನೇಕ ಕುಂದುಕೊರತೆಗಳನ್ನು ಗಮನಿಸುವುದು ಮುಖ್ಯವಾಗುತ್ತದೆ. ಕಾರ್ನೀಲಿಯಾ ಪಾರ್ಸಿ ಸಾಮಾನ್ಯಜನತೆಯಿಂದ ಹೊರತುಪಡಿಸಿ ಪಾರ್ಸಿ ಶ್ರೀಮಂತ ಪಾಶ್ಚಾತ್ಯೀಕರಣಕ್ಕೆ ಒಳಗಾದ ವರ್ಗದೊಂದಿಗೆ ಹಾಗೂ ದೇಶಿ ಕ್ರಿಶ್ಚಿಯನ್ನರೊಂದಿಗೆ ತನ್ನನ್ನು ಗುರುತಿಸಿಕೊಂಡಿದ್ದರಿಂದ ಅವಳ ಮನೋಧರ್ಮವನ್ನು ರೂಪಿಸಿದುದು ನಿಯಂತ್ರಿಸಿದುದು ವಸಾಹತುಶಾಹಿ ದೃಷ್ಟಿಕೋನವೇ ಆಗಿದ್ದಿತು. ಭಾರತೀಯ ಶ್ರೀಮಂತ ವರ್ಗದವರಿಗೆ ಪಾಶ್ಚಾತ್ಯ ವಿದ್ಯಾಭ್ಯಾಸಕ್ಕೆ ಸುಲಭವಾಗಿ ತೆರೆದುಕೊಂಡಂತೆ ಆಂಗ್ಲ ವಾತಾವರಣಕ್ಕೂ ಅಷ್ಟೇ ಸುಲಭವಾಗಿ ಒಗ್ಗಿಕೊಳ್ಳುವುದು ಸಾಧ್ಯವಾಯಿತು. ಆಳುವ ವರ್ಗಕ್ಕೆ ಸೇರಿದ ಅವರು ಇನ್ನೊಂದು ಆಳುವ (ವಸಾಹತುಶಾಹಿ) ವರ್ಗದ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಲು, ಅವರೊಡನೆ ತಮ್ಮನ್ನು ಗುರುತಿಸಿಕೊಳ್ಳಲು ಕೂಡಾ ಬಹಳ ಸುಲಭವಾಯಿತು. ಆಧುನಿಕತೆಯ ಭವ್ಯತೆಯ ಎದುರು ನಿಬ್ಬೆರಗಾದ ಅವರಿಗೆ ಭಾರತೀಯವಾದುದರಲ್ಲೆಲ್ಲಾ ಬರೀ ಕುಂದುಕೊರತೆಗಳೇ ಕಾಣಿಸಿದವು. ಕಾರ್ನೀಲಿಯಾ ಇಂತಹ ಒಂದು ವರ್ಗಕ್ಕೆ ಸೇರಿದವಳಾದುದರಿಂದ ಅವಳಿಗೂ ಸಹ ಇಂಗ್ಲೆಂಡು ಒಂದು ಸ್ವರ್ಗೀಯ ಭೂಮಿಯಾಗಿ ಕಂಡಿತು. ಆಕ್ಸ್‌ಫರ್ಡ್ ಅವಳ ಜೀವನದ ಪರಮೋಚ್ಚ ಗಮ್ಯವಾಯಿತು. ಇಂಗ್ಲೆಂಡ್‌ನ ನದಿ, ಬೆಟ್ಟ, ಹಸಿರು ಅಲ್ಲದೆ, ಸ್ನೇಹಶೀಲರಾದ ಸ್ವಲ್ಪ ಹೆಚ್ಚಾಗಿಯೇ ಸಜ್ಜನರಾಗಿ ಕಂಡ ಅಲ್ಲಿನ ಜನಸಮೂಹ ಇವೆಲ್ಲವೂ ಅದ್ಭುತವಾಗಿ ಕಾಣಿಸಿತು. ರೊಮ್ಯಾಂಟಿಕ್ ಧೋರಣೆಯಿಂದಲೇ ಇವುಗಳನ್ನೆಲ್ಲಾ ಕಾಣುವ ಕಾರ್ನೀಲಿಯಾ ಭಾರತದಲ್ಲಿದ್ದರೂ ಥೇಮ್ಸ್ ನದಿಯ ಸುತ್ತಲೇ ಗಿರಕಿ ಹೊಡೆಯುತ್ತಾಳೆ. "ಇಳಿಜಾರಾದ ದಡಗಳಿಂದ, ಸುಂದರ ಮನೆಗಳು ಹಾಗೂ ಹೂದೋಟಗಳಿಂದ ಕೂಡಿದ ಥೇಮ್ಸ್‌ನಂತಹ ನದಿಯೊಂದು ಪ್ರಪಂಚದಲ್ಲಿರಲು ಸಾಧ್ಯವೇ" (ಅದೇ ಪು.33) ಎಂದು ತನ್ನ 'ಇಂಡಿಯಾ ಕಾಲಿಂಗ್' ಕೃತಿಯಲ್ಲಿ ಆಶ್ಚರ್ಯಪಡುತ್ತಾಳೆ. ಅವಳಿಗೆ ಇರುವ ಗೆಳತಿಯರೆಲ್ಲಾ ಇಂಗ್ಲಿಷರೇ. ತಪ್ಪಿಕೂಡ ಒಬ್ಬ ಭಾರತೀಯ ಗೆಳತಿಯ ಹೆಸರನ್ನೂ ಅವಳು ಪ್ರಸ್ತಾಪಿಸುವುದಿಲ್ಲ. "ಜನಾನಾಗಳಲ್ಲಿಯ ಈ ನನ್ನ ಅನುಭವಗಳನ್ನು ಹಂಚಿಕೊಳ್ಳಲು ಒಬ್ಬ ಇಂಗ್ಲಿಷ್ ಗೆಳತಿ ಇಲ್ಲದಿದ್ದರೆ" ಎಂದು ಹಲುಬುತ್ತಾಳೆ (ಅದೇ ಪು. 148). ಭಾರತದಲ್ಲಿನ ಅವಳ ಸಾಹಸವನ್ನಾಗಲೀ, ಯೋಜನೆಗಳನ್ನಾಗಲೀ, ಅದರ ಬಗ್ಗೆ ತೆಗೆದುಕೊಳ್ಳಬೇಕಾದ ನಿರ್ಧಾರದ ಸ್ವರೂಪಗಳನ್ನಾಗಲೀ ಅವಳು ಹಂಚಿಕೊಳ್ಳುವುದು ಹಬಹೌಸ್ ದಂಪತಿಗಳೊಂದಿಗೆ. ಭಾರತದಲ್ಲಿನ ಅವಳ ರೋಮಾಂಚನ ಗಳಿಗೆಗಳು ಇಂಗ್ಲೆಂಡಿಗೆ ರವಾನೆಯಾದನಂತರವೇ ಅವಳಿಗೆ ತೃಪ್ತಿ. ಭಾರತೀಯರಂತೆ ತಾನೂ ವಾನಪ್ರಸ್ಥಕ್ಕೆ ಕಾಡಿಗೆ ಹೋಗಬೇಕೆಂಬ ವಿಚಾರಗಳು ಅವಳ ಮನದಲ್ಲಿ ಹೊಳೆದಾಗ ಅವಳ ಕಣ್ಣಮುಂದೆ ಬರುವುದು ಭಾರತದ ಯಾವುದೋ ದಂಡಕಾರಣ್ಯವಲ್ಲ, ಬದಲಾಗಿ 'ಲಂಡನ್ನಿನ ಒಂದು ಕಾಡು'! ಹಾಗೆಂದು ಅವಳು ಅದನ್ನು ಒತ್ತಿಹೇಳುತ್ತಾಳೆ. ಅವಳ ಬ್ರಿಟಿಷ್ ಮೋಹ ಎಷ್ಟು ಗಾಢವಾಗಿರುತ್ತದೆಂದರೆ, ವಸಾಹತುಶಾಹಿ ಆಡಳಿತದ ವಿರುದ್ಧ ಪ್ರಚಾರಮಾಡಲು ಕೆನಡಾದಲ್ಲಿ ಅನೇಕ ಭಾರತೀಯರು ಸೇರಿದ್ದ ಸಂದರ್ಭದಲ್ಲಿ, ಬ್ರಿಟಿಷರ ಪರವಾಗಿ ಮಾತನಾಡಲು ಕಾರ್ನೀಲಿಯ ಸಿದ್ಧಳಾಗುತ್ತಾಳೆ. ಭಾರತೀಯರು ಬ್ರಿಟಿಷರ ಬಗೆಗೆ ಆರೋಪಿಸುತ್ತಿರುವ ಸುಳ್ಳು ಟೀಕೆಗಳ ವಿರುದ್ಧ ಬ್ರಿಟಿಷರೇಕೆ ಸಮರ್ಥಿಸಿಕೊಳ್ಳುತ್ತಿಲ್ಲ ಎಂದು ಅಮೆರಿಕೆಯಲ್ಲಿ ಅವಳನ್ನು ಪ್ರಶ್ನಿಸಿದಾಗ ಅವಳು ಹೆಮ್ಮೆಯಿಂದ "Do you know British, it is not their habit to defend themselves" ಎಂದು ಉತ್ತರ ಕೊಡುತ್ತಾಳೆ (ಅದೇ. ಪು. 202). ಬ್ರಿಟಿಷ್ ಬಾರ್ ಅಸೋಸಿಯೇಷನ್ನಿನಲ್ಲಿ ಮೊತ್ತಮೊದಲು ದಾಖಲುಗೊಂಡ, ಬ್ಯಾರಿಸ್ಟರ್ ಆದ, ಆಕ್ಸ್‌ಫರ್ಡ್‌ನಲ್ಲಿ ಕಲಿತ ಮಹಿಳೆ ಐ.ವಿ. ವಿಲಿಯಮ್ಸ್ ಬಗೆಗೆ ಹೇಳುತ್ತಾ, "How glad one was that she belongs to that beloved university" (ಅದೇ. ಪು. 201). ಕಾರ್ನೀಲಿಯಾಳ 'ಇಂಡಿಯಾ ಕಾಲಿಂಗ್' ಕಾದಂಬರಿಯುದ್ದಕ್ಕೂ ಅವಳ ಒಳನೋಟಗಳನ್ನು ನಿಯಂತ್ರಿಸಿರುವುದು ಇಂತಹ ಬ್ರಿಟಿಷ್ ಆರಾಧನೆಯೇ ಆಗಿದೆ. ತನ್ನ ತಾಯಿಯ ಏಳು ಹೆಣ್ಣುಮಕ್ಕಳಲ್ಲಿ ಒಬ್ಬಳಾದ ಕಾರ್ನೀಲಿಯಾ ಹೆಮ್ಮೆಯಿಂದ, 'ಹೆಣ್ಣು ಹುಟ್ಟಿದರೆ ಮಣ್ಣು ಹುಟ್ಟಿತು' ಎನ್ನುವಂತಹ ದೇಶದಲ್ಲಿ ತನ್ನ ಜನನ ತಾಯಿಗೆ ಎಂತಹ ಸ್ವಾಗತಾರ್ಹ ಸಂಗತಿಯಾಗಿತ್ತು ಎಂಬುದನ್ನು ಹೆಮ್ಮೆಯಿಂದ "ಯಾವ ದೇಶದಲ್ಲಿ ಹೆಣ್ಣುಮಗುವೊಂದು ಶಾಪವಾಗಿದೆಯೋ ಅಂತಹ ದೇಶದಲ್ಲಿ ಏಳು ಹೆಣ್ಣುಗಳನ್ನು ಹೆತ್ತ ತನ್ನ ತಾಯಿ ಅದನ್ನು ವರವೆಂದೇ ಪರಿಗಣಿಸಿದ್ದಾಳೆ" ಎಂದು ಹೇಳಿಕೊಳ್ಳುತ್ತಾಳೆ (ಅದೇ ಪು. 19). ಇದು ಸತ್ಯವಾದರೂ ಅವಳ ಧ್ವನಿಯಲ್ಲಿ ಕ್ರಿಶ್ಚಿಯನ್ ಮೇಲರಿಮೆಯನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಅವಳ ಈ ಮೇಲರಿಮೆಯನ್ನು ಬರ್ನಾರ್ಡ್ ಷಾ, ಮೆಕಾಲೆ, ಫ್ಲಾರೆನ್ಸ್ ನೈಟಿಂಗೇಲ್, ಮ್ಯಾಕ್ಸ್‌ಮುಲ್ಲರ್, ಲಾರ್ಡ್ ಟೆನಿಸನ್, ವಿಲಿಯಂ ಎಡ್ವರ್ಡ್ ಗ್ಲ್ಯಾಡ್‌ಸ್ಟೋನ್, ಮುಂತಾದವರೊಂದಿಗೆ ಅವಳ ಸಾಮಾಜಿಕ ಒಡನಾಟಗಳೂ ಹೆಚ್ಚಿಸಿವೆ. ಅವರ ಒಡನಾಟವನ್ನು ಸಾಮಾಜಿಕ ಪ್ರತಿಷ್ಠೆಯ, ಆತ್ಮವಿಶ್ವಾಸದ



ಒಡನಾಟವೆಂದು ತಾನೇ ಕರೆದುಕೊಳ್ಳುತ್ತಾಳೆ. ಭಾರತದಲ್ಲಿನ ಘೋಷಾದಲ್ಲಿರುವ ಮಹಿಳೆಯರ ಸೇವೆ ಮಾಡಲು ಅವಕಾಶವೊಂದನ್ನು ಕರುಣಿಸಿದ ಬ್ರಿಟಿಷ್ ಸರ್ಕಾರಕ್ಕೆ ತಾನೆಂದೆಂದೂ ಋಣಿಯಾಗಿರುವೆನೆಂದು ಹೇಳಿಕೊಂಡಿದ್ದಾಳೆ (ಪು. 133). ಹೀಗೆ ವಸಾಹತುಶಾಹಿ ಕಣ್ಣಿನಿಂದಲೇ ಭಾರತವನ್ನು ನೋಡಹೊರಟಾಗ, ಕಾರ್ನೀಲಿಯಾಳಿಗೆ ಕಾಣುವುದು ಎಲ್ಲ ಬ್ರಿಟಿಷರಿಗೆ ಕಂಡಹಾಗೆ, ಒಂದು "spoilt" ಆದಂತಹ ಅನಾಗರಿಕ ಸಂಸ್ಕೃತಿಯೇ. ಇಂತಹ ಸಂಸ್ಕೃತಿಯನ್ನು ಸುಧಾರಿಸಬೇಕೆಂಬ ಉದ್ದೇಶದಿಂದ ಭಾರತೀಯ ಜನತೆಯೊಡನೆ ಸೇರಿ ತನ್ನನ್ನು ತಾನು ಗುರುತಿಸಿಕೊಳ್ಳುವ ಕಾರ್ನೀಲಿಯಾಳ ಪ್ರಯತ್ನದ ಹಿಂದೆ ಮಿಷನರಿ ಉತ್ಕಂಠತೆಯೇ ಅಡಗಿದೆ (missionary zeal) ಎಂದರೆ ತಪ್ಪಾಗಲಾರದು. ಆಕೆ ತನ್ನ ಸೇವಾಕ್ಷೇತ್ರವನ್ನು ಮೀಸಲಾಗಿರಿಸಿಕೊಳ್ಳುವುದೂ ಕೂಡ ಪಂಡಿತ ರಮಾಬಾಯಿಯಂತೆ ನಿರ್ಗತಿಕರಾದ ಬಡವರನ್ನಲ್ಲ, ಬದಲಾಗಿ ತನ್ನಂತೆ ಕೆಲವೇ ಶ್ರೀಮಂತ. ಮಧ್ಯಮ ವರ್ಗದ ಮಹಿಳೆಯರನ್ನು. ಆದುದರಿಂದ ಅವಳ ಭಾರತೀಯ ಸಂಸ್ಕೃತಿಯ ಬಗೆಗಿನ ಉತ್ಪ್ರೇಕ್ಷಿತ ಆಕ್ಷೇಪಗಳೇನಿದ್ದರೂ ಕೂಡಾ ಅದು ಅಲ್ಪಸಂಖ್ಯಾತ ಜನರನ್ನು ಕುರಿತಾದದ್ದು ಮಾತ್ರ. ಕಾರ್ನೀಲಿಯಾಳಿಗೆ ಭಾರತೀಯ ಜನರ ನಂಬಿಕೆ, ಆಚಾರವಿಚಾರ, ಸಂಪ್ರದಾಯ, ಜೀವನ ಪದ್ಧತಿ, ಸಂಸ್ಕಾರಗಳ ಹಿಂದಿರುವ ಗಾಢವಾದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯೊಂದೂ ಅರ್ಥವಾಗುವುದಿಲ್ಲ. ಅದರೊಳಗೆ ಮಿಡಿಯುತ್ತಿರುವ ಭಾವಪ್ರಪಂಚದ ಅರಿವು ಹೊರಗೆ ನಿಂತು ನೋಡುತ್ತಿರುವ ಕಾರ್ನೀಲಿಯಾಗೆ ಭಾಸವಾಗುವುದಿಲ್ಲ. ಈ ಎಲ್ಲವೂ ಅವಳಿಗೆ ಜಡ್ಡುಗಟ್ಟಿದಂತೆಯೇ ಕಾಣಿಸುತ್ತದೆ. ಯಾಕೆಂದರೆ ಸಾಂಸ್ಕೃತಿಕ ಹಾಗೂ ಧಾರ್ಮಿಕ ಪರಂಪರೆಯಿಂದ ಭಾರತೀಯ ಜನಾಂಗವನ್ನು ಕಿತ್ತು ಬೇರ್ಪಡಿಸಿ ನೋಡುವ ವಸಾಹತುಶಾಹಿ ಪುರುಷ ದೃಷ್ಟಿಕೋನದ ಭಾಗವಾಗಿಯೇ ಅವಳೂ ಇದ್ದಾಳೆ. 'ಇಂಡಿಯಾ ಕಾಲಿಂಗ್' ಕೃತಿಯನ್ನು ಸಂಪಾದಿಸಿರುವ ಚಾಂದನಿ ಲೋಕುಗೆಯವರು ಕಾರ್ನೀಲಿಯಾ ಬಣ್ಣಿಸುವ ಭಾರತೀಯ ಮಹಿಳೆಯರ ಅಂತಃಪುರಗಳು ಹೇಗೆ ಒಂದು ವಿಕ್ಟೋರಿಯನ್ ಪ್ರಪಂಚವನ್ನು ಕಣ್ಣಮುಂದಿರಿಸುತ್ತವೆ ಎಂಬುದನ್ನು ತಮ್ಮ ಮುನ್ನುಡಿಯಲ್ಲಿ ಹೇಳಿದ್ದಾರೆ. ಅಲ್ಲಿ ಜನಾನಾಗಳೆಲ್ಲ "ಕಿಪ್ಲಿಂಗನ ಭಾರತ ಪ್ರದರ್ಶನದಂತೆ" ಮಾರ್ಪಾಡು ಹೊಂದಿಬಿಟ್ಟವೆ ಎನ್ನುತ್ತಾರೆ. ಭಾರತದಲ್ಲಿನ ಅವಳ ಪ್ರಯಾಣಗಳೂ ಕೂಡಾ ಎಷ್ಟು ರೋಚಕವಾಗಿವೆಯೆಂದರೆ, ಅದು 'ತಮ್ಮನ್ನು ತಾವೇ ದೊಡ್ಡ ನಾಯಕಿಯರಂತೆ ಆರೋಪಿಸಿಕೊಂಡು ತೊಡಗಿಕೊಳ್ಳುವ ಆಂಗ್ಲೋ ಇಂಡಿಯನ್ ಮಹಿಳೆಯರ ರೋಚಕವಾದ ಪ್ರಯಾಣಗಳಂತಿದೆ', ಎಂದು ಅವರು ಅಭಿಪ್ರಾಯ ಪಡುತ್ತಾರೆ. ಅಲ್ಲದೆ 'ಅವಳು ಕೊಡುವ ಜನಾನಾದ ಬಚ್ಚಲುಮನೆಯ ದೃಶ್ಯಕೂಡಾ (ಬಚ್ಚಲು ಮನೆಯಲ್ಲಿ ನೀರಿನ ಪಾರದರ್ಶಕ ಆವರಣದೊಳಗೆ ಹೆಣ್ಣೊಬ್ಬಳು ನಿಂತು ಸ್ನಾನ ಮಾಡುತ್ತಿರುವ ದೃಶ್ಯ) ಹತ್ತೊಂಬತ್ತನೇ ಶತಮಾನದ ಓರಿಯಂಟಲ್ ಕಲ್ಪನೆಯದೇ ಆಗಿದೆ' (ಅದೇ. ಮುನ್ನುಡಿ) ಎನ್ನುತ್ತಾರೆ.

ಉಪನಯನದ ವಿಧಿಯನ್ನು ಬಣ್ಣಿಸುವಾಗ ಅಂತಹ ಸಂಸ್ಕಾರವೊಂದು ಕೇವಲ ವಿಧಿಯಾಗಿ ಅದರ ತಾತ್ತ್ವಿಕ ನೆಲೆಯಿಂದ ಕಳಚಿಕೊಂಡು ಉಳಿದುಬಿಟ್ಟಿರುವುದರ ಬಗ್ಗೆ ಕಾರ್ನೀಲಿಯಾ ವ್ಯಂಗ್ಯವನ್ನು ವ್ಯಕ್ತಪಡಿಸು ತ್ತಾಳೆ. ಈ ಸಂದರ್ಭದಲ್ಲಿ ಉಪನಯನದ ವಟುವು ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಭಿಕ್ಷೆಬೇಡುವ ಸಾಂಕೇತಿಕ ಆಚರಣೆಯನ್ನು ಅವಳು "beggers bowl"ನ್ನು ಹಿಡಿದುಕೊಂಡು ಹೊರಟ ತಿರುಕರು ಎಂಬಂತೆ ವರ್ಣಿಸಿದ್ದಾಳೆ. ಭಾರತೀಯ ಪರಂಪರೆಯ ವಿದ್ಯಾರ್ಥಿ ಜೀವನದ ನೆಲೆಯಲ್ಲಿ ಭಿಕ್ಷೆಗೆ ಇರುವ ಸಾಂಸ್ಕೃತಿಕ ಅರ್ಥವನ್ನು ಇದು ತಿರುಚಿಹಾಕುತ್ತದೆ. ಇಂಗ್ಲಿಷ್ ಸಂದರ್ಭದಲ್ಲಿ "beggers bowl" ಎನ್ನುವುದರ ವಾಚ್ಯಾರ್ಥವು ಅದೇ ಆದರೂ, ಆಕೆಯ ದೃಷ್ಟಿಯಿಂದ ಅದು ಭಾರತೀಯ ಸಾಂಸ್ಕೃತಿಕ ಅರ್ಥವನ್ನು ಕಳೆದುಕೊಂಡ, ಒಬ್ಬ ಬೀದಿಯ ತಿರುಕನ ಭಿಕ್ಷಾಪಾತ್ರೆಯನ್ನೇ ನಿರ್ದೇಶಿಸುತ್ತದೆ. ಕಾರ್ನೀಲಿಯಾ ಪ್ರಜ್ಞಾಪೂರ್ವಕವಾಗಿ ಈ ಶಬ್ದಗಳನ್ನು ಬಳಸಿದಂತೆ ಕಾಣುತ್ತದೆ. ಯಾಕೆಂದರೆ ಅಂತಹ ಸಂಸ್ಕಾರಗಳ ಬಗ್ಗೆ ಅವಳಿಗೆ ತಿರಸ್ಕಾರದ ದೃಷ್ಟಿಯೇ ಇದೆ. ಅದೇ ಪಾರ್ಸಿ ಧರ್ಮದ ಕೆಲವು ವಿಧಿಗಳನ್ನು ಕಾದಂಬರಿಯ ಪ್ರಾರಂಭದಲ್ಲಿ ವರ್ಣಿಸುವಾಗ ಇಂತಹ ಧ್ವನಿ ಸೂಸುವ ಪದಗಳನ್ನು ಅವಳು ಬಳಸುವುದಿಲ್ಲ. ಬದಲಾಗಿ ಅದರ ಬಗ್ಗೆ ಅವಳಿಗೆ ಹೆಮ್ಮೆಯೇ ಇದೆ. "Our women have never been secluded, and the Zoroastrian religion made no exactions upon human relationships. Parsees have no social customs to which the West would take exception unless, indeed, the disposal of the dead exposure to a swoop of birds in a Tower of silence - be counted as one such" (ಅದೇ ಪು. 13)

ಕಾರ್ನೀಲಿಯಾಳಿಗೆ ರಾಷ್ಟ್ರೀಯ ಚಳವಳಿಯ ಬಗೆಗೆ ಇದ್ದ ಅಭಿಪ್ರಾಯವಂತೂ ವಸಾಹತು ದೃಷ್ಟಿಕೋನವನ್ನೇ ಸಮರ್ಥಿಸುತ್ತದೆ. ಅದು ಅವಳ ಕಣ್ಣಿಗೆ ಸಣ್ಣ ಪುಟ್ಟ ಗುಂಪುಗಳ ದಂಗೆಕೋರರ ಒಕ್ಕೂಟವಾಗಿದೆ. ಇಂತಹ ದಂಗೆಗಳಿಂದ ಬ್ರಿಟಿಷ್ ಸಾಮ್ರಾಜ್ಯವು ಅಲುಗಾಡಲಾರದು ಎಂದು ಅವಳು ಅಭಿಪ್ರಾಯ ಪಡುತ್ತಾಳೆ. ಗಾಂಧೀಜಿಯವರ ತತ್ತ್ವಗಳು ಮೋಸದ, ವಂಚನೆಯ ಆಧಾರದ ಮೇಲೆಯೇ ನಿಂತಿವೆ ಎನ್ನುತ್ತ, ಗಾಂಧಿಯೊಬ್ಬ ಮಹಾತ್ಮನಾಗಿರುವುದರ ಕುರಿತಾಗಿಯೂ ಅವಳು ಕುಹಕವನ್ನಾಡುತ್ತಾಳೆ. ಗಾಂಧೀಜಿಯವರ ಸ್ವದೇಶಿ ಧರ್ಮಯುದ್ಧದಿಂದಾಗಿ ಮಸ್ಲಿನ್ ತಯಾರಿಸುವ ಕಾರ್ಖಾನೆಯ ಸಾವಿರಾರು ಕಾರ್ಮಿಕರು ನಿರುದ್ಯೋಗಿಗಳಾಗಿರುವುದನ್ನು ಅಂಕಿಅಂಶಗಳ ಸಹಿತ ಒಪ್ಪಿಸುತ್ತಾಳೆ. (ಅದರಿಂದಾಗಿ ಲಂಕಾಷೈರಿನ ಕಾರ್ಖಾನೆಗಳಿಗೆ ಬರುವ ಅಧಿಕಲಾಭವು ತಪ್ಪಿಹೋಗಿರುತ್ತದೆ) ಗಾಂಧೀಜಿಯವರ ಖಾದಿ ಚಳವಳಿಯಿಂದಾಗಿ ಮಹಿಳೆಯರು ತಮ್ಮ ಸಂಪ್ರದಾಯಕ್ಕೆ ವಿರುದ್ಧವಾಗಿ ಬೀದಿಯಲ್ಲಿ ಮಲಗಿ ಪ್ರತಿಭಟಿಸುವುದನ್ನು ಅವಳು ಒಪ್ಪುವುದಿಲ್ಲ. ಅದು ಕುಟುಂಬಗಳ ಶಾಂತಿಯನ್ನು ಕೆಡಿಸುವುದರ ಕಾರಣದಿಂದ ಅವಳು ಮಹಿಳೆಯರು ಸಾರ್ವಜನಿಕ ಕ್ಷೇತ್ರಕ್ಕೆ ಪದಾರ್ಪಣೆ ಮಾಡುವುದನ್ನು ಸಹಿಸುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಬ್ರಿಟಿಷ್ ಸಾಮ್ರಾಜ್ಯವನ್ನು ಉರುಳಿಸಲು ಹವಣಿಸುತ್ತಿರುವ ಈ ಎಲ್ಲ ಚಳವಳಿಗಳಿಗೆ ಅದನ್ನು ಅಲ್ಲಾಡಿಸಲು ಸಹಾ ಸಾಧ್ಯವಿಲ್ಲ ಎನ್ನುವುದು ಅವಳ ಬಲವಾದ ನಂಬಿಕೆಯಾಗಿತ್ತು. ಆದುದರಿಂದ ಇಂತಹ ನಿಷ್ಫಲವಾದ ದಂಗೆಗಳಲ್ಲಿ ಮಹಿಳೆಯರು ಭಾಗವಹಿಸಬಾರದು ಎಂದೇ ಅವಳು ಅಭಿಪ್ರಾಯ ಪಡುತ್ತಾಳೆ. ಮಹಿಳೆಯರು ಮದ್ಯ ಹಾಗೂ ವಿದೇಶಿ ವಸ್ತುಗಳ ಪಿಕೆಟಿಂಗ್‌ನಲ್ಲಿ ಭಾಗವಹಿಸುವುದರಿಂದ ದೇಶಕ್ಕೆ ದೊಡ್ಡಹಾನಿಯೇ ಉಂಟಾಗುತ್ತದೆ ಎಂದು ಅವಳು ಭಾವಿಸಿದ್ದಳು. ಇಂತಹ ಒಂದು ಸಂದರ್ಭದಲ್ಲಿ ಜನಾನಾದ ಒಬ್ಬ ಸಾಮಾನ್ಯ ಮಹಿಳೆಯ ಅಭಿಪ್ರಾಯವನ್ನು ಕಾರ್ನೀಲಿಯಾ ಸಮರ್ಥಿಸುತ್ತಾಳೆ. "ಶಿಕ್ಷಣವು ಸ್ತ್ರೀಯರ ಪ್ರಗತಿಗೆ ಸಹಾಯಕವಾಗುವುದೆಂದು ನಾವು ತಿಳಿದುಕೊಂಡಿದ್ದೆವು, ಆದರೆ ಅದು ಮಹಿಳೆಯರನ್ನು ಈ ಗತಿಗೆ ತರುವುದಾದರೆ (**ಬೀದಿಯಲ್ಲಿ ಹೊರಳಾಡುವ,**

ಸ್ತ್ರೀ ವಿಮೋಚನೆ ಎಂದರೆ ಇಂದಿನ ಸ್ತ್ರೀ–ಪುರುಷರ ಪಾತ್ರಗಳ ಅದಲು ಬದಲೂ ಅಲ್ಲ.

–ಮಾನಸ

ಸಿಕ್ಕ ಗಂಡಸರ ಮುಖ ಪರಚುವ, ವ್ಯಾಪಾರಿಗಳ ಅಂಗಡಿಗಳಿಗೆ ಬೆಂಕಿ ಹಚ್ಚಿ ಲೂಟಿಮಾಡುವ) ಅದಕ್ಕಿಂತ ಅಜ್ಞಾನವೇ ಮೇಲು." (ಅದೇ. ಪು. 188, ಕಂಸದಲ್ಲಿರುವ ಒತ್ತು – ಲೇಖಕಿ ಬೇರೊಂದು ಸಂದರ್ಭದಲ್ಲಿ ಅಭಿಪ್ರಾಯಪಟ್ಟಿರುವುದು) ಹೋರಾಟಗಳ ಒಳಗಿರುವ ಸ್ವಾತಂತ್ರ್ಯದ ಹಂಬಲದ ನಾಡಿ ಮಿಡಿತವನ್ನು ಗ್ರಹಿಸಲಾರದ ಕಾರ್ನೀಲಿಯಾಳಿಗೆ ಮಹಿಳೆಯರ ಪ್ರಗತಿ ಹಾಗೂ ರಾಷ್ಟ್ರೀಯ ಚಳವಳಿಗಳು ಕಂಡದ್ದು ಹೀಗೆ. ಉಸಿರುಕಟ್ಟುವ ವಾತಾವರಣದಲ್ಲಿದ್ದ ಜನಾನಾದ ಮಹಿಳೆಯರಿಗೆ ಶಿಕ್ಷಣ ಕೊಟ್ಟು, ಮನೆಯಾಚೆಗೆ ಕೂಡಾ ಘೋಷಾದಂತಹ ಕೃತಕ ವಾತಾವರಣವನ್ನು ನಿರ್ಮಿಸಿ ಅಲ್ಲಿ ಅವರನ್ನು ಮುಕ್ತವಾಗಿ ಆಡಲು ಬಿಟ್ಟು, ಘೋಷಾದ ಬಂಧನವನ್ನೆಲ್ಲಾ ಕಳಚಲು ಪ್ರೋತ್ಸಾಹಿಸಿದಂತಹ ಕಾರ್ನೀಲಿಯಳೇ, ಮಹಿಳೆಯರು ಸಾರ್ವಜನಿಕ ಕಾರ್ಯಗಳಲ್ಲಿ ತೊಡಗಿಕೊಂಡಾಗ ವಿರೋಧಿಸಿದುದು ಆಶ್ಚರ್ಯವೆನಿಸುತ್ತದೆ. ಅವರ ಸದ್ಯದ ಕ್ರಿಯೆಗಳ ಬಗ್ಗೆ ಕಾರ್ನೀಲಿಯಾಳಿಗೆ ಅಸಮಾಧಾನವಿರುವುದರಿಂದಲೇ, ಈ ಚಳವಳಿಗಳು ಅಸಹ್ಯವಾಗಿ ಕಂಡಿವೆ. ಇದರಿಂದಾಗಿ ಅವಳ ಕನಸಿನ ಸ್ವರ್ಗವಾದ ಬ್ರಿಟಿಷ್ ಸಾಮ್ರಾಜ್ಯದ, ಅದರ ದೇವತೆಗಳಾದ ವೈಸರಾಯಿಗಳ ಮೇಲೆ ಆಗುವ ಪರಿಣಾಮಗಳ ಬಗ್ಗೆ ಕಾರ್ನೀಲಿಯಾಳಿಗೆ ಅತೀವ ಕಾಳಜಿಯಿದೆ. ಆದುದರಿಂದಲೇ ಅವಳಿಗೆ ರಾಷ್ಟ್ರೀಯ ಚಳವಳಿಯೆಂಬುದು ನಿಷ್ಪ್ರಯೋಜಕ ಕ್ರಿಯೆಯಾಗಿ ಕಂಡಿದೆ. ಯಾವುದೇ ದೊಡ್ಡ ಪ್ರಮಾಣದ ಚಳವಳಿಯಲ್ಲಿ, ಸಮೂಹ ಸನ್ನಿಪಾತಕ್ಕೆ ಸಿಕ್ಕ ಜನ ಆವೇಶಕ್ಕೆ ಒಳಗಾಗಿ ವರ್ತಿಸುವ ಕೆಲವು ಅಪವಾದಗಳೇ ಅವಳಿಗೆ ಚಳವಳಿಯ ದೊಡ್ಡ ದೌರ್ಬಲ್ಯವಾಗಿ ಕಂಡಿದೆ. ಸಮೂಹದ ದೌರ್ಬಲ್ಯಗಳೇ ನಾಯಕರ ದೌರ್ಬಲ್ಯಗಳೆಂಬ ತಪ್ಪು ತಿಳಿವಳಿಕೆಗೆ ಕಾರ್ನೀಲಿಯಾ ಆಸ್ಪದ ಕೊಟ್ಟಿರುವುದು ಇಲ್ಲಿ ಸ್ಪಷ್ಟವಾಗಿದೆ. ಆದುದರಿಂದ ಕಾಂಗ್ರೆಸ್ ಕಾರ್ಯಕರ್ತರ ಅವಿವೇಕಕ್ಕೆಲ್ಲಾ ಗಾಂಧೀಜಿಯವರನ್ನೇ ಹೊಣೆಯಾಗಿಸುತ್ತಾಳೆ. ಅವರ ಹರಿಜನರ ದೇವಸ್ಥಾನದ ಪ್ರವೇಶದ ಬಗ್ಗೆ ಅವಳು ತನ್ನದೇ ಆದ ಅಭಿಪ್ರಾಯಗಳನ್ನು ಇಟ್ಟುಕೊಂಡಿದ್ದಾಳೆ. ದೇವಸ್ಥಾನ ಪ್ರವೇಶದ ಕಾಯಿದೆಯು, ಮುಗ್ಧಜನರು ತಿಳಿದುಕೊಂಡಿರುವಂತೆ, ಅದು ಅವರ ನಡುವಿನ ಅಡ್ಡಿಗಳನ್ನು ಮುರಿಯುವ ಪ್ರಾಮಾಣಿಕ ಪ್ರಯತ್ನವಾಗಿರದೇ, ಬುದ್ಧಿವಂತ ರಾಜಕಾರಣಿಗಳು ಅಧಿಕ ಸಂಖ್ಯೆಯಲ್ಲಿ ಜನರನ್ನು ತಮ್ಮತ್ತ ಸೆಳೆದುಕೊಳ್ಳಲು ಹೂಡಿರುವ ಉಪಾಯವೇ ಆಗಿದೆ. ಅದೊಂದು ರಾಜಕೀಯದ ಸೋಗು ಎಂದು ಅವಳು ಅಭಿಪ್ರಾಯ ಪಡುತ್ತಾಳೆ. 1934ರಲ್ಲಿ ಈ ಕಾಯಿದೆಯು ಜಾರಿಗೆ ಬಂದದ್ದೇ ಆದಲ್ಲಿ ಬ್ರಿಟಿಷ್ ಆಧಿಪತ್ಯವು ಈವರೆಗೆ ಕಂಡರಿಯದ ರಕ್ತಪಾತವಾಗುವುದೆಂದು ಸಂಪ್ರದಾಯಸ್ಥ ಬ್ರಾಹ್ಮಣರು ಹೆದರಿದ್ದರು ಎಂಬ ಅಂಶವನ್ನು ಅವಳು ಗುರುತಿಸುವಾಗ, ಅಂತಹುದೊಂದನ್ನು ರಕ್ಷಿಸುವ ಕೆಲಸ ಬ್ರಿಟಿಷರದ್ದಾಗಿದೆ ಎಂದು ಸೂಚಿಸುವುದೂ ಆಗಿದ್ದಿತು. ಜನಾನಾದ ಮಹಿಳೆಯರಿಗಾಗಿ ಕೆಲವು ಅಪಾಯಕಾರಿಯಾದ ಸಾಹಸದಲ್ಲಿ ತೊಡಗಿಕೊಂಡ ಅವಳನ್ನು ಜನ ಪ್ರೀತಿಯಿಂದ "ಬಡಾ ಲಾಟ್ ಸಾಹೇಬ ವೈಸರಾಯ್"ನ ಹಾಗೆ ಕಂಡಿದ್ದರಂತೆ. ಅದಕ್ಕೆ ಚಾಂದನಿ ಲೊಕುಗೆಯವರು ತಮ್ಮ ಮುನ್ನುಡಿಯಲ್ಲಿ, ಕಾರ್ನೀಲಿಯಾಳ ಸಮಕಾಲೀನರಾಗಿದ್ದ ಸರಲಾದೇವಿ ಹಾಗೂ ಮೇಡಂ ಕಾಮ ಇವರುಗಳೂ ರಾಷ್ಟ್ರೀಯ ಹೋರಾಟದ ಕಾಲದಲ್ಲಿ ಕಾರ್ನೀಲಿಯಾಳಿಗಿಂತ ಅಪಾಯಕಾರಿಯಾದ ಸಾಹಸಗಳಲ್ಲಿ ತೊಡಗಿದ್ದರು. ಕಾರ್ನೀಲಿಯಾ ಒಬ್ಬಳೇ ಅಂತಹ ಸಾಹಸವನ್ನು ಎಸಗಿದವಳಾಗಿರಲಿಲ್ಲ ಎಂಬ ಚರಿತ್ರೆಯಲ್ಲಿ ದಾಖಲಾಗಿರುವ ಸತ್ಯವನ್ನು ಸಮರ್ಥಿಸುತ್ತಾರೆ. ಅವರ ಪ್ರಕಾರ 'ವಸಾಹತುಶಾಹಿ ಪುರುಷರ ನಡುವೆ ಅವಳ ಸ್ಥಾನವು ಒಂದು ಅಪವಾದವಾಗಿತ್ತೇ ಹೊರತು, ಅವಳು ತನ್ನಂತಹ ಸಾಹಸಿ ಮಹಿಳೆಯರ ಪ್ರತಿನಿಧಿಯಾಗಿರಲಿಲ್ಲ. ಅವಳು ತನ್ನ ಯಾವ ಸಮಕಾಲೀನ ಮಹಿಳೆಯರ ಕುರಿತೂ ತನ್ನ ಕೃತಿಯಲ್ಲಿ ಉಲ್ಲೇಖಿಸದೇ ಹೋಗಿರುವುದಕ್ಕೆ ಅವಳ ಬಗೆಗೆ ಆ ಎಲ್ಲ ಮಹಿಳೆಯರಿಗೆ ಇದ್ದ ತಿರಸ್ಕಾರ ಭಾವನೆಯೇ ಕಾರಣವಾಗಿದೆ.' ಎಂದು ಹೇಳುತ್ತ ಕಾರ್ನೀಲಿಯಾಳ ಬಗೆಗಿನ ಕೆಲವು ಪ್ರಮುಖ ವ್ಯಕ್ತಿಗಳ ಅಭಿಪ್ರಾಯಗಳನ್ನು ದಾಖಲಿಸುತ್ತಾಳೆ. ಕೃಪಾಸತ್ಯನಾಥ "ಕಾರ್ನೀಲಿಯಾಳು ಅತಿಯಾದ ಪಾಶ್ಚಾತ್ಯೀಕರಣಕ್ಕೆ ಒಳಗಾಗಿ ಇಂಡಿಯಾದ ಬಗೆಗೆ ಅತ್ಯಂತ ಕಟುವಾದ ಟೀಕೆಗಳನ್ನು ಹೊಂದಿದ್ದಳು" ಎಂದಿದ್ದಾರೆ. ಅನಿಬೆಸೆಂಟ್ ಮತ್ತು ಲಾಲಾಲಜಪತರಾಯ್ ಅವರೂ. ಭಾರತೀಯ ಸಾಂಸ್ಕೃತಿಕ ಹಾಗೂ ಧಾರ್ಮಿಕ ಪರಂಪರೆಯ ಬಗೆಗಿನ ಅವಳ ಅಜ್ಞಾನವನ್ನು ಬಯಲಿಗೆಳೆಯುತ್ತಾರೆ, 'ಕಾರ್ನೀಲಿಯಾಳು ಹಿಂದೂ ಧರ್ಮವನ್ನು ತಪ್ಪಾಗಿ ಅಧ್ಯಯನ ಮಾಡಿರುವಳೆಂದೂ, ಭಾರತೀಯ ಜನರ ನಿಜವಾದ ಸಂಪರ್ಕವಿಲ್ಲದ ಅವಳಿಗೆ ಅಂತಹವರ ಮೇಲೆ ತೀರ್ಪನ್ನು ಕೊಡುವ ಯಾವ ಅಧಿಕಾರವೂ ಇಲ್ಲವೆಂದು' ಹೇಳುತ್ತಾ ವಾರ್ಡ್ ಅಧಿಕಾರಿಯಾಗಿದ್ದ ಅವಳ ಜನ ಸಂಪರ್ಕವನ್ನೇ ಶಂಕಿಸುತ್ತಾರೆ ಲಜಪತರಾಯ್. 'ಮಹಿಳೆಯರ ಸುಧಾರಣೆಗೆ (ಮತದಾನ) ಸಂಬಂಧಪಟ್ಟಂತೆ ಅವಳ ಆಲೋಚನೆಗಳು ಸಾಂಪ್ರದಾಯಿಕವಾಗಿವೆ' ಎಂಬುದು ಸರೋಜಿನಿನಾಯ್ಡು ಅವರ ಅಭಿಪ್ರಾಯ. ಈ ಎಲ್ಲವೂ ಕಾರ್ನೀಲಿಯಾಳ ಬಗೆಗೆ ಅವಳ ಸಮಕಾಲೀನರು ಹೊಂದಿದ್ದ ಧೋರಣೆಯನ್ನು ಬಯಲಾಗಿಸುತ್ತವೆ. ಇಡೀ ದೇಶದ ಶಕ್ತಿಯೇ ರಾಷ್ಟ್ರೀಯತೆಯ ಗುರಿಯಲ್ಲಿ ಸೋರಿ ಹೋಗುತ್ತಿದ್ದ ಕಾಲದಲ್ಲಿ ಕಾರ್ನೀಲಿಯಾಳು ಒಬ್ಬ ಭಾರತೀಯಳಾಗಿ ಹೊಂದಿದ್ದ ಇಂತಹ ಆಲೋಚನೆಗಳಿಗೆ, ರಾಷ್ಟ್ರೀಯ ಚಳವಳಿಯಲ್ಲಿ ತಮ್ಮ ತನು-ಮನ-ಧನಗಳನ್ನು ತೊಡಗಿಸಿಕೊಂಡಿದ್ದವರು ತೋರಿದ ಈ ಪ್ರತಿಕ್ರಿಯೆ ಆಶ್ಚರ್ಯದಾಯಕವಾದುದೇನೂ ಅಲ್ಲ. ಅವಳ ವ್ಯಕ್ತಿತ್ವದ ಈ ಎಲ್ಲಾ ಕುಂದು ಕೊರತೆಗಳನ್ನು ಗಮನದಲ್ಲಿಟ್ಟುಕೊಂಡೂ, ಅವುಗಳ ನಡುವೆಯೇ ಲಿಂಗಾಧರಿತ ಸಮಾಜವೊಂದರಿಂದ ಮಹಿಳೆಯರನ್ನು ಬಿಡುಗಡೆಗೊಳಿಸಬೇಕೆಂದು ಹೋರಾಡಿದ ಅವಳ ಪ್ರಯತ್ನಗಳು ಮಾತ್ರ ಮಹಿಳಾ ಚರಿತ್ರೆಯಲ್ಲಿ ಎಂದೆಂದಿಗೂ ಉಳಿದುಕೊಳ್ಳುತ್ತವೆ. ಮಹಿಳೆಯರ ವೈಯಕ್ತಿಕ ಅನನ್ಯತೆಯನ್ನು ಪಿತೃಪ್ರಧಾನ ವ್ಯವಸ್ಥೆ ಯೊಂದರಲ್ಲಿ ಸ್ಥಾಪಿಸಲಿಕ್ಕೆ ಹಾಕಿಕೊಟ್ಟ ಅವಳ ಹೋರಾಟದ ಮಾದರಿಗಳು ಅಪೂರ್ವವಾಗಿವೆ. ಅಷ್ಟೇ ಅಲ್ಲದೆ, ಅವು ಅನುಕರಣೀಯವೂ ಆಗಿವೆ. ❑



“ಈಗಲೂ ನಾವು ಹೋರಾಡುತ್ತೇವೆ : ಬಂದೂಕುಗಳಿಂದಲ್ಲ, ಶಬ್ದಗಳ ಮೂಲಕ!”

–ಹೈಸಿಲಾ ಯಮಿ

ಇತ್ತೀಚಿಗೆ ನೇಪಾಳದಲ್ಲಿನ ರಾಜಕೀಯ ಪ್ರಕ್ರಿಯೆ ರಾಜಕೀಯ ಚಿಂತಕರ ಕುತೂಹಲವನ್ನು ಕೆರಳಿಸಿದೆ. ದಶಕಗಳಿಂದ ಊಳಿಗಮಾನ್ಯ ಹಾಗೂ ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ ಹಾಗೂ ಶೋಷಿತರ ಪರವಾಗಿ ಸಶಸ್ತ್ರ ಹೋರಾಟದಲ್ಲಿ ತೊಡಗಿರುವ ಮಾವೋವಾದಿಗಳು ಪ್ರಜಾತಾಂತ್ರಿಕ ವ್ಯವಸ್ಥೆಯ ಭಾಗವಾಗಲು ನಿರ್ಧರಿಸಿದ್ದರು. cpn-m ಪಕ್ಷವು ಚುನಾವಣೆಯಲ್ಲಿ ಗೆದ್ದು ಆಡಳಿತದ ಚುಕ್ಕಾಣಿಯನ್ನು ಹಿಡಿದಿದ್ದರೂ ಅಷ್ಟೆ ಕ್ಷಿಪ್ರವಾಗಿ ರಾಜೀನಾಮೆಯನ್ನು ನೀಡಬೇಕಾಗಿ ಬಂದಿದ್ದು ಈಗ ಇತಿಹಾಸ.

ನೇಪಾಳದಲ್ಲಿ ನಡೆದ ಈ ರಾಜಕೀಯ ಬದಲಾವಣೆಯ ಪ್ರಯತ್ನ ಹಲವಾರು ಗಂಭೀರವಾದ ಪ್ರಶ್ನೆಗಳನ್ನು ಎತ್ತುತ್ತದೆ. ಪ್ರಚಂಡ ಅವರ ನೇತೃತ್ವದ ಮಾವೋವಾದಿಗಳು ಶಸ್ತ್ರಗಳನ್ನು ಕೆಳಗಿಟ್ಟು ಪ್ರಜಾತಾಂತ್ರಿಕ ವ್ಯವಸ್ಥೆಯ ಮೇಲಿನ ನಂಬಿಕೆಯಿಂದ, ‘ಶಾಂತಿಯುತವಾಗಿ’ ಚುನಾವಣೆಯಲ್ಲಿ ಸ್ಪರ್ಧಿಸಿ, ಗೆದ್ದು ಇತರ ಪಕ್ಷಗಳ ಬೆಂಬಲದಿಂದ ಆಡಳಿತ ಚುಕ್ಕಾಣಿಯನ್ನು ಹಿಡಿದರು. ಪ್ರಜಾಪ್ರಭುತ್ವ ವ್ಯವಸ್ಥೆಗೆ ತಳಪಾಯ ಹಾಕಲು ಯತ್ನಿಸಿದರು. ಆದರೆ ಊಳಿಗಮಾನ್ಯ ಶಕ್ತಿಗಳು ಹಾಗೂ ಸೈನ್ಯಾಧಿಕಾರದ ಎದುರು ಈ ಪ್ರಯತ್ನ ವಿಫಲವಾಗಿ ಪ್ರಚಂಡ ಅವರ ಸರ್ಕಾರ ರಾಜೀನಾಮೆ ನೀಡಿತು.

ಮಾವೋವಾದಿಗಳ ಸಶಸ್ತ್ರ ಹೋರಾಟಕ್ಕೆ ಮಾನಸ ಬಳಗದ ಬೆಂಬಲವಿಲ್ಲವಾದರೂ, ಅವರ ಜನಪರವಾದ ಪ್ರಾಮಾಣಿಕ ನಿಲುವು ಪ್ರಶ್ನಾತೀತವೆಂದು ಭಾವಿಸುತ್ತದೆ. ಮಾವೋವಾದಿ ಸಿದ್ಧಾಂತದಲ್ಲಿ ಬಲವಾದ ನಂಬಿಕೆಯುಳ್ಳ ಮಹಿಳೆಯೊಬ್ಬಳ ರಾಜಕೀಯ ನಿಲುವು ಮತ್ತು ಸೈದ್ಧಾಂತಿಕ ನಂಬಿಕೆಗಳನ್ನು ಈ ಸಂದರ್ಶನ ಸ್ಪಷ್ಟವಾಗಿ ಚಿತ್ರಿಸುತ್ತದೆ. ಸೈದ್ಧಾಂತಿಕ ನಂಬಿಕೆಗಳು ವಾಸ್ತವದಲ್ಲಿ ಜಾರಿಯಾಗುವ ಪ್ರಕ್ರಿಯೆಯಲ್ಲಿ ಎದುರಾಗುವ ಗೊಂದಲಗಳನ್ನು, ಅಡ್ಡಿ ಆತಂಕಗಳನ್ನು ಬಿಂಬಿಸುವಲ್ಲಿ ಈ ಸಂದರ್ಶನ ಮುಖ್ಯವಾಗುತ್ತದೆ.

ಹೈಸಿಲಾ ಯಮಿ ಅಲಿಯಾಸ್ ಕಾಮ್ರೇಡ್ ಪಾರ್ವತಿ, ನೇಪಾಳ ದೇಶದ ಅತ್ಯಂತ ಬಲಿಷ್ಠ ಮಹಿಳೆ, ಮಾವೋವಾದಿ ನಾಯಕಿ. ಮಾವೋವಾದಿಗಳು ಎಂದರೆ ಬರೀ ಯುದ್ಧಾಸಕ್ತರು, ಒರಟರು ಎಂಬ ಮಿಥ್‌ಅನ್ನು ಈಕೆ ಸುಳ್ಳಾಗಿಸಿದ್ದಾರೆ. ಆಕೆ ಒಬ್ಬ ತುಂಬ ನಯವಾದ, ಮುಗುಳ್ನಗೆಯುಳ್ಳ, ಮಧುರವಾಗಿ ಮಾತನಾಡುವ ವ್ಯಕ್ತಿ. ಭಾರತ ಮತ್ತು ಇಂಗ್ಲೆಂಡ್‌ಗಳಲ್ಲಿ ಶಿಕ್ಷಣ ಪಡೆದಿರುವ ವಾಸ್ತುಶಿಲ್ಪತಜ್ಞೆ. ಮಾವೋವಾದಿಗಳ ಹನ್ನೊಂದು ವರ್ಷಗಳ ಸುದೀರ್ಘ ಸಶಸ್ತ್ರ ಹೋರಾಟದ ಕಾಲದಲ್ಲಿ ಭೂಗತರಾಗುವುದಕ್ಕೂ ಮುನ್ನ, 13 ವರ್ಷ ಒಂದು ಕಾಲೇಜಿನಲ್ಲಿ ಪಾಠ ಹೇಳುತ್ತಿದ್ದವರು. ಹೈಸಿಲಾ ಯಮಿ ಗೆರಿಲ್ಲಾಗಳ ಕ್ಯಾಂಪ್‌ಗಳಿಂದ ನೇಪಾಳದ ರಾಜ್ಯಸಭೆಗೆ ಚುನಾಯಿತರಾಗಿ, ಪ್ರವಾಸೋದ್ಯಮ ಮಂತ್ರಿಯಾಗುವವರೆಗಿನ ದೀರ್ಘವಾದ ಪಯಣದ ಹಾದಿ ವೈವಿಧ್ಯಮಯ ಅನುಭವಗಳಿಂದ ಕೂಡಿದ್ದಾಗಿದೆ. ನೇಪಾಳದ ಮಾವೋವಾದಿ ಸಂಯುಕ್ತ ಕಮ್ಯುನಿಸ್ಟ್ ಪಕ್ಷದ (cpn-m) ಪಾಲಿಟ್‌ಬ್ಯೂರೋ ಸದಸ್ಯೆಯಾಗಿ, ಒಬ್ಬ ಮಾಜಿ ಮಂತ್ರಿ cpn-m ನ ಚಿಂತನೆಯ ಚಿಲುಮೆ ಎನಿಸಿರುವ ಬಾಬೂರಾಂ ಭಟ್ಟರಾಯ್ ಅವರ ಪತ್ನಿಯಾಗಿ ಹೈಸಿಲಾ ರಾಜಕೀಯವಾಗಿ ತುಂಬ ಘನವಾದ ಅಂಕಿತವುಳ್ಳವರಾದರೂ ಈ ಎಲ್ಲಾ ಅಂಕಿತಗಳನ್ನೂ ಆಕೆ ತುಂಬ ಹಗುರವಾಗಿ ಧರಿಸಿದ್ದಾರೆ. ಆಕರ್ಷಕವಾದ ವ್ಯಾವಹಾರಿಕ ಉಡುಪು ಧರಿಸುವ, ಕಪ್ಪು ಬಿಳಿ ಕೂದಲುಳ್ಳ, ಹಸನ್ಮುಖದ ಈಕೆ ಅಮೃತಾನಂದಿ ಜೋಶಿ ಅವರಿಗೆ ನೀಡಿದ ಸಂದರ್ಶನದಲ್ಲಿ ನೇಪಾಳದ ಮಾವೋವಾದಿಗಳು ಕ್ರಾಂತಿಕಾರಿ ಹೋರಾಟದಿಂದ ವಾಸ್ತವ ರಾಜಕೀಯಕ್ಕೆ, ಮಿಲಿಟರಿ ಆಕ್ರಮಣಗಳಿಂದ ರಾಜಕೀಯ ಆಕ್ರಮಣದ ಕಡೆಗೆ ಪರಿವರ್ತಿತರಾದ ಬಗೆ ಹಾಗೂ ಆ ನಡುವೆ ಅವರು ಎದುರಿಸಿದ ಅಡ್ಡಿ ಆತಂಕಗಳನ್ನು ಕುರಿತು ಮಾತನಾಡಿದ್ದಾರೆ.

ಹಿಂಸಾವಾದಿ ಹೋರಾಟದಲ್ಲೇ ವರ್ಷಗಳನ್ನು ಕಳೆದ ಮಾವೋವಾದಿಗಳನ್ನು ನೇಪಾಳದ ರಾಜ್ಯವ್ಯವಸ್ಥಾಸಭೆಗೆ ಚುನಾವಣೆಯಲ್ಲಿ ಗೆಲ್ಲುವಂತೆ ಮಾಡಿದ ಅಂಶಗಳೇನು?

● ನಾವು ನಡೆಸಿದ ಶಸ್ತ್ರಹೋರಾಟ ಜನತೆಯ ಯುದ್ಧವಾಗಿತ್ತು. ನೇಪಾಳದ ಜನರು ಭ್ರಷ್ಟವೂ, ಅಸಮರ್ಥವೂ ಆಗಿದ್ದ ಸರ್ಕಾರದ ಬಗೆಗ ಅಸಹನೆ ಹೊಂದಿದ್ದರು. ದೊರೆ ಮತ್ತು ಅನ್ಯರಾಜಕೀಯ ಪಕ್ಷಗಳು ಪ್ರಮುಖವಾಗಿ ಹಿಂದೂ ನಂಬಿಕೆಗಳ ವ್ಯವಸ್ಥೆಗಳನ್ನೇ ಮುಂದಿಟ್ಟುಕೊಂಡು ಅದರ ಅನುಕೂಲಗಳನ್ನು ಪಡೆದುಕೊಂಡು ಬಂದವರು. ದೇಶದ ಸೈನ್ಯ ಕೂಡ ಈ ಪ್ರಭುತ್ವ ಹಾಗೂ ಸಾಮ್ರಾಜ್ಯವಾದವನ್ನೇ ಬೆಂಬಲಿಸುತ್ತಾ ಕಾಪಾಡಿಕೊಂಡು ಬರುತ್ತಿದೆ. ಇದೆಲ್ಲದರ ಪರಿಣಾಮವೆಂದರೆ ಜನರು ಈಗ ಯಾರು ಯಾವುದರ ಪರವಾಗಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ಅರಿತುಕೊಂಡಿದ್ದಾರೆ. cpn-m ಪಕ್ಷವು ಇಂಥ ಎಲ್ಲ ಶಕ್ತಿಗಳ ವಿರುದ್ಧ ಸಮರವನ್ನು ಸಾರಿತು. ನಾವು ಕಠ್ಮಂಡುವನ್ನು ವಶಕ್ಕೆ ತೆಗೆದುಕೊಳ್ಳಲು ಯೋಚಿಸಿದ್ದೆವು. ಆದರೆ ಅದು ಸರಿಯಾದುದಲ್ಲ ಎಂದು ನಮಗೆ ಅರ್ಥವಾಗಿತ್ತು. ಅಲ್ಲದೆ ಭಾರತ ಮತ್ತು ಚೀನಾಗಳು ಇದಕ್ಕೆ ಯಾವ ಬಗೆಯಲ್ಲಿ ಪ್ರತಿಕ್ರಿಯಿಸಬಹುದು ಎಂಬುದನ್ನೂ ನಾವು ಅರ್ಥಮಾಡಿಕೊಂಡಿದ್ದೆವು.

ಈ ನಡುವೆ ಮಾವೋವಾದಿಗಳ ಜನಪ್ರಿಯತೆ ಹೆಚ್ಚಿತು. ನಮ್ಮ ಯುದ್ಧತಂತ್ರಕ್ಕೆ ಚಾಲನೆ ದೊರೆಯಿತು. ಏಕೆಂದರೆ ಸರ್ಕಾರವು ಏನನ್ನು ಕೊಡಲು ಸಮರ್ಥವಾಗಿರಲಿಲ್ಲವೋ ಅದನ್ನು ನಾವು ಜನತೆಗೆ ನೀಡಿದ್ದೆವು. ಉದಾಹರಣೆಗೆ, ನ್ಯಾಯವ್ಯವಸ್ಥೆ ಕಠ್ಮಂಡುವಿನಲ್ಲೇ ಕೇಂದ್ರೀಕೃತವಾದದ್ದಾಗಿದ್ದು ತೀರಾ ಹಳೆಯ ಮಾದರಿಯದಾಗಿತ್ತು. ಆದ್ದರಿಂದ ನಾವು ತಲಾ ಒಬ್ಬ ಮಹಿಳೆ ಮತ್ತು ಒಬ್ಬ ಪುರುಷ ಹೀಗೆ ಇಬ್ಬರು ಕಾನೂನು ಅಧಿಕಾರಿಗಳನ್ನು ಪ್ರತಿ ಜಿಲ್ಲೆಯಲ್ಲೂ ನೇಮಿಸಿದೆವು. ಒಂದು ಕಚ್ಚಾ ಬ್ಯಾಂಕಿಂಗ್ ವ್ಯವಸ್ಥೆಯನ್ನು ಆರಂಭಿಸಿದೆವು, ಗುಡಿ ಕೈಗಾರಿಕೆಗಳನ್ನೂ ಪ್ರಾರಂಭಮಾಡಿದೆವು. ಹೀಗೆ, ಹೆಚ್ಚುಕಡಿಮೆ, ಒಂದು ಸಮಾನಾಂತರ ಸರ್ಕಾರವನ್ನೇ ನಾವು ನಡೆಸಿದೆವು. ಸಮಾನತೆಯ ಪರವಾದ ನಮ್ಮ ಈ ಮೌಲ್ಯಗಳನ್ನು ಜನರು ಅರಿತುಕೊಂಡರು ಮತ್ತು ಮೆಚ್ಚಿದರು.

ಮಾವೋವಾದಿಗಳಿಗೆ ವಾಸ್ತವ ರಾಜಕೀಯದೊಂದಿಗೆ ವ್ಯವಹರಿಸುವುದು ಯಾವ ರೀತಿ ಕಷ್ಟಕರ?

- ಬಹುಪಕ್ಷೀಯ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಪ್ರವೇಶಿಸುವುದು ಎಂದರೆ ಕಮ್ಯೂನಿಸ್ಟ್ ಕ್ರಾಂತಿಯ ಕೆಲವು ಮಾದರಿಗಳಿಂದ ದೂರವಾಗ ಬೇಕಾಗುತ್ತದೆ. ಆದರೂ, ಇನ್ನೊಂದು ತರಹದಲ್ಲಿ, ಯುದ್ಧ ಹಾಗೂ ಜನತಂತ್ರಗಳ ನಡುವೆ ಒಂದು ಗತಿತಾರ್ಕಿಕ ಸಂಬಂಧ ವಿರುತ್ತದೆ.

  ನೇಪಾಳವು ಸಮೃದ್ಧವಾದ ಎಡಪಂಥೀಯ ಪರಂಪರೆ ಹಾಗೂ ಚಳವಳಿಗಳನ್ನು ಉಳ್ಳ ದೇಶ. ಇಲ್ಲಿ ಕೆಂಪು ಬಣ್ಣದ್ದೇ ಅನೇಕ ಛಾಯೆಗಳಿವೆ. ಶಾಂತಿಪ್ರಕ್ರಿಯೆಯಲ್ಲಿ ಪ್ರವೇಶಿಸುವಾಗ ನಾವು ಇದನ್ನು ಪೂರ್ಣವಾಗಿ ನಮ್ಮ ಅನುಕೂಲಕ್ಕೆ ಬಳಸಿಕೊಂಡಿದ್ದೇವೆ. ವ್ಯಾಪಕ ಶಾಂತಿ ಒಪ್ಪಂದ (comprehensive peace agreement)ವನ್ನು ನಾವು ಪಾಲಿಸುತ್ತಿದ್ದೇವೆ. ಮಾವೋವಾದಿಗಳಿಗೆ ಪಾರ್ಲಿಮೆಂಟನ್ನು ಪ್ರವೇಶಿಸಲು ವೇಳಾಪಟ್ಟಿಯೊಂದು ಇದೆ, ಶಸ್ತ್ರಾಸ್ತ್ರಗಳನ್ನು ಮೊದಲು ಕೆಳಗಿಳಿಸುವುದು, ಸರ್ಕಾರವನ್ನು ಸೇರುವುದು ಮತ್ತು ಚುನಾವಣೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದು.

  ರಾಜ್ಯವ್ಯವಸ್ಥಾ ಸಭೆಯಲ್ಲಿ ನಮ್ಮ ಸೈನ್ಯದ ಸದಸ್ಯರನ್ನು ಕಾಣುವಾಗ ಅವರು ಎಷ್ಟುಬೇಗ ಈ ಹಗ್ಗದ ಮೇಲಿನ ನಡಿಗೆಯನ್ನು ಕಲಿತಿದ್ದಾರೆಂದು ನನಗೇ ಅಚ್ಚರಿಯಾಗುತ್ತದೆ. ಆದರೂ ಹೋರಾಟವು ಮುಂದುವರೆದಿದೆ. ಈಗಲೂ ನಾವು ಕಾದಾಡುತ್ತೇವೆ ಬಂದೂಕುಗಳಿಂದಲ್ಲ, ಶಬ್ದಗಳ ಮೂಲಕ. ಸಂವಿಧಾನದಲ್ಲಿ ಯಾವ ಬಗೆಯ ಪದಗಳನ್ನು ಬಳಸಬೇಕು ಎಂಬುದರ ಬಗ್ಗೆ ನಾವೀಗ ವಾಗ್ವಾದ ಮಾಡುತ್ತೇವೆ. (ಮುಗುಳ್ನಗೆ)

ಈಗಿನ ಕಾಯಿಕಟ್ಟಿನ (stalemate) ಸ್ಥಿತಿಗೆ ಕಾರಣವಾಗಿರುವ ಅಡೆತಡೆಗಳೆಂಥವು?

- ನಮಗೆ ತುಂಬ ಬಲವಾದ ವಿರೋಧ ಪ್ರಕಟವಾಗಿರುವುದು ನೇಪಾಳದ ಸೇನಾವ್ಯವಸ್ಥೆಯಿಂದ. ಏಕೆಂದರೆ, ಒಂದು ಪಾರ್ಲಿಮೆಂಟರಿ ಪ್ರಜಾಪ್ರಭುತ್ವದಲ್ಲಿ ಸೇನೆಯ ಪರಮಾಧಿಕಾರಕ್ಕೆ ಸವಾಲು ಎದುರಾಗುತ್ತದೆ. ದೊರೆತನದ ಅಡಿಯಲ್ಲಿ ಅವರು ಉದ್ಧಟತನದಿಂದ ಮೆರೆದಿದ್ದಾರೆ. ನಮ್ಮ ಸಮಾನತಾವಾದಿ ಹಾಗೂ ನಾಗರಿಕ ಪರಮಾಧಿಕಾರದ ವಿಚಾರಗಳು ಅವರಿಗೆ ಇಷ್ಟವಾಗಲಾರವು. ಮಾರ್ಕ್ಸ್‌ವಾದಿಗಳಲ್ಲದ ಇತರ ನೇಪಾಳಿ ರಾಜಕೀಯ ಪಕ್ಷಗಳವರು ಉದಾ: ನೇಪಾಳಿ ಕಾಂಗ್ರೆಸ್ ಕೂಡ ಮಿಲಿಟರಿಯೇ ತಮ್ಮ ಅಂತಿಮ ರಕ್ಷಕನೆಂದು ಭಾವಿಸಿದೆ. ಆದ್ದರಿಂದ ಆ ಸಾಮ್ರಾಜ್ಯಶಾಹಿ ಏಜೆಂಟ್‌ಗಳೊಂದಿಗೇ ಅವರೆಲ್ಲರೂ ಪರಸ್ಪರ ಒಗ್ಗೂಡಿದ್ದಾರೆ.

  ವ್ಯಾಪಕ ಶಾಂತಿ ಪ್ರಕ್ರಿಯೆಯು ಜನತಾ ವಿಮೋಚನಾ ದಳವು ನೇಪಾಳದ ಸೈನ್ಯದೊಳಗೆ ಸಮಾವೇಶವಾಗುತ್ತದೆಂದು ಸ್ಪಷ್ಟವಾಗಿ ತಿಳಿಯಪಡಿಸಿದೆ. ಆದರೆ, ಸೇನಾ ಮುಖಂಡರುಗಳು ಈ ನಿಯಮವನ್ನು ಉಲ್ಲಂಘಿಸಿದ್ದಾರೆ. ಸೇನೆಯ ರಾಜನಿಷ್ಠೆ ಎಲ್ಲರಿಗೂ ತಿಳಿದೇ ಇದೆ. ಆದ್ದರಿಂದ ಜನರಲ್‌ಗಳ ಸೇವಾ ಅವಧಿಯನ್ನು ವಿಸ್ತರಿಸಕೂಡದು ಎಂದು ನಾವು ಸೂಚಿಸಿದ್ದೆವು. ವಾಸ್ತವದಲ್ಲಿ ಪೊಲೀಸು ಮತ್ತು ರಾಜ್ಯಸಭಾ ರಕ್ಷಿತ ವ್ಯವಸ್ಥೆಗಳಲ್ಲಿನ ಉನ್ನತ ಅಧಿಕಾರಗಳಿಗೆ ಹೊಸಬರ ನೇಮಕ ಕೂಡ ಮಾಡಿದ್ದಾಗಿದೆ, ಆ ಬಗ್ಗೆ ನಮಗೆ ಯಾರದೂ ಪ್ರತಿರೋಧ ಎದುರಾಗಲಿಲ್ಲ. ಹಾಗಿದ್ದರೂ, ಸೈನ್ಯದಲ್ಲಿ ಸಮಾವೇಶಗೊಳ್ಳುವ ವಿಷಯಕ್ಕೆ ಬಂದಾಗ, ಈ ವಿಚಾರವೇ ಅಸಹನೀಯವಾಗಿ ಪರಿಣಮಿಸಿತು. ಈಗಿನ ಈ ಸ್ಥಗಿತ ಸ್ಥಿತಿಯನ್ನು ನಿವಾರಿಸುವ ನಿಟ್ಟಿನಲ್ಲಿ ನಾವು ತೀವ್ರವಾಗಿ ಗಮನ ಹರಿಸಿದ್ದು, ನಾವು ಮೃದುನೀತಿಯನ್ನು ಅನುಸರಿಸಲು ಬಯಸುತ್ತೇವೆ. ಆದರೆ ನಮ್ಮ ಈ ಮೃದು ನೀತಿಯು ಆತ್ಯಂತಿಕವೇನೂ ಅಲ್ಲ.

ನಿಮ್ಮ ಪಕ್ಷದ ಒಳಗೂ ಜನತಾಂತ್ರಿಕತೆ ಇದೆಯೆ?

- cpn-m ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವ ತುಂಬ ಬಲವಾಗಿಯೇ ಇದೆ. ಪ್ರಚಂಡ ಅವರು ವಿಚಾರಗಳ ವೈವಿಧ್ಯವನ್ನು ಪ್ರೋತ್ಸಾಹಿಸುತ್ತಾರಾದರೂ ಇಡೀ ಟೀಮನ್ನು ಒಗ್ಗಟ್ಟಾಗಿರುವಂತೆ ಉಳಿಸುವ ಕುಶಲತೆಯೂ ಅವರಿಗಿದೆ. ಪಾರ್ಲಿಮೆಂಟರಿ ಚೌಕಟ್ಟಿನ ಒಳಗೇ ನಮ್ಮ ಹೋರಾಟ ಎಂಬುದನ್ನು ಒಪ್ಪದವರೂ ನಮ್ಮಲ್ಲಿ ಇದ್ದಾರೆ. ಹಳೆಯದು ಮತ್ತು ಹೊಸದರ ನಡುವೆ ತಿಕ್ಕಾಟಗಳು ನಡೆದಿವೆ. ಆದರೂ ನಾವು ಎಲ್ಲರೂ ದೃಢವಾಗಿದ್ದು ಜನತಾಪರವಾದ ನಮ್ಮ ಕಾರ್ಯಕ್ರಮವನ್ನು ವಾಸ್ತವ ರಾಜಕೀಯವು ಕಬಳಿಸುವುದಕ್ಕೆ ಆಸ್ಪದ ಕೊಡುವುದಿಲ್ಲ.

ಸಶಸ್ತ್ರ ಹೋರಾಟದ ದಾರಿಯನ್ನು ನೀವು ಬಿಟ್ಟುಕೊಟ್ಟಿದ್ದು ಒಳ್ಳೆಯದೇ ಆಗಿದೆ ಎನ್ನುತ್ತೀರಾ?

- ಸದ್ಯಕ್ಕೆ ನಾವು ಹಿಂಸಾವಾದವನ್ನು ಕೈಬಿಟ್ಟಿದ್ದೇವೆ. ನಿಜವೆಂದರೆ ನಾವು ನಮ್ಮ ಜನತಾವಿಮೋಚನಾ ದಳವನ್ನು ನೇಪಾಳಿ ಸೇನೆಯೊಳಗೆ ಸೇರಿಸಲು ಬಯಸುತ್ತಿದ್ದೇವೆ. ಅದರಿಂದ ನಮ್ಮ ಹುಡುಗರಿಗೆ ಒಳ್ಳೆಯ ತರಬೇತಿ ದೊರಕಲಿ ಎಂಬುದು ನಮ್ಮ ಉದ್ದೇಶ. ನಮ್ಮ ದೃಷ್ಟಿಯಲ್ಲಿ ಇಡೀ ವ್ಯವಸ್ಥೆಯನ್ನು ಪುನಾರಚಿಸುವ ಕಾರ್ಯದಲ್ಲಿ ಇದೂ ಒಂದು ಭಾಗ ಅಷ್ಟೆ. ಆದರೆ ಸೇನೆಯು ಇನ್ನೂ ಊಳಿಗಮಾನ್ಯತೆಯಲ್ಲೇ ಉಳಿದಿದ್ದು, ಅದು ನಮ್ಮ ಈ ಯತ್ನಕ್ಕೆ ಅಡ್ಡಿಯುಂಟುಮಾಡುತ್ತಿದೆ.

  ಶಾಂತಿಪ್ರಕ್ರಿಯೆ ತುಂಬ ದೀರ್ಘವಾದಲ್ಲಿ ಕೆಲವರು ನಮ್ಮ ಮುಂದಾಳುಗಳು ನಮ್ಮನ್ನು ಬಿಟ್ಟು ಹೋಗಲೂಬಹುದು. ಕೆಲವರು ಈಗಾಗಲೇ Terai ಹೋರಾಟದೊಂದಿಗೆ ಸೇರಿಕೊಂಡಿದ್ದಾರೆ. ನಮ್ಮ ಪಕ್ಷದ ಒಳಗೂ ಕೆಲವರು Terai ಚಳವಳಿಗೆ ಹಿಂದಿರುಗಲು ಬಯಸುತ್ತಿದ್ದಾರೆ. ನಮ್ಮ ಪಕ್ಷದಲ್ಲಿ ಮಾತ್ರವೇ ಅಲ್ಲ, ಬೇರೆ ಪಕ್ಷಗಳ ಒಳಗೂ ಒಂದು ತಾತ್ತ್ವಿಕ ಮಥನ ಈಗ ನಡೆಯತೊಡಗಿದೆ.

ದಕ್ಷಿಣ ಏಷ್ಯಾದ ಬೇರೆ ದೇಶಗಳಲ್ಲಿ ಫೆಡರಲ್ ವಿಕೇಂದ್ರೀಕರಣವು ಸಾಮೂಹಿಕ ಶಕ್ತಿಯನ್ನು ಕುಗ್ಗಿಸಿದೆ. ಅದೇ ತಪ್ಪನ್ನು ನೀವು ಪುನರಾವರ್ತಿಸಲಾರಿರಿ ಎಂದು ಹೇಗೆ ಭರವಸೆ ನೀಡುತ್ತೀರಿ?

- ಫೆಡರಲ್‌ವಾದವು ಒಂದು ಪಾರ್ಲಿಮೆಂಟರಿ ಪ್ರಜಾಪ್ರಭುತ್ವದೊಳಗೆ ಪ್ರತಿಯೊಬ್ಬ ವ್ಯಕ್ತಿಯನ್ನೂ ತಲುಪಲು ನಮಗೆ ನೆರವಾಗಬಲ್ಲದು. ಈ ವಿಷಯವನ್ನು ನಾವು ರಾಜ್ಯವ್ಯವಸ್ಥಾ ಸಭೆಯಲ್ಲಿ ಚರ್ಚೆ ಮಾಡುತ್ತಿದ್ದೇವೆ. ವಿವಿಧ ಸಮುದಾಯಗಳನ್ನು ಒಳಗೊಳ್ಳಬಹುದಾದ ಹದಿನೈದು ರಾಜ್ಯಗಳ ವಿಂಗಡಣೆಗೆ ನಾವು ಸಲಹೆ ಮಾಡಿದ್ದೇವೆ. ಧಾರ್ಮಿಕ

ಜನಾಂಗೀಯ ತಿಕ್ಕಾಟಗಳು ನೇಪಾಳದಲ್ಲೂ ಆಗಲು ಸಾಧ್ಯ. Terai ನಲ್ಲಿ (ಈಗಾಗಲೇ) ಹಿಂದೂಗಳು ಮತ್ತು ಮುಸ್ಲಿಮರ ಮಧ್ಯೆ ಘರ್ಷಣೆಗಳು ನಡೆದಿವೆ. ಆದರೆ ಭಾರತದಲ್ಲಾಗುವ ಹಾಗೆ ಇವು ಹೊತ್ತಿ ಉರಿಯುವುದಿಲ್ಲ.

ಅದು ಹೇಗೇ ಇರಲಿ ಮಾವೋವಾದಿಗಳಾಗಿ ನಾವು ಆರ್ಥಿಕ ಪ್ರಗತಿಗಳು ಚಾಲನೆಗೊಂಡ ಮೇಲೆ ಧಾರ್ಮಿಕ ಮತ್ತು ಜನಾಂಗೀಯ ಭಾವಾವೇಶಗಳು ತಮ್ಮಿಂದ ತಾವೇ ಇಲ್ಲವಾಗುತ್ತವೆ ಎಂದು ನಂಬುತ್ತೇವೆ. ನೇಪಾಳದ ಮೂರು ಪ್ರದೇಶಗಳೂ ಆರ್ಥಿಕವಾಗಿ ಜೀವನಶಕ್ತಿಯಿಂದ ಕೂಡಿ ಇಂತಹ ಸಂಘರ್ಷಗಳನ್ನು ದೂರವಾಗಿಸಲಿಕ್ಕಾಗಿ ಒಗ್ಗೂಡಬೇಕಾಗಿದೆ. ಅದಕ್ಕಾಗಿ ಇಂಚಿಂಚಿನಲ್ಲೂ ಹೊಂದಾಣಿಕೆ ಆಗಬೇಕಾಗಿದೆ.

ಧಾರ್ಮಿಕ ಮತ್ತು ಜನಾಂಗೀಯ ಪ್ರಶ್ನೆಗಳು ಸಂಸ್ಕೃತಿಯ ಹೆಸರಿನಲ್ಲಿ ವೇದಿಕೆಗೆ ಬರಬಲ್ಲವು. ಪ್ರತಿಯೊಂದು ಜನಾಂಗೀಯ ಗುಂಪಿನಿಂದಲೂ ಕಾರ್ಮಿಕರು ಹಾಗೂ ರೈತರು ಪ್ರಾತಿನಿಧ್ಯ ಹೊಂದುವ ಬಗ್ಗೆ ಭರವಸೆ ನೀಡುವ ಮೂಲಕ ನಾವು ಈ ಜನಾಂಗೀಯ ಮತ್ತು ವರ್ಗೀಯ ಸಂಘರ್ಷಗಳನ್ನು ನಿವಾರಿಸಬಹುದೆಂದು ಆಶಿಸುತ್ತೇವೆ.

1996ರಲ್ಲಿ ನಾವು ಸಮರಕ್ಕೆ ತೊಡಗಿದಾಗ ನಮ್ಮೆದುರಿಗಿದ್ದ ಕಾರ್ಯಕ್ರಮ 'ಒಂದು ಹೊಸ ಪ್ರಜಾಪ್ರಭುತ್ವಕ್ಕಾಗಿ ಕ್ರಾಂತಿ' ಎಂಬುದಾಗಿತ್ತು. ಈಗಿನ ವೇದಿಕೆ ಶಾಂತಿಯ ಪ್ರಕ್ರಿಯೆ ಒಂದು ಉಪಾಂತ (penultimate) ರೂಪದ್ದು ಮಾತ್ರ. ಅಂತಿಮಗುರಿ ಇಡೀ ಆಳುವ ವ್ಯವಸ್ಥೆಯನ್ನು ಪುನಾರಚಿಸುವುದೇ ಆಗಿದೆ.

ಒಂದು ದೇಶದ ಸಂವಿಧಾನವನ್ನು ರಚಿಸುವ ಜವಾಬ್ದಾರಿಯ ಒಂದು ಭಾಗವಾಗಿರುವುದು ತುಂಬ ಮಹತ್ವದ ಘಳಿಗೆ. ಈ ಸಂವಿಧಾನ ಪ್ರಗತಿಪರವಾಗಿರುತ್ತದೆ, ಅದರಲ್ಲೂ ವಿಶೇಷವಾಗಿ ಮಹಿಳೆಯರ ಸಂಬಂಧದಲ್ಲಿ ಎಂಬ ಭರವಸೆ ನೀಡಬಲ್ಲಿರಾ?

- ಈ ಘಳಿಗೆಗಾಗಿ ನಾವು ದೀರ್ಘಕಾಲದಿಂದ ಸಿದ್ಧತೆ ನಡೆಸಿಕೊಂಡೇ ಬಂದಿದ್ದೇವೆ. ರಾಜ್ಯಸ್ಥಾಪಕ ವ್ಯವಸ್ಥೆಯ ಸಭೆಯ, ಯೋಜನೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ, ಎಲ್ಲಾ ಉಪಸಮಿತಿಗಳೊಳಗೂ ಮಹಿಳೆಯರೂ ಒಂದು ಭಾಗವಾಗಿದ್ದಾರೆ. ದಲಿತರು, ಶೆರ್ಪಾಗಳು, ಮಧೇಶಿ, ಮುಸ್ಲಿಮರ ಸಮುದಾಯಗಳ ಯುವಮಹಿಳೆಯರು ಅನೇಕರು ವಿವಿಧ ರಾಜಕೀಯ ಪಕ್ಷಗಳನ್ನು ಪ್ರತಿನಿಧಿಸುತ್ತಿದ್ದಾರೆ. ಅವರು ಆ ಉಪಸಮಿತಿಗಳೊಳಗೆ ಮಹಿಳೆಯರ, ದಲಿತರ ಮತ್ತಿತರ ಸೀಮಾಂತ ಗುಂಪುಗಳ ಜನಗಳ ಹಿತಾಸಕ್ತಿಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಭೂಸುಧಾರಣಾ ಯೋಜನೆಗಳನ್ನು ಸಿದ್ಧಪಡಿಸುತ್ತಿದ್ದಾರೆ.

  ಆಸ್ತಿಯ ಉತ್ತರಾಧಿಕಾರದ ಹಕ್ಕುಗಳೂ ಮರುಪರಿಶೀಲಿತವಾಗುತ್ತಿವೆ. ಉತ್ತರಾಧಿಕಾರವು ತಾಯಿ, ಮಗಳು ಮುಂತಾದ ಹೆಸರುಗಳ ಕ್ರಮದಲ್ಲಿ ಸಾಗುವಂತೆ ಆ ಉಪಸಮಿತಿಯು ಸಲಹೆ ನೀಡಲಿರುವುದು.

  ಉಚ್ಚತಮ ನ್ಯಾಯಾಲಯದ ತೀರ್ಪಿನ ಪ್ರಕಾರ 'ತೃತೀಯ ಲಿಂಗ'ವನ್ನೂ ಒಂದು ಲೈಂಗಿಕ ಅಸ್ಮಿತೆಯ ಘಟಕವೆಂದು ಪರಿಗಣಿಸಲಾಗುವುದು. ನಮ್ಮ ದೇಶದ ಅರ್ಜಿ ಫಾರಂಗಳಲ್ಲಿ ಮಾಮೂಲಾದ ಪುರುಷ, ಸ್ತ್ರೀ ಎಂಬ ಆಯ್ಕೆ ಬಾಕ್ಸ್‌ಗಳ ಜೊತೆ 'ತೃತೀಯಲಿಂಗ'ವನ್ನು ಸೂಚಿಸುವ ಬಾಕ್ಸ್‌ಅನ್ನೂ ಶೀಘ್ರದಲ್ಲೇ ಸೇರಿಸಲಾಗುವುದು. ಲೈಂಗಿಕ ಅಸ್ಮಿತೆಗಳ ವಿಷಯದಲ್ಲಿ ನೇಪಾಳ ಸಮಾಜ ಉದಾರವಾಗಿಯೇ ಇದೆ. ಎಡಪಂಥವು ಇಂತಹ ಪ್ರಶ್ನೆಗಳ ಬಗ್ಗೆ ವಿಶೇಷವಾದ ಸಹನೆಯನ್ನು ಹೊಂದಿದೆ. ನಿಜವೆಂದರೆ, ಸುನೀಲ್‌ಪಂತ್, ನೇಪಾಳದ ಮೊಟ್ಟ ಮೊದಲ'ಗೇ' ಸದಸ್ಯರೆಂದು ಪಾರ್ಲಿಮೆಂಟಿನಲ್ಲಿ ಘೋಷಿಸಿಕೊಂಡಿದ್ದಾರೆ. ಇಷ್ಟಾದರೂ ಪಿತೃಪ್ರಾಧಾನ್ಯದ ವಿರುದ್ಧವಾದ ಮಹಿಳಾ ಹೋರಾಟದ ಹಾದಿ ಇನ್ನೂ ಬಹು ದೂರದ್ದೂ, ಕಷ್ಟಕರವೂ ಆಗಿದೆ ಎನ್ನಬೇಕು. constituent assembly ಚುನಾವಣೆಗಾಗಿ ನನ್ನ ಹೆಸರನ್ನು ನೋಂದಾಯಿಸುವಾಗ ಅಧಿಕಾರಿಗಳು ನಾನು ನನ್ನ ಗಂಡನ ಹೆಸರನ್ನು ಬಳಸಬಹುದೆಂದು ಊಹಿಸಿಕೊಂಡು Hisila yami Bhattarai ಎಂದೇ ನೋಂದಾಯಿಸಿದ್ದರು!

ಇಂದಿನ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಭಾರತವು ನೇಪಾಳದಲ್ಲಿ ಎಂತಹ ಪಾತ್ರವಹಿಸಬೇಕೆಂದು ನಿಮ್ಮ ನಿರೀಕ್ಷೆ?

- ಭಾರತವು ನಿಜವಾಗಿ ಪ್ರಬುದ್ಧತೆಯಿಂದ ತನ್ನ ಪಾತ್ರವನ್ನು ವಹಿಸಬೇಕು. ಸೇನಾಮುಖಂಡರಾದ ಕಟವಾಲರು ತೋರಿದ unparliamentary ಪ್ರತಿಕ್ರಿಯೆ ಬಗ್ಗೆ ತೀವ್ರವಾದ ಆಕ್ಷೇಪವೆದ್ದಿತು. ಈ ವಾದವಿವಾದಗಳು ನಡೆಯುತ್ತಿದ್ದಾಗ ಭಾರತವು ಆತನನ್ನೇ ಬೆಂಬಲಿಸಿತು ಮತ್ತು ದೊರೆತನ ಮತ್ತು ಯಥಾಸ್ಥಿತಿವಾದಗಳನ್ನು ಎತ್ತಿಹಿಡಿಯುವ ಸೈನ್ಯದೆದುರಲ್ಲಿ ತಲೆಬಾಗಬೇಕೆಂದು ನಮ್ಮ ಮೇಲೆ ಒತ್ತಡವನ್ನು ಹೇರಿತು.

ಭಾರತ ಸರ್ಕಾರವು CPI ಮಾವೋವಾದಿಗಳನ್ನು ಭಯೋತ್ಪಾದಕರೆಂದು ಘೋಷಿಸಿ ಅವರನ್ನು ನಿಷೇಧಿಸಿದೆ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ? ಮಾವೋವಾದಿಗಳೊಂದಿಗೆ ನೀವು ಸೈನ್ಯ ಸಂಬಂಧ ಇಟ್ಟುಕೊಂಡಿದ್ದೀರಾ?

- ಹೊರಗಿನ ವೇಷವನ್ನು ನಿಷೇಧಿಸಿದ್ದರಿಂದ ಯಾವ ಪ್ರಯೋಜನವೂ ಇಲ್ಲ, ಆರ್ಥಿಕ ಸಮಸ್ಯೆಗಳನ್ನು ಆರ್ಥಿಕ ಕಾರ್ಯಕ್ರಮಗಳ ಮೂಲಕವೇ ಎದುರಿಸಬೇಕು. ಭಾರತೀಯ ಮಾವೋವಾದಿ ಪಕ್ಷಗಳು ತಮ್ಮ ಗುರಿಯತ್ತ ನಿಗಾವಹಿಸುತ್ತಾರೆ; ನಾವು ನಮ್ಮ ಗುರಿಯಕಡೆ ಗಮನ ಕೇಂದ್ರೀಕರಿಸುತ್ತೇವೆ. ನಮಗೆ ಅವರ ಬಗ್ಗೆ ಸಹಾನುಭೂತಿಯಂತೂ ಖಂಡಿತವಾಗಿ ಇದೆ.

ನೇಪಾಳದಲ್ಲಿನ ಈ ಬೆಳವಣಿಗೆಗಳ ಬಗ್ಗೆ ಚೀನಾ ಹೇಗೆ ಪ್ರತಿಕ್ರಿಯಿಸುತ್ತಿದೆ?

- ಚೀನಾದೇಶ ಈಗ ವ್ಯಾಪಾರದಲ್ಲಿ ತುಂಬ ಬ್ಯುಸಿಯಾಗಿದೆ (ಮುಗುಳ್ನಗೆ)


(ತೆಹಲ್ಕಾ ಪತ್ರಿಕೆಯಲ್ಲಿ 1ನೇ ಆಗಸ್ಟ್, 2009ರಲ್ಲಿ ಪ್ರಕಟವಾಗಿರುವ ಸಂದರ್ಶನ ಲೇಖನದ ಅನುವಾದ : ಡಾ॥ ಬಿ.ಎನ್. ಸುಮಿತ್ರಾಬಾಯಿ)

❑

ಮಹಿಳಾ ಸ್ವಾತಂತ್ರ್ಯ ಎನ್ನುವುದು ಅಮೂರ್ತವಲ್ಲ. ನಾವು ಬದುಕುತ್ತಿರುವ ಸನ್ನಿವೇಶಗಳಿಗೆ ಮೀರಿದ ಅಲೌಕಿಕ ವಿಷಯವೂ ಅಲ್ಲ. ಸ್ವಾತಂತ್ರ್ಯವನ್ನು ವೈಯಕ್ತಿಕ ಕಾರಣಗಳೂ ಹತ್ತಿಕ್ಕಿರಬಹುದು, ಸನ್ನಿವೇಶವೂ ಅದನ್ನು ನಿಯಂತ್ರಿಸುತ್ತಿರಬಹುದು. ಆದ್ದರಿಂದ ಹೆಣ್ಣು ತನ್ನ ಸ್ವಾತಂತ್ರ್ಯವನ್ನು ಪಡೆಯಬೇಕಾದರೆ ಅದರ ಬಗೆಗಿನ ತಿಳಿವಳಿಕೆ, ಅದನ್ನು ಪಡೆಯಲು ಪ್ರಯತ್ನ ಎರಡೂ ಅತ್ಯಗತ್ಯ ಅನುಭವ ಏನನ್ನು ಕಲಿಸುತ್ತಿದೆ, ಅದರಿಂದ ಬರುವ ತಿಳಿವಳಿಕೆ ಏನೋ ಅದನ್ನು ದೂರ ಮಾಡಿದಷ್ಟೂ ಹೆಣ್ಣು ತನ್ನ ದಾಸ್ಯದ ಸಂಕೋಲೆಗಳಿಂದ ತನ್ನನ್ನು ತಾನೇ ಸುತ್ತಿಕೊಳ್ಳುತ್ತಿರುತ್ತಾಳೆ.

–ಸುಮಿತ್ರಾ

ಧರ್ಮ- ನ್ಯಾಯದೊಳಗಿನ ಬಲಿಪಶುಗಳ ತವಕ ತಲ್ಲಣಗಳು



ಡಾ. ಲತಾ ಗುತ್ತಿ

ಅರಬ್‌ನಾಡಿನಲ್ಲಿ ನಾವಿದ್ದ ಅಮೆರಿಕನ್ ಕ್ಯಾಂಪಸ್ಸಿನಲ್ಲಿ ಚಿತ್ರಕಲಾ ಪ್ರದರ್ಶವೊಂದನ್ನು ಏರ್ಪಡಿಸಲಾಗಿತ್ತು. ಅದು ಕೇವಲ ಮಹಿಳೆಯರೇ ಬಿಡಿಸಿದ ಚಿತ್ರಗಳಾಗಿರಬೇಕೆಂದು ಪ್ರಾಯೋಜಕರ ನಿರ್ಣಯವಾಗಿತ್ತು. ಅಲ್ಲಿ ಯಾವುದೇ ದೇಶ-ಭಾಷೆಯವರೂ ಇರಬಹುದಾಗಿತ್ತು.

ಅಮೆರಿಕನ್ ಮಹಿಳೆಯರಿಗೆ ಹೊಸದೇನಾದರೂ ಮಾಡುವ ಹುಮ್ಮಸ್ಸು. ತಮ್ಮ ದೇಶದಲ್ಲಿ ಅಷ್ಟೇ ಅಲ್ಲ, ಹೊರದೇಶಗಳಲ್ಲಿ ಇದ್ದಾಗಲೂ ಸುಮ್ಮನೆ ಕೊಡುವ ಜನರಲ್ಲ ಅವರು. ಯಾವುದಾದರೊಂದು ಕೆಲಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಮಯ ಸಾರ್ಥಕ ಪಡಿಸಿ ಕೊಳ್ಳುವವರು. ಈ ಹಿನ್ನೆಲೆಯಲ್ಲಿಯೇ ಮಹಿಳೆಯರು ಬಿಡಿಸಿದ ಚಿತ್ರಕಲೆಗಳ ಪ್ರದರ್ಶನದ ಬಗೆಗೆ ತಿಳಿದುಕೊಳ್ಳುವಾಸೆ ಅವರಿಗಾಗಿರಬೇಕು. ಅಷ್ಟೇ ಆಸೆಯಾಗಿದ್ದರೆ ಸ್ಪಷ್ಟವಾಗಿ ಕೇವಲ ಅಮೆರಿಕದ ಮಹಿಳೆಯರ ಚಿತ್ರಗಳು ಎಂದು ತಿಳಿಸುತ್ತಿದ್ದರು. ಅವರ ಆಸೆ ಕೇವಲ ಅಷ್ಟೇ ಆಗಿರಲಿಲ್ಲ, ಅನೇಕ ವಿದೇಶಿ ಮಹಿಳೆಯರೆಲ್ಲ ಈ ಅರಬ್ ನಾಡಿನಲ್ಲಿ ಸಿಗುತ್ತಾರೆ (ಗಂಡಂದಿರೊಂದಿಗೆ ಬಂದವರು ಅಥವಾ ಬೇರೆ ಬೇರೆ ಹುದ್ದೆಗಳಿಗೆ ನೇಮಕಗೊಂಡು ಬಂದವರು), ಕಲಾಕಾರರಿದ್ದಾರೆ. ಆ ಮುಖಾಂತರ ಮಹಿಳೆಯರ ಭಾವನೆಗಳನ್ನು ತಿಳಿದುಕೊಳ್ಳಬಹುದು ಎಂಬುದು ಅವರ ಉದ್ದೇಶ. ಅವರು ನಿರೀಕ್ಷಿಸಿದಂತೆಯೇ 25ಕ್ಕಿಂತಲೂ ಹೆಚ್ಚು entry ಗಳು ಬಂದದ್ದು ತಿಳಿಸಿದರು. ಅದರಲ್ಲಿ ಯುರೋಪಿಯನ್ ಮಹಿಳೆಯರೇ ಹೆಚ್ಚಿನವರಾಗಿದ್ದರೆ ಇನ್ನಿತರ ಜಪಾನ್, ಚೈನಾ, ಅಮೆರಿಕದವರೆಂದು 3-4ರಂತೆ ಇದ್ದರು. ಭಾರತೀಯರ ಬಗೆಗೆ ಕುತೂಹಲ ಇದ್ದ ನನಗೆ ಅಲ್ಲಿ ಯಾರೊಬ್ಬರೂ ಭಾಗವಹಿಸಿರಲಿಲ್ಲ ಎಂಬುದು ಆಶ್ಚರ್ಯ. ಕೊನೆಯದಾಗಿ ಆಫ್ರಿಕದ ಒಬ್ಬಳು ಹಾಗೂ ಅರೇಬಿಯಾದ ಒಬ್ಬಳು ಇದ್ದದ್ದು ತಿಳಿದುಬಂತು. ಒಂದು ಅಂದಾಜಿನ ಪ್ರಕಾರ ಇಂಡಿಯನ್ ಎಂಬೆಸಿಯಿಂದ (1983) 3 ಲಕ್ಷಕ್ಕೂ ಮೇಲ್ಪಟ್ಟು ಭಾರತೀಯರು ಈ ಅರಬ್ ನಾಡಿನಲ್ಲಿದ್ದಾರೆಂದು ತಿಳಿದುಕೊಂಡಿದ್ದೆ. ಮಹಿಳೆಯರು 25% ಆದರೂ ಇದ್ದೇ ಇರ್ತಾರೆ. ಅದರಲ್ಲಿ ಒಂದೈದಾರು ಮಹಿಳೆಯರಾದರೂ ಆಸಕ್ತಿ ತೆಗೆದುಕೊಂಡಿರುತ್ತಾರೆಂದುಕೊಂಡಿದ್ದೆ, ಹಾಗಾಗಲಿಲ್ಲ. (ಸಂಗೀತ, ನೃತ್ಯ, ಲೇಖಕಿಯರು ಅಲ್ಲಲ್ಲಿ ಇದ್ದಾರೆಂದು ಅನಂತರದ ವರ್ಷಗಳಲ್ಲಿ ತಿಳಿದುಬಂತು)

ಅದೊಂದು ಸಂತಸದ ಬೆಳಗು. ಬಾಂಬೆಯ ಜಹಾಂಗೀರ ಆರ್ಟ್ ಗ್ಯಾಲರಿಯಲ್ಲಿ ಈ ಮೊದಲು ಎರಡು ಸಲ ಚಿತ್ರಕಲಾ ಪ್ರದರ್ಶನ ನೋಡಿದ ನನಗೆ ಅಂಥವೇ ಚಿತ್ರಗಳು ಪದೇ ಪದೇ ಇಲ್ಲಿ ಕಣ್ಮುಂದೆ ಬರುತ್ತಿದ್ದವು. ಕಪ್ಪು ಬಿಳುಪಿನ ಚಿತ್ರಗಳು, ಬಣ್ಣಬಣ್ಣದ ಚಿತ್ರಗಳು, ಅವನ್ನು ಇಷ್ಟಪಟ್ಟವರಿಗೆ ವಿವರಿಸಿ ಹೇಳುವ ಕಲಾಕಾರರು, ಹೀಗೆ. ಕಲೆಯ ಬಗೆಗೆ ಪ್ರಾಸ್ತಾವಿಕವಾಗಿ ಪರಿಚಯಿಸಿ, ಕಲಾಕಾರರನ್ನು ಪರಿಚಯಿಸಿ, ಈಗ ನೀವು painting ನೋಡಿರಿ, ಅನಂತರ ಚರ್ಚಿಸೋಣ ಎಂದರು.

ನಾನು ಮತ್ತು ನನ್ನ ಆತ್ಮೀಯರಾದ 3-4 ಗೆಳತಿಯರು ಚಿತ್ರಗಳನ್ನು ನೋಡುತ್ತ, ತಿಳಿದದ್ದು ತಿಳಿಯದೇ ಇದ್ದದ್ದು ಕೂಡಾ ಮಾತನಾಡುತ್ತ ಕಲಾಕಾರರನ್ನು ಚೆನ್ನಾಗಿದೆಯೆಂದು ಅಭಿನಂದಿಸುತ್ತಾ ನಡೆದೆವು. ಅಮೆರಿಕನ್ನರ ಯುರೋಪಿಯನ್ನರ ಚಿತ್ರಗಳಲ್ಲಿ ತಮ್ಮ life style ಗೆ ಹೊಂದುವಂತಹ ನೇರವಾದ ಚಿತ್ರಗಳಿದ್ದವು. ಜಪಾನ್, ಚೈನಾದವರ ಚಿತ್ರಗಳು ಕುಸುರಿ ಕೆಲಸ ಮಾಡಿದಂಥವು. ಆಸ್ಟ್ರೇಲಿಯಾದ ಒಂದಿಬ್ಬರವು ಕಾಂಗರೂ, ಎಮೂ ಪ್ರಾಣಿಗಳ ಹಿನ್ನೆಲೆಯ ನಿಸರ್ಗದ ಸುಂದರ ಚಿತ್ರಗಳಿದ್ದವು. ಮುಂದೆ ನಡೆದಂತೆ ಆಫ್ರಿಕ ಮಹಿಳೆಯದು ಒಂದೇ painting. ಅದು ಕಿಂಬರ್ಲಿಯಲ್ಲಿ ಸಿಕ್ಕ ದೊಡ್ಡ ವಜ್ರ. ಮೂಲೆ ಮೂಲೆಗಳ ಕೆತ್ತನೆಯಿಂದ ವಜ್ರ ಹೊಳೆಯುತ್ತಿದೆ. ಆ ವಜ್ರ ಒಂದು ಬೆಟ್ಟದಂತೆ, ಅದನ್ನೇರಲೋ ಪಡೆಯಲೋ ಕರಿಯರು ಪಡುತ್ತಿರುವ ಶ್ರಮ, ದೂರದಲ್ಲಿ ಬಿಳಿಯರ ಹಲ್ಲುಗಳು. ಕಲಾಕಾರ್ತಿ ಅದರ ಒಟ್ಟು ಆಶಯ ನಮಗೆಲ್ಲಾ ಬಿಡಿಸಿ ಹೇಳಿದಳು. ಮುಂದಿನ ಸಾಲಿನಲ್ಲಿ ಕೂಡಾ ದೊಡ್ಡದಾದ ಒಂದೇ ಒಂದು ಕಲಾಕೃತಿ ಅದು ಕಪ್ಪು ಬಿಳುಪಿನದು. ಅದರಲ್ಲಿ ಏನೇನೋ ಅಮೂರ್ತತೆಗಳು, ಏನೊಂದೂ ತಿಳಿಯಲಿಲ್ಲ. ಕಲಾಪ್ರಿಯರು ಏನೇನೋ ಚರ್ಚಿಸುತ್ತಲೇ ಇದ್ದರೂ ನಾವು ದಾಟಿಕೊಂಡು ಮುಂದಿನ ಚಿತ್ರದೆಡೆಗೆ ಹೋದೆವು. ನಡುನಡುವೆ ಚಿತ್ರದ ಸಂಖ್ಯೆ 13, ಕಲಾವಿದೆ ಸಜಿದಾ ತಮ್ಮ ಕಲೆಯ ಹತ್ತಿರವೇ ಇರಬೇಕೆಂದು ಅನೌನ್ಸ್ ಮಾಡುತ್ತಲೇ ಇದ್ದರೂ ಆಕೆ ಕಾಣಿಸಲೇ ಇಲ್ಲ. ಅದೇ ಕಪ್ಪು ಬಿಳುಪಿನ ಕೃತಿಯ ಕಲೆಗಾರ್ತಿ. ಒಂದೂವರೆ ಗಂಟೆಯ ಸುತ್ತಾಟದ ನಂತರ ಎಲ್ಲರೂ ಮರಳಿ ತಮ್ಮ ತಮ್ಮ ಕುರ್ಚಿಗೆ ಬಂದೆವು.

ಸಾಜಿದಾ ಯಾರು? ಈವರೆಗೂ ನಮಗೆ ಕಾಣಿಸಿಕೊಂಡಿಲ್ಲ. ಈ

ಚಿತ್ರ ತಂದಿಟ್ಟವರು ಯಾರು? ಅವರು ಇದೇ ದೇಶದವರು, ಇದೇ ನಗರದವರು ಆಗಿರುವುದರಿಂದ ಬಹಳ ಹೆಮ್ಮೆಯಿಂದ ಎದ್ದು ನಿಲ್ಲಬೇಕೆಂದು ಹೇಳುತ್ತಿದ್ದರೂ ಯಾರೊಬ್ಬರೂ ಅಲುಗಾಡುತ್ತಿಲ್ಲ! ಅನಂತರ ಒಟ್ಟಾರೆಯಾಗಿ ಚಿತ್ರಗಳ ಚರ್ಚೆ-ಪ್ರತಿಚರ್ಚೆ, ಅದರೊಳಗಿನ ಬಣ್ಣ ಭಾವನೆಗಳ ಆಶಯಗಳು ಎಲ್ಲ ಮಾತಿಗೆ ಬರುತ್ತಿದ್ದವು. ಅಷ್ಟರಲ್ಲಿಯೇ ಬುರ್ಕಾ ಮಹಿಳೆಯೊಬ್ಬಳು ಬಾಗಿಲಲ್ಲಿ ಕಾಣಿಸಿಕೊಂಡಳು. ಇವರಿಗೆ ಸಮಯ ಪ್ರಜ್ಞೆಯೇ ಇಲ್ಲವೆಂದು, ಇಂಥವರಿಗೆ ಈ ಕಾರ್ಯಕ್ರಮವಾದರೂ ಯಾಕೆ ಬೇಕೆಂದು ಉಳಿದ ಮಹಿಳೆಯರು ಗುಸುಗುಸು ಮಾತಾಡಿಕೊಳ್ಳುತ್ತಿದ್ದಂತೆಯೇ ಆ ಮಹಿಳೆ ತನ್ನ ನಯನಾಜೂಕಾದ ಜಾರ್ಜೆಟ್ ಬುರ್ಕಾ ತೆಗೆದು ಕ್ಷಮೆಯಾಚಿಸುತ್ತಲೇ ತಾನು ಸಾಜಿದಾ ಎಂದು ಪರಿಚಯಿಸಿಕೊಂಡು ಎಲ್ಲರಿಗೂ ಗುಡ್‌ಮಾರ್ನಿಂಗ್ ಎನ್ನುತ್ತ ಸುಂದರವಾದ ಆಕರ್ಷಕ ನಗೆ ಬೀರಿದಳು. ಒಂದು ಕ್ಷಣ ಅಮೆರಿಕನ್ ಮಹಿಳೆಯರೂ ಕೂಡಾ ಅವಳ ಮಾತು, ಅವಳ ಶ್ರೀಮಂತ personality ಗೆ ಬೆರಗಾದರೆನ್ನಿ. ಕಾರಣ ಅರಬ್ ಮಹಿಳೆಯರು ಇವರೇನು ಎನ್ನುವ ತಾತ್ಸಾರ ಇತ್ತಲ್ಲ!

ಸಾಜಿದಾ ವೇದಿಕೆಗೆ ಬಂದು ಅಮೆರಿಕನ್ ಧ್ವನಿಯಲ್ಲಿ "ಹುಟ್ಟಿದ್ದು, ಬೆಳೆದದ್ದು, ಓದಿದ್ದು ಅಮೆರಿಕದಲ್ಲಾದರೂ ಅಮ್ಮ ಅಪ್ಪನ ಊರು ಇದೇ ನಗರ, ಮರಳಿ ಬಂದು ಅವರು ಇಲ್ಲಿಯೇ ಸಮಾಧಿಯಾಗ ಬೇಕಂತೆ. ಇಲ್ಲಿಯ ಅತೀ ಶ್ರೀಮಂತ ಕುಟುಂಬದ ವ್ಯಕ್ತಿಗೆ ಅಮೆರಿಕದಲ್ಲಿ ಓದಿದ ಹುಡುಗಿಬೇಕೆಂದು ನನ್ನನ್ನು ಮದುವೆಯಾಗಿದ್ದಾನೆ. ಅಲ್ಲಿ ಸ್ವತಂತ್ರವಾಗಿ ಬೆಳೆದ ನಾನು ಇಲ್ಲಿ ಬುರ್ಕಾದಲ್ಲಿ ಬಂದಿಯಾಗಿದ್ದೇನೆ. ಆಗಲೇ ನನ್ನ ಅಮೆರಿಕನ್ passport ಇನ್ನಿತರ ಕಾಗದ ಪತ್ರಗಳನ್ನೆಲ್ಲಾ ಸುಟ್ಟುಹಾಕಿದ್ದಾನೆ. ಪ್ರತಿನಿತ್ಯ ಲಕ್ಷ ಲಕ್ಷ ಹಣ ಖರ್ಚು ಮಾಡಬಹುದಿಲ್ಲಿ, ಆದರೆ ನೆಮ್ಮದಿ ಇಲ್ಲ. ನೆಮ್ಮದಿ ನಾನೇ ಕೆಡಿಸಿದ್ದೆಂದು ಆಗಲೇ ಎರಡನೆಯ ಮದುವೆಯಾಗಿದ್ದಾನೆ. ಅವಳನ್ನೂ ಪಾಶ್ಚಾತ್ಯರ ಹಾಗೆ ಕಾಣಿಸುತ್ತಿಲ್ಲವೆಂದು, ನಡೆನುಡಿಯೆಲ್ಲಾ ಹಳೆಯ ಅಥವಾ ಸಾಮಾನ್ಯ ರೀತಿಯದ್ದೆಂದು ಹೀಯಾಳಿಸುತ್ತಾನೆ. ನಾನು ಮೇಕಪ್, ಸಿಗಾರ್, phone ಎಂದು ಕೊಂಡರೆ ಕತ್ತುಹಿಚುಕುವದಕ್ಕೆ ಬರುತ್ತಾನೆ. ಬುರ್ಕಾ ಹಾಕಿಕೊಂಡು ಜೊತೆಯಾಗಿ ಹೋಗಲು ಹೊರಬೀಳುತ್ತಿದ್ದಂತೆಯೇ ಬುರ್ಕಾ ಎಳೆದು ಚೆನ್ನಾಗಿ ಬಾರಿಸಿ ತಳ್ಳಿ ಹೋಗುತ್ತಾನೆ. ನೀನೊಬ್ಬ ಮಾನಸಿಕ ರೋಗಿ ನನ್ನನ್ನು ಅಮೆರಿಕೆಗೆ ಕಳಿಸಿಬಿಡು ಎಂದರೆ ಎದ್ದು ನಿಲ್ಲಲಿಕ್ಕೆ ಬರದಷ್ಟು ಒದ್ದು ಬಿಡುತ್ತಾನೆ. ಯಾರೊಂದಿಗೂ ಮಾತನಾಡದಂತೆ ಎರಡು ಮೂರು ಹೆಣ್ಣಾಳುಗಳನ್ನು ಕಾಯಲು ಇಟ್ಟಿದ್ದಾನೆ. ದೊಡ್ಡ ಕಾಂಪೌಂಡು ಗೇಟು ದಾಟಿ ಈಚೆಗೆ ಬರುವ ಮಾತಂತೂ ದೂರವೇ ಉಳಿಯಿತು. ಈ ಎರಡು ವರ್ಷಗಳಲ್ಲಿ ನನ್ನ ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದೇನೆ" ಎಂದು ಉಸಿರೆಳೆದು ಬಿಕ್ಕಿದಳು.


ಈ ಎಲ್ಲ ಬಂದೀಖಾನೆಯಿಂದ ದಾಟ ಈಗ ಬಂದದ್ದು ಹೇಗೆ? ಎನ್ನುವ ಒಬ್ಬರ ಪ್ರಶ್ನೆಗೆ "ಡ್ರೈವರ್ ಮತ್ತವನ ಹೆಂಡತಿಯ ಸಹಾಯ ಕೋರಿ ಇಲ್ಲಿಗೆ ಬದಿದ್ದೇನೆ. ಮನೆಯಲ್ಲಿದ್ದ ಗಂಡನ ಬಿಳಿಯ ಉದ್ದನೆಯ ಅಂಗಿಯ ಮೇಲೆಯೇ ನನ್ನ ಕೋಪವನ್ನೆಲ್ಲಾ ಕಾರಿಕೊಂಡಿದ್ದೇನೆ, ಇದಕ್ಕೆ ಯಾವ ಬಣ್ಣವೂ ಇಲ್ಲ. ಕೋಪ ದ್ವೇಷಕ್ಕೆ ಒಂದೇ ಬಣ್ಣ ಅದು ಕಪ್ಪುಬಣ್ಣ. ನಾನು ಹೀಗೆ ಬದುಕಬೇಕಿಲ್ಲ, ನಾನು ಹೀಗೆ ಹೋರಾಡಬೇಕಿಲ್ಲ" ಎಂದು ಸಾಜಿದಾ ಕೈಯೆತ್ತಿ ಕೂಗಾಡುತ್ತಿದ್ದಾಳೆ. ಆಕೆಯ ಕಪ್ಪು ಬಿಳುಪಿನ ಚಿತ್ರ ವೇದಿಕೆಯ ಹತ್ತಿರ ಬಂದಿತು. ಮತ್ತೊಬ್ಬ ಬುರ್ಕಾ ಮಹಿಳೆ ಗಡಿಬಿಡಿ ಯಿಂದ ವೇದಿಕೆಯೆಡೆಗೆ ಬಂದವಳೇ ಬಾಗಿಲು ಕಡೆಗೆ ಕೈ ತೋರಿಸಿ ಹೆದರಿಕೆಯಿಂದ ನಡುಗತೊಡಗಿದಳು. ಅದನ್ನರಿತ ಸಾಜಿದಾ "ನಾನು ಅಮೆರಿಕೆಗೆ ಮರಳಬೇಕು please help me" ಎನ್ನುತ್ತ ತನ್ನ phone ನಂಬರ್ ಬರೆದಿಟ್ಟು ಬಾಗಿಲಕಡೆಗೆ ಹೆಜ್ಜೆ ಹಾಕಿದಳು. ನಾವುಗಳೆಲ್ಲರೂ ಕೂಡಾ ಎದ್ದು ಬಾಗಿಲಕಡೆಗೆ ಧಾವಿಸಿದೆವು. ಹೊರಗೆ ಗೇಟಿನ ಹತ್ತಿರವೇ ನಿಂತಿದ್ದ ಫಳಫಳ ಹೊಳೆಯುವ ಬೆಂಜ್ ಮರ್ಸಿಡಿಸ್‌ಕಾರ್ ಬಳಿ ಉದ್ದನೆಯ ಅಂಗಿಯವ ಕಪ್ಪುಗಾಗಲ್ಸ್ ಹಾಕಿಕೊಂಡು ಕಾರಿನ ಬಾಗಿಲಿನ ಒಳಗಡೆಯೇ ನಿಂತಿದ್ದಾನೆ. ನಾವೆಲ್ಲ ನೋಡುತ್ತಿದ್ದಂತೆಯೇ ಕ್ಷಣಾರ್ಧದಲ್ಲಿ ಸಾಜಿದಾಳ ಕೆನ್ನೆಗೆ, ಬೆನ್ನಿಗೆ ಬಾರಿಸಿ ಕಾರಿನೊಳಗಡೆ ನೂಕಿದ. ಈ ಮೊದಲು ಬಂದ ಸಾಜಿದಾಳ ಕಾರಿನ ಡ್ರೈವರ್‌ನಿಗೆ ಸರಿಯಾಗಿ ಒದ್ದು ಅವನ ಹೆಂಡತಿಯ ಮೇಲೆ ಉಗುಳಿ ಚೀರಾಡುತ್ತ ಕಾರು ಸುರುಮಾಡಿ ಕೊಂಡು ಹೋಗಿಯೇ ಬಿಟ್ಟ. ಸಾಜಿದಾ ಬಂದಾಗಿನಿಂದ ಈಗ ಹೋಗುವವರೆಗಿನ ಒಟ್ಟಾರೆ ದೃಶ್ಯ ಎಲ್ಲರಿಗೂ ದಿಗ್ಭ್ರಮೆ ತಂದಿತ್ತು. ಅವಳ ಚಿತ್ರಕ್ಕೆ (painting) ಮತ್ತೆಲ್ಲರೂ ಮುಗಿಬಿದ್ದರು. ಮೂರನೆಯ ಕಣ್ಣು ತೆರೆಯ ತೊಡಗಿದರು. ಪಾಪದ ಹುಡುಗಿ ಅನ್ನುವವರೇ ಎಲ್ಲರು. ಜೊತೆಗೆ ಮಹಿಳೆ, ಸ್ವಾತಂತ್ರ್ಯ, ಸಮಾನತೆ, ಧರ್ಮ ಎಂದು ಮಾತುಕತೆಗಳು ಸುರುವಾದವು. ಊಹಿಸಿಕೊಳ್ಳಲಾರದಂತಹ ಈ ಘಟನೆಗೆ ತತ್ತರಿಸಿ ಹೋದೆ. ಟೇಬಲ್ ಮೇಲಿಟ್ಟ ಕೂಲ್‌ಡ್ರಿಂಕ್ಸ್ ಕುಡಿದು ಹೊರಬಿದ್ದಾಗ ಬಿಸಿಲಿನ ಉರಿ ಇಮ್ಮಡಿಯಾದಂತಾಗಿತ್ತು.

ನಾನು ಮಧ್ಯಾಹ್ನ ಮನೆಗೆ ಬಂದಾಗ 2 ಗಂಟೆ. ಅಂದು ರಜೆಯಾದುದರಿಂದ ನನ್ನ ಪತಿ ಮನೆಯಲ್ಲಿಯೇ ಇದ್ದರು. ಹೇಗಿತ್ತು ಚಿತ್ರಕಲಾ ಪ್ರದರ್ಶನ ಎಂದರು. ನಾನೇನು ಹೇಳಬೇಕು. ಚಿತ್ರಗಳ ಬಗೆಗೆ ಹೇಳಲೆ? ಕಲಾಕಾರರ ಬಗೆಗೆ ಹೇಳಲೆ? ಕಲೆಗಳ ಒಳತೋಟಗಳ ಬಗೆಗೆ ಹೇಳಲೆ? ಸಾಜಿದಾಳ ಚಿತ್ರ ಕುರಿತು ಹೇಳಲೆ? ಆಕೆಯ ಗಂಡನ ಕ್ರೂರತೆ ಬಗೆಗೆ ಹೇಳಲೆ? ನಂತರ ನಡೆದ ಮಹಿಳಾ ಸ್ವಾತಂತ್ರ್ಯ, ಸಮಾನತೆ ಬಗೆಗಿನ ಚರ್ಚೆಗಳನ್ನು ಹೇಳಲೆ? ಕೊನೆಯದಾಗಿ ಸಿಗರೇಟ್ ಎಳೆಯುತ್ತ ಸಾಜಿದಾಳ ಬಿಡುಗಡೆಯ ಬಗೆಗೆ ಕೂಗಾಡುವ ಮಹಿಳೆಯರ ಬಗೆಗೆ ಹೇಳಲೆ? ಇನ್ನೂ ಕೊನೆಯದಾಗಿ ಸಾಜಿದಾಳ ಬಣ್ಣ ಸುಣ್ಣ ಚೌಕಟ್ಟು, ತಲೆಬರಹ ಇಲ್ಲದ ಚಿತ್ರ ಕೊಂಡುಕೊಂಡ ಮತ್ತೊಬ್ಬ ಮೂರ್ಖಳು ಎನ್ನಲೊ ಅಥವಾ ಅಮೂರ್ತದಲ್ಲಿ ಮೂರ್ತತೆ ಹುಡುಕುವ ಮುಕ್ಕಣ್ಣಿನವಳ ಬಗೆಗೆ ಹೇಳಲೆ? ಅಥವಾ ಸಾಜಿದಾಳ ಗಂಡನ ಎರಡನೆಯ ಹೆಂಡತಿಯ ಕಥೆ ಹೇಳಲೆ? ಯಾಕೋ ಮನಸ್ಸು ತಲ್ಲಣಗೊಂಡಿತ್ತು. ಸುಶಿಕ್ಷೆ, ಶ್ರೀಮಂತ ಸುಂದರಿ ಎಲ್ಲವೂ ಇದ್ದು ಏನೂ ಇರದಂತಿರುವ ಸಾಜಿದಾಳ ಅಪಮಾನ, ಏಕಾಂಗಿತನ, ನಿರಾಶೆ, ಹತಾಶೆಗಳ ಬಗೆಗಿನ ಚಿತ್ರಗಳು ಎದುರಾಗತೊಡಗಿದವು. ಪತಿಗೆ ಏನೋ ನೆಪ ಹೇಳಿ ಹಾಸಿಗೆಮೇಲೆ ಬಿದ್ದುಕೊಂಡೆ. ಎಲ್ಲಿಯ ನಿದ್ದೆ, ಕಣ್ಣುಗಳು ಒದ್ದೆಯಾಗತೊಡಗಿದ್ದವು. ಅನಂತರದ ದಿನಗಳಲ್ಲಿ ಅವಳಿಗದೆಷ್ಟೋ ಬಾರಿ phone ಮಾಡಿದರೂ ಯಾರೊಬ್ಬರಿಗೂ ಸಿಗಲಿಲ್ಲ. ಸಾಜಿದಾ ಈಗಲೂ ನೆನಪಾಗುತ್ತಾಳೆ. ಬುರ್ಕಾ ಮಹಿಳೆಯರನ್ನು ನೋಡಿದಾಗೆಲ್ಲ ಸಾಜಿದಾ ಕಾಡುತ್ತಾಳೆ.

* * *

1986ರಲ್ಲಿ ನಾವು ಫ್ರಾನ್ಸ್‌ದಲ್ಲಿದ್ದಾಗ ಅಲ್ಲಿಯ ಜನರನ್ನು ನೋಡಿ ಆಶ್ಚರ್ಯಪಟ್ಟೆ. ಅವರೆಲ್ಲರ ಆಳೆತ್ತರದ ಮೈಕಟ್ಟು, ಬೆಲೆಬಾಳುವ ವಸ್ತ್ರಗಳು, ನೇರವಾಗಿ ಮಾತನಾಡುವ ಅವರ ಧೈರ್ಯ, ಮಹಿಳೆಯರಂತೂ ಸಲಗಗಳಂತೆ, ಎದುರಾಳಿಗಳೇನಾದರೂ ಹೆಚ್ಚು ಕಡಿಮೆ ಮಾಡಿದರೋ ಒಬ್ಬೊಬ್ಬರನ್ನು ಎತ್ತಿ ಚಚ್ಚಿಹಾಕಿಬಿಡುವ ದಾರ್ಢ್ಯ ಪೊಲೀಸ್ ದರ್ಪದಂತೆ

ಎದೆಯುಬ್ಬಿಸಿಕೊಂಡು ನಡೆಯುವ ರೀತಿ ಅಬ್ಬಾ! ಸುಮ್ಮನೆ ಕಾಫಿ ಹೌಸ್‌ನಲ್ಲಿ ಕುಳಿತು ಫುಟ್‌ಪಾತಿನಲ್ಲಿ ಅಡ್ಡಾಡುವ ಅವರನ್ನೆಲ್ಲಾ ನೋಡ ಬೇಕೆನಿಸುತ್ತದೆ. ನಾವದೆಷ್ಟೋ ಸಲ ಮಾಡಿದ್ದು ಅದೇ.




ಪ್ಯಾರಿಸ್ಸಿನಲ್ಲಿ ಸುಂದರಸಂಜೆ ಕಳೆಯುವದೆಂದರೆ ಕೇಳಬೇಕೆ. ಯಾವುದಕ್ಕೂ ಹೋಲಿಸಲು ಬರುವುದೇ ಇಲ್ಲ. ನಾವೂ ಪ್ಯಾರಿಸ್‌ನಗರದಲ್ಲಿ 'ತೆರಿ ಪ್ಯಾರಿ ಪ್ಯಾರಿ ಸೂರತ್ ಕೋ...,' ಎಂದುಕೊಳ್ಳುತ್ತ ಬೆಚ್ಚನೆಯ ಉಡುಪುತೊಟ್ಟು ಸಂಜೆ ನಾಲ್ಕುಗಂಟೆಗೆ 'ಶ್ಯಾನ್ಸ್' ಕಡೆಗೆ ಸುತ್ತಾಡತೊಡಗಿದೆವು. ಕೆಲಹೊತ್ತಿನ ನಂತರ ಮುಖ್ಯರಸ್ತೆಯಿಂದ ಒಳಭಾಗದಲ್ಲಿ ಸುತ್ತಾಡತೊಡಗಿದೆವು. ಎಂತೆಂಥಾ ಶಾಪಿಂಗ್ ಸೆಂಟರ್ಸ್ ಅಂತೀರಾ! ಮ್ಯೂಸಿಯಂಗಳನ್ನು ನೋಡಿದ ಹಾಗೆ ನೋಡುತ್ತಲೇ ಇರಬೇಕೆನಿಸುತ್ತದೆ. ಏನಾದರೂ ಕೊಂಡುಕೊಳ್ಳುವುದೆಂದರೆ ಬರೀ ಲೆಕ್ಕ ಹಾಕುವುದೇ ಆಗುತ್ತದೆ. ಹೀಗೆ ನೋಡುತ್ತಾ ಸಾಗಿರುವಾಗ ಎದುರಿಗೆ ಕಾಣುತ್ತಿರುವ ದೊಡ್ಡದಾದ gift shop ದಿಂದ ಕರಿಯ ನೀಗ್ರೋ ಮತ್ತು ಬಿಳಿಯ ಹೆಂಗಸು (ಫ್ರಾನ್ಸಿನವಳೋ ಅಮೆರಿಕದವಳೋ) ಹೊರಬಿದ್ದು ಓಡುತ್ತಿದ್ದರು. ಕರಿಯ ಅವಳಿಗೆ ಬಲವಾಗಿ ನೂಕಿ ನೆಲಕ್ಕೆ ತಳ್ಳಿದ. ಅವಳ ಕೈಯಲ್ಲಿಯ ಪರ್ಸ್ ಸಿಡಿದು ದೂರಬಿತ್ತು. ಅದನ್ನವಳು ಎದ್ದು ತೆಗೆದುಕೊಳ್ಳಲು ಪ್ರಯತ್ನಿಸದೆ ಹತ್ತಿರದಲ್ಲಿಯೇ ಇದ್ದ ಮತ್ತೊಂದು ಅಂಗಡಿಯೊಳಗೆ ನುಗ್ಗಿ ಹೆಲ್ಪ್ ಹೆಲ್ಪ್ ಎಂದು ಕೂಗಾಡುತ್ತ ಟೇಬಲ್‌ನಡಿ ಅಡಗಿಕೊಂಡಳು. ಕರಿಯ ಆ ಪರ್ಸ್ ಎತ್ತಿಕೊಂಡು ಅದರೊಳಗಿನ ದುಡ್ಡೆಲ್ಲ ತೆಗೆದುಕೊಂಡು ಪರ್ಸ್ ಆಚೆಗೆ ಎಸೆದ. ಇವನೊಬ್ಬ ಕಳ್ಳ ಇರಬೇಕೆಂದು ಅಲ್ಲಿದ್ದವರೆಲ್ಲಾ ಅವನನ್ನು ಹಿಡಿದು ಬೆದರಿಸತೊಡಗಿದರು. ಆದರೆ ಆತ ತನ್ನ ಉಂಗುರ ತೋರಿಸಿ she is my wife ಎನ್ನುತ್ತ ಅಂಗಡಿಯೊಳಗೆ ನುಗ್ಗಿದ. ಅವಳ ಹೆಸರು ಹಿಡಿದು (ಜ್ಯೂಲಿಯಾನಾ) 4-5 ಬಾರಿ ಕೂಗಿದರೂ ಅವಳು ಈಚೆಗೆ ಬರದೇ ಇದ್ದಾಗ ತಾನೇ ಹುಡುಕಿ ಅವಳ ಕೂದಲೆಳೆದು ಜಗ್ಗಾಡಿದ. ಅವರ ಜಗಳ ಹೆಚ್ಚಾಗ ತೊಡಗಿತು. ಕೊನೆಯ ಹಂತ ಎಲ್ಲಿಗೆ ಹೋಯಿತೆಂದರೆ ಅವಳು ತನ್ನ ಚೂಪಾದ ಹೀಲ್ಡ್ ತೆಗೆದು ಅವನಿಗೆ ಎಸೆದಳು. ಆತ ಬೂಟ್ ತೆಗೆದು ಹೊಡದೇ ಬಿಟ್ಟ. ಹಣೆಯ ಮೇಲೆ ರಕ್ತ ಜಿನುಗಿತ್ತು. ಹೆಣ್ಣು ನಲುಗಿ ಹೋಯಿತು. ಅವಳು ಅಳುತ್ತ ಮುಖ ಮುಚ್ಚಿಕೊಂಡು ಅಂಗಡಿಯೊಂದರ ಮುಂದಿನ ಕುರ್ಚಿಯಲ್ಲಿ ಕುಸಿದು ಕುಳಿತಳು. ಆತ gift shop ದೊಳಗೆ ಹೋದ. ಈ ಜಗಳದ ಉದ್ದೇಶವೇನಾಗಿತ್ತೆಂದರೆ gift shop ದಲ್ಲಿ ಕೊಂಡ ಬೆಲೆಯುಳ್ಳ ವಸ್ತುಗಳಿಗೆ ಕೊಡಬೇಕಾದ ಹಣ ಇವಳೇ ಕೊಡಬೇಕೆಂದು ಒತ್ತಾಯಿಸುತ್ತಿದ್ದನಂತೆ. ಕರಿಯ ಇವಳನ್ನು ಮೋಸಗೊಳಿಸಿ ಮದುವೆ ಯಾದದ್ದು ಇವಳ ಶ್ರೀಮಂತಿಕೆ, ಒಳ್ಳೆಯ ಹಣಗಳಿಕೆ ಇರುವವಳೆಂದು. ಅವನ ಎಲ್ಲಾ ಚೈನಿಗಳಿಗೂ ಇವಳು ಕೊಡಬೇಕಾಗಿತ್ತು. ಇಲ್ಲದಿದ್ದರೆ ಯಾವುದೇ ದೇಶ, ಸ್ಥಳ, ಜನರು ಮಾನ ಮರ್ಯಾದೆ ಲೆಕ್ಕಿಸದೇ ಅವಾಚ್ಯ ಶಬ್ದಗಳನ್ನು ಉಪಯೋಗಿಸುತ್ತಾ ಎಲ್ಲಿಬೇಕೆಂದರಲ್ಲಿ ಹೊಡೆದು ಗಾಯಗೊಳಿಸುತ್ತಾನಂತೆ.

ಎಷ್ಟೊಂದು ಗಟ್ಟಿಯಾದ ಹೆಂಗಸರಿವರು ಎಂದು ಮೊದಲು ಅಂದುಕೊಂಡಿದ್ದೆ. ಅವಳು ಅವನನ್ನು ಚಚ್ಚಿ ಹಾಕುವುದು ನೋಡಬೇಕೆಂದುಕೊಂಡಿದ್ದೆ. ಯುರೋಪಿಯನ್ ಅಮೆರಿಕನ್ ಮಹಿಳೆಯರು ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಕೊನೆಗೆ ಕುಟುಂಬದಿಂದ ವಿಚ್ಛೇದನ ಗೊಂಡು ಹೊರಗೆ ಬರುತ್ತಾರೆ ಅಂದುಕೊಂಡಿದ್ದೆ. ನಾವೆಲ್ಲ ಅಂದುಕೊಂಡಷ್ಟು ಸರಳ ಕೆಲಸವಲ್ಲ ಅದು. ಅಲ್ಲಿಯ ಕಾಯ್ದೆ ಕಾನೂನುಗಳು ನ್ಯಾಯ ಒದಗಿಸುವಾಗ ಬಹಳ ಎಚ್ಚರದಿಂದ ಕೆಲಸ ಮಾಡುತ್ತವೆ. ಜ್ಯೂಲಿಯನಾ ಕೋಟ್ಯಾಧೀಶ ಹೆಣ್ಣು, ಆ ಕ್ಷಣ ಅವಳ ಕೈಯಲ್ಲಿ ಬಿಡಿಕಾಸೂ ಇಲ್ಲ. ಇದ್ದ ಕಣ್ಣೀರ ಮುತ್ತುಗಳೂ ಸುರಿದು ಹೋದವು, ಗಂಡನೆನಿಸಿಕೊಂಡ ಕರಿಯ ಎಷ್ಟೊತ್ತಾದರೂ ಬರಲೇ ಇಲ್ಲ. ನೋಡುತ್ತ ನಿಂತ ಜನರು ಯಾರೊಬ್ಬರೂ ಸಾಂತ್ವನ ಹೇಳಲಿಲ್ಲ. ಚದುರಿದೆವು. ಮನಸ್ಸು ರೋಸಿಹೋಗಿತ್ತು. ಏನೆಂದು ಚರ್ಚಿಸುವುದು? ಅವರ ಪ್ರೀತಿ ಪ್ರೇಮವೋ? ಅಥವಾ ಕರಿಯ ಅವಳನ್ನು ಒತ್ತಾಯಿಸಿ ಹೆದರಿಸಿ ಗೂಂಡಾಗಿರಿ ಮಾಡಿ ಮದುವೆಮಾಡಿಕೊಂಡಿದ್ದನ್ನೋ? ಅವಳ ಶ್ರೀಮಂತಿಕೆಗೆ ಅವಳೊಂದಿಗಿದ್ದದ್ದನ್ನೋ? ಅವಳೊಂದು ರಿಸರ್ವ್ ಬ್ಯಾಂಕ್ ಎಂದುಕೊಂಡು ಬೇಕಾದಾಗೆಲ್ಲ cash ಮಾಡಿ ಕೊಂಡರಾಯ್ತೆಂದು ಕೊಂಡಿದ್ದಾನೋ ಗೊತ್ತಿಲ್ಲ. ಹಾಗಾದರೆ ಅದಕ್ಕೆಲ್ಲ ತಿಲಾಂಜಲಿ ಇಟ್ಟು ಜ್ಯೂಲಿ ಹೊರಬರಬಹುದಾಗಿತ್ತಲ್ಲ. ಸ್ವಾತಂತ್ರ್ಯ ಸಮಾನತೆ ಎಂದು ಶತಮಾನಗಳ ಹಿಂದಿನಿಂದಲೇ ಕೂಗಾಡಿದ ಮಹಿಳೆಯರು ನೆನಪಿಗೆ ಬಂದರು. (ಹೋರಾಟ ಬೇರೆ, ಜೀವನ ಬೇರೆ ಎಂದು ಕೊನೆ ಕೊನೆಗೆ ಕೆಲವರು ಒಪ್ಪಿಕೊಂಡು ತೆಪ್ಪಗೆ ಬದುಕಿದರಂತೆ!) 21ನೆಯ ಶತಮಾನಕ್ಕೆ ಹೆಜ್ಜೆ ಇಡುತ್ತಿರುವ ಈ ಸಂದರ್ಭದಲ್ಲಿ ಮುಂದುವರೆದ ರಾಷ್ಟ್ರಗಳಲ್ಲೂ ಹೀಗೆ ಕ್ರೂರತೆ, ಹಿಂಸೆ, ಶೋಷಣೆ ನಡೆಯುತ್ತದೆಯೇ ಎಂದು ಮನಸ್ಸಿಗೆ ಹಿಂಸೆಯಾಗತೊಡಗಿತು. ಇಡೀ ಘಟನೆ ಸುಂದರ ಆ ಸಂಜೆಯನ್ನು ತಲ್ಲಣಗೊಳಿಸಿತ್ತು. ಮತ್ತೇನೂ ನೋಡುವುದು ಬೇಡವಾಗಿತ್ತು. ಹತ್ತಿರದಲ್ಲಿದ್ದ 'ಟುಲೇರಿ ಗಾರ್ಡನ್'ಗೆ ಹೋಗಿ ಸುಮ್ಮನೆ ಕುಳಿತೆವು.

* * *

1995ರಲ್ಲಿ ದೀರ್ಘಾವಧಿಯ ವಿದೇಶ ವಾಸ್ತವ್ಯದ ನಂತರ ಬೆಂಗಳೂರಿಗೆ ಬಂದ ಹೊಸತು. ಒಂದು ಸಾಹಿತ್ಯ ಸಮಾರಂಭದಲ್ಲಿ ನಾನು ಇದ್ದೆ. ನನಗೆ ಮುಖತಃ ಇನ್ನೂ ಯಾರೂ ಪರಿಚಯವಿಲ್ಲದಂತಹ ಸಂದರ್ಭ ಅದು. ನಾನು 8-10 ಸಾಲುಗಳ ಹಿಂದಿನ ಸೀಟಿನಲ್ಲಿಯೇ ಕುಳಿತಿದ್ದೆ. ನನ್ನ ಪಕ್ಕದಲ್ಲೊಬ್ಬ ಮಹಿಳೆ ಹಲೋದಿಂದ ಪರಿಚಯವಾದರು. ರೋಹಿಣಿ ಎಂದವರ ಹೆಸರು. ಮದುವೆಯಾಗಿ ಮಕ್ಕಳಾಗದ್ದಕ್ಕೆ ಗಂಡ ಡೈವೋರ್ಸ್ ತೆಗೆದುಕೊಂಡದ್ದಾಗಿ. ನಂತರ ಹೈಸ್ಕೂಲ್ ಶಿಕ್ಷಕಿಯಾಗಿ ಲೇಡೀಸ್‌ಹಾಸ್ಟೆಲ್‌ದಲ್ಲಿ ಇದ್ದುದಾಗಿ ಹೇಳಿದರು. ಅವರಿಗೆ ತಮ್ಮ ನೋವುಗಳನ್ನೆಲ್ಲಾ ಬರೆಯಬೇಕೆಂದಾಸೆಯಂತೆ ಆದರೆ ಬರೆಯುವುದು ಹೇಗೆ? ಅದು ಅವರ ಸಮಸ್ಯೆಯಾಗಿ ಸಾಹಿತಿಗಳನ್ನು, ಭಾಷಣಕಾರರನ್ನು ಕಾಣುವುದು ಕೇಳುವುದು ಮಾಡುತ್ತೇನೆ ಎಂದರು. ಪರಿಚಯವಾದದ್ದು

ಇಷ್ಟು ಮಾತ್ರ. ಆದರೆ ಅನಂತರದ ದಿನಗಳಲ್ಲಿ phone ದಲ್ಲಿ ತಮ್ಮ ಸಮಸ್ಯೆಗಳನ್ನೆಲ್ಲ ಹೇಳ ತೊಡಗಿದರು. ಗಂಡ ಎರಡನೆಯ ಮದುವೆ ಯಾದನಂತೆ, ಅವಳಿಗೆ ಸಾಲಾಗಿ 3 ಹೆಣ್ಣುಮಕ್ಕಳು. ತಾನು ಸತ್ತರೆ ಬೆಂಕಿ ಇಡಲಿಕ್ಕೆ ಗಂಡು ಮಗನೇ ಬೇಕೆಂದು ಕ್ಯಾತೆ ತೆಗೆಯುತ್ತ ಎರಡನೆಯವಳನ್ನೂ ಹಿಂಸಿಸುವ ರೀತಿ ಕೇಳುತ್ತಿದ್ದರೆ ಅಸಹ್ಯವೆನಿಸುತ್ತಿತ್ತು. ಆಗಾಗ ಮಹಿಳೆಯರಿಬ್ಬರೂ ಭೇಟಿಯಾಗುತ್ತಾರೆ. ಹೆಣ್ಣುಮಕ್ಕಳನ್ನು ಕಾಣುವ ತಾತ್ಸಾರದ ಬಗೆಗೆ ಹೇಳಿಕೊಂಡು ಅತ್ತೂ ಅತ್ತೂ ಸುಸ್ತಾಗುತ್ತಾರಂತೆ. ಈಗೀಗ ಗಂಡ ಕುಡಿದು ಬಂದು ಗಲಾಟೆ ಮಾಡುವುದಷ್ಟೇ ಅಲ್ಲದೆ ಬೇರೆಯವಳ ಸಹವಾಸಕ್ಕೆ ಬಿದ್ದಿದ್ದಾನಂತೆ. ತನ್ನ ತಳಮಳಗಳನ್ನೆಲ್ಲಾ ಬರವಣಿಗೆಯಲ್ಲಿ ತೋಡಿಕೊಳ್ಳುವಾಸೆ ರೋಹಿಣಿಗೆ. ಪಾಪ! 35ರಲ್ಲಿಯೇ ಬಿಳಿ ಕೂದಲಾವರಿಸಿ ಮುದುಕಿಯಂತೆ ಕಾಣುತ್ತಾರೆ.



ಕೊಟ್ಟ ಹೆಣ್ಣು ಕುಲಕ್ಕೆ ಹೊರಗಂತೆ. ತವರು ಮನೆಯವರು ಮನೆಗೆ ಬರಬೇಡವೆಂದಿದ್ದಾರೆ. ಮನೆಯ ಇತರರಿಂದ ತಿರಸ್ಕಾರ. ಹಾಸ್ಟೆಲಿನಲ್ಲಿದ್ದು ಕೊಂಡು ಶಾಲೆಯಲ್ಲಿ ಮಕ್ಕಳೊಂದಿಗಿದ್ದರೂ ನೆಮ್ಮದಿಯೇ ಇಲ್ಲ ಎಂಬ ಕಿರಿಕಿರಿ ಅವರದು. ಅವರ ಮಾತುಗಳನ್ನು ಕೇಳುತ್ತ ಸುಸ್ತಾದ ನಾನು ಇದೆಂಥ ಸಮಾಜ ನಮ್ಮದು ಎಂದು ರೋಸಿ ಹೋಗುತ್ತೇನೆ. ಧರ್ಮದ ಹೆಸರಿನಲ್ಲಿ, ಕಾಯ್ದೆ ಕಾನೂನುಗಳ ಹೆಸರಿನಲ್ಲಿ ನಡೆಯುತ್ತಿರುವ ಸೋಗಲಾಡಿತನಕ್ಕೆ ಬೇಸರವಾಗುತ್ತದೆ. ಧರ್ಮಫಲ್ಲೆಲ್ಲಿದೆ ನ್ಯಾಯ. ಹೆಣಕ್ಕೆ ಬೆಂಕಿ ಹಾಕಿ ಸುಡಲು ಗಂಡುಮಗನೇ ಬೇಕಂತೆ! ಹುಟ್ಟಲಾರದ ಆ ಗಂಡಿಗಾಗಿ ಈಗಿದ್ದವರನ್ನು ಸಾಯಿಸುವುದು ಯಾವ ಧರ್ಮ? ಹೆತ್ತ ತಂದೆ ತಾಯಿಯರೇ ಮಗಳನ್ನು ಕುಲದಿಂದ ಹೊರಹಾಕುವ ಧರ್ಮ ಧರ್ಮವೆ? ಗಂಡ ಇದ್ದೂ ಅನಾಥಳಂತೆ ಬೇರೆಲ್ಲೋ ಇದ್ದು ಯಾರಿಂದಲೋ ಮಾನಸಿಕಹಿಂಸೆ ಅನುಭವಿಸುವಂತೆ ಮಾಡುವ ಆ ಗಂಡ ಇದ್ದರೆಷ್ಟು ಬಿಟ್ಟರೆಷ್ಟು? ಸಮಾಜಕ್ಕೊಂದು ಭಾರ ಅಥವಾ ಪೀಡೆ. ಮಾನಸಿಕ ದೈಹಿಕ ನೆಮ್ಮದಿ ಇಲ್ಲದ ಅನಾಥಪ್ರಜ್ಞೆಯ ರೋಹಿಣಿ ಏಕಾಂಗಿತನದಿಂದ ಕುಗ್ಗಿಹೋಗಿದ್ದಾರೆ. ಶಿಕ್ಷಕಿ ಯಾಗಿದ್ದರೂ ಕೂಡಾ ಮಾನಸಿಕ ರೋಗಿಯಂತೆ ನಾಳೆ ತನಗೆ ಬೆಂಕಿ ಇಡುವವರು ಯಾರು ಎನ್ನುತ್ತಾರೆ. ಪಾಪ! ರೋಹಿಣಿ ಮೇಡಂ ಅವರಿಗೆ ದೂರದ ಊರಿಗೆ ಟ್ರಾನ್ಸ್‌ಫರ್ ಮಾಡಿದ್ದಾರಂತೆ. ಈಗ ಆ ಊರಲ್ಲಿ (ಹಳ್ಳಿಗಾಡಿನಲ್ಲಿ) ಹೇಗಿದ್ದಾರೋ ಏನೋ. ಬರೆಯಿರಿ ಎಂದು ಧೈರ್ಯ ತುಂಬಿ ಕಳಿಸಿದ್ದೆ. ಅನಂತರದ ವರ್ಷಗಳಲ್ಲಿ ಅವರೆಲ್ಲೂ ಕಾಣಿಸಲೇ ಇಲ್ಲ. ಶಾಲೆ, ಶಿಕ್ಷಕಿಯರನ್ನು ಕಂಡಾಗ ರೋಹಿಣಿ ನೆನಪಾಗುತ್ತಾರೆ. ಅವರ ಅಂದಿನ ಮಾತುಗಳು, ಅಳುಮುಖ, ನಿಸ್ಸಹಾಯಕತೆ ಎಲ್ಲ ಕಣ್ಮುಂದೆ ಬಂದು ನನ್ನೆದೆಯ ಕದ ತಟ್ಟಿದಂತಾಗುತ್ತದೆ.

ಈ ತರಹದ ಕೆಲವು ಮನುಷ್ಯ ಸಂಬಂಧಗಳನ್ನು ನಾನು ಸುತ್ತಾಡಿದ ಅನೇಕ ದೇಶವಿದೇಶಗಳಲ್ಲಿ ಕಂಡೆ. ಯಾವ ಧರ್ಮ, ಯಾವ ಗಂಡಸರೂ ಸಾಚಾಗಳೆನಿಸುವುದಿಲ್ಲ. ಹೆಣ್ಣುಗಳನ್ನು ದೈಹಿಕ, ಮಾನಸಿಕ, ಆರ್ಥಿಕ ಸಮಾನತೆ, ಸ್ವಾತಂತ್ರ್ಯಕ್ಕಾಗಿ ಹಿಂಸಿಸಿದವರು ಅತೀಗಣ್ಯರ ಪಟ್ಟಿಯಲ್ಲು ಕಾಣಸಿಗುತ್ತಾರೆ. ಅಮೆರಿಕದ ಕ್ಲಿಂಟನ್ ಇರಬಹುದು. ಲಂಡನ್‌ನ ಪ್ರಿನ್ಸ್ ಚಾರ್ಲ್ಸ್, ಪಾಕ್ ವಿರೋಧಿ ಪಕ್ಷದ ಅಥವಾ ಭಯೋತ್ಪಾದಕರಿಂದ ಬೆನಡಿಕ್ ಹತ್ಯೆಯಾದದ್ದು– ಹೀಗೆ ಅನೇಕ (ಈಗಷ್ಟೇ ನೋಡಿದೆವಲ್ಲ ಹರಕೆಯ ಕುರಿಯಾದ ಶೋಭಾ ಕರಂದ್ಲಾಜೆ). ಕಾಯ್ದೆ ಕಾನೂನುಗಳು, ಧರ್ಮ ಸಂಪ್ರದಾಯಗಳು, ಮಹಿಳೆಯರನ್ನು ಕಟ್ಟಿಹಾಕಿರುವ ಪರಿ ಶೋಚನೀಯ. ಆದರೆ ಅತೀ ಸ್ವಾತಂತ್ರ್ಯವಿರುವ ದೇಶಗಳಲ್ಲಿ ಸ್ವಾತಂತ್ರ್ಯದ ಅರ್ಥಮಾಡಿಕೊಳ್ಳದೆ ಬೇಕಾಬಿಟ್ಟಿಯಾಗಿ ಹಣ ಖರ್ಚು ಮಾಡಿಕೊಳ್ಳುತ್ತಾ ಮತ್ತು ಲೈಂಗಿಕತೆಯಲ್ಲಿ ತೊಡಗಿ ನರಕ ಕೂಪಕ್ಕೆ ಬೀಳುತ್ತಿರುವ ಮಹಿಳೆಯರೂ ಇರುವುದು ದುರಾದೃಷ್ಟ. ಮನಸ್ಸು ಅವರಿಗಾಗಿಯೂ ತಲ್ಲಣಗೊಳ್ಳುತ್ತದೆ; ವಿನಾಕಾರಣ ಬಲಿಯಾಗುವವರ ಬಗೆಗೂ ತಲ್ಲಣಗೊಳ್ಳುತ್ತದೆ.

❑

ನೀವೂ ಓದಿ

ಅಧ್ಯಾಯ ಬರೆದ 'ನಿರಕ್ಷರಿ'

● *ಡಾ. ಚಂದ್ರಮತಿ ಸೋಂದಾ*

'ನಿರಕ್ಷರಿಯ ಆತ್ಮಕತೆ' ಒಂದು ವಿಶಿಷ್ಟ ಕೃತಿ. ಅಕ್ಷರವನ್ನೇ ತಿಳಿಯದವಳು ಹೇಗೆ ಆತ್ಮಕತೆ ಬರೆಯಲು ಸಾಧ್ಯ? ಎಂದು ಪುಸ್ತಕದ ತಲೆಬರಹ ನೋಡಿದಾಗ ಅನಿಸುತ್ತದೆ. ಬದುಕಿನ ಅನಿವಾರ್ಯತೆಯಿಂದ ಹೆಣ್ಣೊಬ್ಬಳು ತನ್ನ ಇಪ್ಪತ್ತೈದನೆಯ ವಯಸ್ಸಿನಲ್ಲಿ ಓದು ಬರಹ ಕಲಿತು ಆತ್ಮಕತೆ ಬರೆಯಲು ಸಾಧ್ಯವಾದುದರಲ್ಲಿಯೇ ಕೃತಿಯ ಮಹತ್ವವಿರುವುದು.

ಕೃತಿಯ ಲೇಖಕಿ ಸುಶೀಲಾ ರಾಯ್ ಹುಟ್ಟಿದ್ದು ಬಿಹಾರದ ಕೆಳಜಾತಿಗೆ ಸೇರಿದ ಬಡಕುಟುಂಬದಲ್ಲಿ. ಮದುವೆಯ ಸಂದರ್ಭದಿಂದ ಬರವಣಿಗೆಗೆ ತೊಡಗುವವರೆಗಿನ ಲೇಖಕಿಯ ಬದುಕು ಇಲ್ಲಿ ಆತ್ಮಕತೆಯಾಗಿ ಹೊರಹೊಮ್ಮಿದೆ. ಶಾಲೆಯ ಮುಖವನ್ನೇ ಕಾಣದ ಅವಳನ್ನು ತಂದೆ ಒಂಬತ್ತು ವರ್ಷಕ್ಕೆ ಮದುವೆ ಮಾಡುತ್ತಾರೆ. ಅವಳನ್ನು ಮದುವೆಯಾಗುವ ಹುಡುಗ ಹಿರಿಯರು ನಿಶ್ಚಯಿಸಿದ ಹೆಣ್ಣನ್ನು ಮೊದಲು ನೋಡಿದ್ದೇ ಮದುವೆಗೆ ಸಂಬಂಧಿಸಿದ ತಿಲಕ ಇಡುವ ಸಂದರ್ಭದಲ್ಲಿ. ಹುಡುಗಿಯ ಮೈಬಣ್ಣ ಕಪ್ಪು ಎನ್ನುವುದು ಗಮನಕ್ಕೆ ಬರುತ್ತಿದ್ದಂತೆ ತನ್ನ ಬದುಕು ಹಾಳಾಯಿತೆಂದು ಕೊರಗುವ ಅವಳ ಗಂಡ ಅವಿನಾಶನಿಗೆ ಇದರಲ್ಲಿ ಅವಳ ತಪ್ಪಿಲ್ಲ ಎನ್ನುವುದು ಅರಿವಾಗುವುದಿಲ್ಲ. ಮದುವೆಯಾಗುವಾಗ ಅಷ್ಟೊಂದು ತಿಳಿವಳಿಕೆ ಇರುವ ವಯಸ್ಸೂ ಆತನದಾಗಿರಲಿಲ್ಲ. 'ಯಾಕವ್ವಾ ಸುಂದರವಾದ ಹುಡುಗಿಯನ್ನಾಗಿ ನನ್ನನ್ನು ಹಡೆಯಲಿಲ್ಲ. ಈಗ ನೋಡು ಎಷ್ಟೆಲ್ಲ ಮಾತು ಕೇಳಬೇಕಾಗಿದೆ. ಇಂತಾ ಕುರೂಪಿ ಹುಡುಗಿಗೆ ಜನ್ಮಕೊಟ್ಟ ತಾಯಿ ಎಂತಹವಳೋ ಎನ್ನೋ ಅಪಮಾನವನ್ನ ಈಗ ನೀನು ಹೊರಬೇಕಾಗೀತೆ. ಅದ್ಕಿಂತ ಹುಟ್ಟಿದ ಕೂಡ್ಲೆ ನೀನು ನನ್ನನ್ನ ಯಾಕೆ ಸಾಯಿಸಲಿಲ್ಲ?' ಎಂದು ಮೊದಲ ಬಾರಿ ಗಂಡನ ಮನೆಗೆ ಹೋಗಿ ಬರುತ್ತಲೇ ತಾಯಿಗೆ ಕೇಳುವಮಟ್ಟಿಗೆ ಅವಳ ಮನಸ್ಸಿನ ಮೇಲೆ ಅವಳ ರೂಪದ ಬಗೆಗೆ ಗಂಡನ ಮನೆಯಲ್ಲಿ ನಡೆದ ಮಾತುಗಳು ಪರಿಣಾಮ ಬೀರುತ್ತವೆ. ಇದು ಕೀಳರಿಮೆಗೂ ಕಾರಣವಾಗುತ್ತದೆ. ಮದುವೆಯಾಗಿ ಐದು ವರ್ಷಗಳ ನಂತರ ಗಂಡನ ಮನೆಯವರು 'ಗೌನ' (ಮನೆ ತುಂಬಿಸಿ ಕೊಳ್ಳುವುದು) ಮಾಡಿಸಿಕೊಳ್ಳುತ್ತಾರೆ. ಗಂಡನ ಮನೆಗೆ ಹೋದರೂ ಹೆಣ್ಣಿಗೆ ಸಿಗಬೇಕಾದ ಯಾವ ಪ್ರೀತಿ ವಿಶ್ವಾಸವೂ ಅವಳಿಗೆ ದೊರಕುವುದಿಲ್ಲ. ಉದ್ಯೋಗದ ಕಾರಣದಿಂದ ಅವಿನಾಶ ದೂರದ ಕಲ್ಕತ್ತಾದಲ್ಲಿದ್ದರೂ ಹೆಂಡತಿಯ ಬಗೆಗೆ ಬದ್ಧತೆ ಇದ್ದವನಲ್ಲ. ಅವಳ ಮೈಬಣ್ಣ ಕಪ್ಪು ಎಂದು ಗಂಡ ಕಡೆಗಣಿಸಿದರೂ ಅತ್ತೆ ಮಾವರಿಗೆ ಸೊಸೆ ಬಗ್ಗೆ ಸ್ವಲ್ಪ ಮರುಕ. ಹಿರಿಯರ ನಿರೀಕ್ಷೆಯಂತೆ ಎಲ್ಲ ಕೆಲಸ, ಸೇವೆಗಳನ್ನು ಮಾಡುವ ಸೊಸೆಯ ಗುಣ ಇದಕ್ಕೆ ಕಾರಣ.

ಮನೆಯ ಇತರ ಸೊಸೆಯರು ಅವರವರ ಗಂಡನ ಜೊತೆಗೆ ಮನೆಯಿಂದ ದೂರ ಹೋದರೂ ಕೃಷಿ ಮತ್ತು ಮನೆಯ ಜವಾಬ್ದಾರಿಗಳನ್ನು ನಿಭಾಯಿಸುವ ಊರ್ಮಿಳೆ (ಕಾಲ್ಪನಿಕ ಹೆಸರು) ಅತ್ತೆ ಮಾವಂದಿರ ಅಗತ್ಯಗಳನ್ನು ಪೂರೈಸುವುದರಲ್ಲಿ ಹಿಂದೇಟು ಹಾಕುವುದಿಲ್ಲ. ಹೆಂಡತಿಯ ಸೌಂದರ್ಯದ ಬಗ್ಗೆ ಅಸಹನೆ ಇರುವ ಅವಿನಾಶ ಹೆಂಡತಿ ಇನ್ನೊಂದು ಮದುವೆ ಆಗುವಂತೆ ಒತ್ತಾಯಿಸುವುದು ತನಗೆ ಬೇರೆಯವಳನ್ನು ಮದುವೆಯಾಗಲು ದಾರಿ ಸುಗಮವಾಗಲಿ ಎಂದು. ತಾನು ತಪ್ಪಿತಸ್ಥ ಎಂದು ಯಾರೂ ಭಾವಿಸದಿರಲಿ ಎನ್ನುವ ಒಂದು ತಂತ್ರವಾಗಿ ಹೀಗೆ ಹೆಂಡತಿಯನ್ನು ಒತ್ತಾಯಿಸುತ್ತಿದ್ದಂತೆ ಕಾಣುತ್ತದೆ. ಗಂಡ ಬೇರೆ ಮದುವೆಯಾಗುವಂತೆ ತನ್ನನ್ನು ಒತ್ತಾಯಿಸುವುದರ ಹಿಂದೆ ಅವನು ಇನ್ನೊಂದು ಹೆಣ್ಣನ್ನು ಮದುವೆಯಾಗುವ ಹುನ್ನಾರವಿದೆ ಎನ್ನುವುದು ಅವಳಿಗೆ ಗೊತ್ತಿರುವುದರಿಂದ ಅಭದ್ರತೆ ಅವಳನ್ನು ಕಾಡುತ್ತದೆ. ಹೆಣ್ಣಿಗೆ ಗಂಡನ ಮನೆ ಎಂಥ ಅಭದ್ರತೆಯ ತಾಣ ಎನ್ನುವುದನ್ನು ಇದು ತೋರಿಸುತ್ತದೆ. ಅವರ ಸಮುದಾಯದಲ್ಲಿ ಹೆಣ್ಣು ಮತ್ತೊಬ್ಬನನ್ನು ಮದುವೆಯಾಗಬಹುದಾದರೂ ಮದುವೆಯಾಗಿರುವ ಗಂಡನಿಂದ ಸಿಗದ ಸುಖ ಮತ್ತೊಬ್ಬನಿಂದ ಸಿಗುತ್ತದೆ ಎನ್ನುವ ಭರವಸೆ ಇಲ್ಲದ ಆಕೆ ಗಂಡನ ಮನೆಯಲ್ಲೇ ಬದುಕುತ್ತೇನೆ ಎಂದು ಹಟಮಾಡಿ ಅಲ್ಲಿಯೇ ಉಳಿಯುವುದಾಗಿ ಹೇಳುವುದರಿಂದ ಗಂಡನಿಗೆ ಇನ್ನೊಂದು ಮದುವೆಯಾಗಲು ಸಾಧ್ಯವಾಗುವುದಿಲ್ಲ. ಬದುಕಿಗೆ ಬೇರೆ ದಾರಿಯಿಲ್ಲ ಎನ್ನುವ ಸಂದರ್ಭದಲ್ಲಿಯೂ ಹೆಣ್ಣುಮಕ್ಕಳು ಬದುಕನ್ನು ಉಳಿಸಿಕೊಳ್ಳಲು ಹೋರಾಡುವ ಒಂದು ಮಾದರಿಯನ್ನು ಇದು ಕಾಣಿಸುತ್ತದೆ. ಬದಲಾಗುವ ಗಂಡನ ಮನಸ್ಥಿತಿಯಿಂದಾಗಿ ಆಕೆಯ ಬದುಕು ನೇರವಾಗುತ್ತದೆ.

ಹೆಣ್ಣಿಗೂ 'ಬಂಜೆ'ತನಕ್ಕೂ ಲಾಗಾಯ್ತಿನಿಂದಲೂ ಸಂಬಂಧ ಕಲ್ಪಿತವಾಗಿದೆ. ಒಂದು ಸಣ್ಣ ನ್ಯೂನತೆಯಿಂದ ಊರ್ಮಿಳೆಗೆ ಮಕ್ಕಳಾಗದಿದ್ದರೂ ಅವಳು ಬಂಜೆ ಎಂದು ತೀರ್ಮಾನಿಸುವ ಗಂಡನಾಗಲಿ, ಅತ್ತೆ ಮಾವಂದಿರಾಗಲಿ ಒಮ್ಮೆ ಅವಳನ್ನು ವೈದ್ಯರಿಗೆ ತೋರಿಸಬೇಕು ಎಂದು ಯೋಚಿಸುವುದಿಲ್ಲ. ಮದುವೆಯಾಗಿ ಹತ್ತು ವರ್ಷಗಳಾದರೂ ತನಗೆ ಯಾಕೆ ಮಗುವಾಗಿಲ್ಲ ಎಂದು ಕೊರಗುತ್ತ ಕೂರುವುದಿಲ್ಲ ಆಕೆ. ಅವಿದ್ಯಾವಂತೆಯಾದ ಊರ್ಮಿಳೆ ತನ್ನ ಬಂಜೆತನಕ್ಕೆ ಕಾರಣ ತಿಳಿಯಲು ವೈದ್ಯರನ್ನು ಭೇಟಿ ಮಾಡಬೇಕು ಎನ್ನುವ ತಿಳಿವಳಿಕೆ ಇದ್ದವಳು. ಅಕ್ಷರ ಜ್ಞಾನ ಆಕೆಗೆ ಇರದಿದ್ದರೂ ವ್ಯವಹಾರ ಜ್ಞಾನ ಇರುವ ಹೆಣ್ಣು ಅವಳು. ಬಂಜೆತನವನ್ನು ಮುಂದುಮಾಡಿ ಅವಳು ಬೇರೆ ಮದುವೆಯಾಗುವಂತೆ ಒತ್ತಾಯಿಸುವ ಗಂಡ ತನ್ನ ಆಸ್ತಿ ಕೊಡುವುದಲ್ಲದೆ, ಹತ್ತು ಸಾವಿರ ರುಪಾಯಿ ಕೊಡುವುದಾಗಿ ತಿಳಿಸಿದಾಗ, ತನ್ನನ್ನು ಡಾಕ್ಟರರಿಗೆ ತೋರಿಸುವಂತೆ, ತನಗೆ ಒಂದು ಅವಕಾಶ ಕೊಡುವಂತೆ ಕೇಳುವ ಅವಳ ಮಾತು ಬದುಕನ್ನು ಎದುರಿಸುವ ರೀತಿಯದು. ಮೈದುನನ ಹತ್ತಿರ ಪ್ರಸ್ತಾಪ ಮಾಡಿ ಗಂಡನಿಗೆ ವಿಷಯ ತಿಳಿಯುವಂತೆ ಮಾಡಿ ವೈದ್ಯರನ್ನು ಕಂಡುದು ಅವಳ ಮುಂದಿನ ಬದುಕು ಹಸನಾಗಲು ದಾರಿಯಾಗುತ್ತದೆ. ಹೆಣ್ಣಿಗೆ 'ಬಂಜೆ' ಎನ್ನುವುದು ಒಂದು ಶಾಪವೆನ್ನುವಂತೆ ಸಮಾಜ ಕಾಣುತ್ತಿರುವಾಗ ಅವಳ ನೋವು ಎಷ್ಟೆನ್ನುವುದನ್ನು ಕೃತಿ ಬಿಚ್ಚಿಡುತ್ತದೆ. ಒಮ್ಮೆ ಡಾಕ್ಟರ್ ತನಗೆ ಮಗುವಾಗುವುದಿಲ್ಲವೆಂದು ಹೇಳಿದರೆ ಎಂದು ಭಯಪಡುವ ಸಂದರ್ಭ ಊರ್ಮಿಳೆಯ ಬದುಕಿಗೆ ಮಾತ್ರ ಸೀಮಿತವಲ್ಲ. ನಮ್ಮ ಸಮಾಜ ಹೆಣ್ಣನ್ನು ತಾಯಿಯಾಗಲೇ ಬೇಕೆಂದು ಒತ್ತಾಯಿಸುತ್ತದೆ. ಮಗುವನ್ನು ಹೆರದಿದ್ದರೆ ಕುಟುಂಬ ಅವಳನ್ನು ನಿರಾಕರಿಸಲು ಹಿಂದೇಟು

ಹಾಕುವುದಿಲ್ಲ. ಹೆಂಡತಿಯ ಬಣ್ಣದ ಬಗ್ಗೆ ದುಃಖವಿರುವ ಅವಿನಾಶನಿಗೆ ಅವಳ ಬಂಜೆತನ ಅವಳನ್ನು ದೂರಮಾಡಲು ಒಂದು ನೆವವಾಗುವುದು ಮಹಿಳೆಯ ಬದುಕಿನ ಅನಿಶ್ಚಯತೆಗೆ ಹಿಡಿದ ಕನ್ನಡಿ. ಅವಳ ಬದುಕು ಬೆಕ್ಕಿನ ತಲೆಯ ಮೇಲಿನ ದೀಪದಂತೆ ಯಾವಾಗ ಬೇಕಾದರೂ ಕೆಳಗೆ ಬೀಳಬಹುದು. ವೈದ್ಯರ ಸಲಹೆಯಂತೆ ನ್ಯೂನತೆ ಸರಿಪಡಿಸಿಕೊಂಡು ಮಗುವನ್ನು ಪಡೆಯುವ ಅವಳ ಜಾಣತನ ಗಮನಾರ್ಹ ಸಂಗತಿ. ಮಗುವನ್ನು ಹೆರುವಾಗಿನ ಮಹಿಳೆಯ ಮನಸ್ಥಿತಿ, ಗರ್ಭಪಾತವಾದಾಗಿನ ನೋವು-ನಿರಾಸೆಗಳನ್ನು ಅನಾವರಣಗೊಳಿಸಿರುವ ರೀತಿ ಮನಮುಟ್ಟುವಂಥದು.

ಮಕ್ಕಳಾಗಲಿಲ್ಲವೆಂಬ ನೆವದಿಂದ ಗಂಡ ಇನ್ನೊಂದು ಮದುವೆಯಾಗುತ್ತಾನೆನ್ನುವ ಭಯದಲ್ಲಿ ಊರ್ಮಿಳೆ ಇರುವಾಗ ಈ ವಿಷಯ ತಿಳಿದ ರಮೇಶ ಬಾಬು (ಅವರ ಬಳಿಯೇ ಅವಿನಾಶ ಕೆಲಸ ಮಾಡುವುದು) ಅವಳಿಗೆ ಪತ್ರ ಬರೆಯುತ್ತಾರೆ. ಅದನ್ನು ಅವಳು ಬೇರೆಯವರಿಂದ ಓದಿಸಿ ತಿಳಿಯುವುದು ಅನಿವಾರ್ಯವಾಗುತ್ತದೆ. ಆಗ ಅವಳಿಗೆ ಅಕ್ಷರದ ಮಹತ್ವದ ಅರಿವಾಗುತ್ತದೆ. ಅವರು ಬರೆಯುವ ಕಾಗದಗಳನ್ನು ಮತ್ತೆ ಮತ್ತೆ ಓದಬೇಕೆನ್ನುವ ಹಂಬಲ ಅವಳದು. ಆದರೆ ಬೇರೆಯವರ ಹತ್ತಿರ ಹೋಗಿ ಕೇಳಲು ಸಂಕೋಚ. ಈ ವಿಷಯ ತಿಳಿದು ರಮೇಶ್‌ಬಾಬು ಅವಳೇ ಓದು, ಬರಹ ಕಲಿತರೆ ಒಳ್ಳೆಯದೆಂದು ತಿಳಿಸುವುದರಿಂದ ಅವಳು ಅಕ್ಷರ ಕಲಿಕೆಗೆ ಮುಂದಾಗು ತ್ತಾಳೆ. ಹಲವು ವರ್ಷಗಳ ಪರಿಶ್ರಮದಿಂದ ಕಾಗದ ಬರೆಯಲು ಸಾಧ್ಯವಾದಾಗ ಊರ್ಮಿಳೆಗೆ ಖುಶಿಯಾಗುತ್ತದೆ. ಮನುಷ್ಯ ತನ್ನ ಭಾವನೆಗಳನ್ನು ವ್ಯಕ್ತಪಡಿಸುವುದೆಂದರೆ ತನ್ನ ಅಸ್ತಿತ್ವವನ್ನು ಗುರುತಿಸುವುದು. ಊರ್ಮಿಳೆ ಅಕ್ಷರ ಕಲಿಯಲು ತೊಡಗಿದ ಮೇಲೆ ಕಲ್ಕತ್ತಾ ಶಹರಿನಲ್ಲಿ ಗಂಡನೊಂದಿಗೆ ಬದುಕುವ ಅವಕಾಶವೂ ದೊರಕುವುದರಿಂದ ಕಲಿಕೆಗೆ ಹೆಚ್ಚಿನ ಸಮಯವೂ ದೊರಕಿ ಅವಳು ಆತ್ಮವಿಶ್ವಾಸ ಗಳಿಸಲು ದಾರಿ ತಾನಾಗಿ ತೆರೆಯುತ್ತದೆ.

ಅನಕ್ಷರಸ್ಥ ಹೆಣ್ಣೊಬ್ಬಳು ಅಕ್ಷರ ಕಲಿತು ಆತ್ಮವಿಶ್ವಾಸ ಗಳಿಸಿ, ದೊರೆತ ಪ್ರೋತ್ಸಾಹದಿಂದ ಆತ್ಮಕತೆ ಬರೆಯಲು ಮುಂದಾದುದು ಸಣ್ಣ ಸಂಗತಿಯೇನಲ್ಲ. ಬಿಹಾರಿಯನ್ನೇ ಓದಲು ಬರೆಯಲು ಬಾರದ ಆಕೆ ಹಿಂದಿ ಕಲಿತು ಆತ್ಮಕತೆ ಬರೆದುದು ಗಮನಾರ್ಹ. ಶ್ರದ್ಧೆ, ಸಾಧಿಸಬೇಕೆನ್ನುವ ಛಲ ಇದ್ದಾಗ ಗುರಿ ತಲುಪುವುದು ಕಷ್ಟವೆನಿಸುವುದಿಲ್ಲ. ಮಕ್ಕಳ ಕಾರಣದಿಂದ ನಡುವೆ ಕಲಿಕೆಗೆ ತಡೆಯುಂಟಾದರೂ ಮತ್ತೆ ಓದು ಬರಹ ಕಲಿಯಲು ಸಾಧ್ಯವಾದುದು ಈ ಕಾರಣದಿಂದ. ಮಗನಿಗೆ ಡಾಕ್ಟರ್ ಕೊಟ್ಟಿರುವ ಔಷಧಿ ಹಾಳಾಗಬಾರದೆಂದು ತಾನೇ ಆ ಔಷಧಿ ಕುಡಿದು ಕೆಟ್ಟ ಪರಿಣಾಮ ಅನುಭವಿಸಿದ ಆಕೆಯ ಕತೆ ಬಡತನವನ್ನು ಮಾತ್ರ ಬಿಚ್ಚಿಡುವುದಿಲ್ಲ, ಶಿಕ್ಷಣದ ಮಹತ್ವವನ್ನೂ ಹೇಳುವಂಥದು. ಬದುಕಿನ ಗೋಳನ್ನಷ್ಟೇ ಹೇಳದೆ, ವಾರಗಿತ್ತಿಯ ಮಗಳು ಆರತಿ ಹಾಗೂ ಮೈದುನ ತೋರಿಸಿದ ಪ್ರೀತಿ, ಸಹಾಯಗಳನ್ನು ನೆನಪಿಸುವುದರಿಂದ ಕೃತಿಗೆ ಒಂದು ಸಮತೂಕ ದಕ್ಕಿದೆ. ಜೊತೆಗೆ ತನ್ನ ತಪ್ಪುಗಳನ್ನೂ ಪ್ರಸ್ತಾಪಿಸಿರುವುದು ಗಮನಾರ್ಹ ಅಂಶ. ಚಂಪಾ, ಜಗದೀಶರ ಬದುಕಿನ ಸಂದರ್ಭ ಲೇಖಕಿಯ ಮನಸ್ಸಿನ ಮೇಲೆ ಬೀರಿದ ಪರಿಣಾಮದ ಗಾಢತೆಯನ್ನು ತೋರಿಸುವಂಥದು. ಆಕಸ್ಮಿಕವಾಗಿ ಜಗದೀಶನ ಸಾವು ಸಂಭವಿಸುವುದರಿಂದ ಅವನ ಹೆಂಡತಿ ಚಂಪಾಳ ಬದುಕಿನ ಸನ್ನಿವೇಶ ಲೇಖಕಿಯಲ್ಲಿ ಹಲವು ಪ್ರಶ್ನೆಗಳನ್ನು ಹುಟ್ಟಿಸುತ್ತದೆ. ಹೊರ ಜಗತ್ತನ್ನೇ ಕಾಣದ ಹೆಣ್ಣೊಬ್ಬಳು ಬದುಕಿನ ಬಂಡಿಯನ್ನು ಹೇಗೆ ಎಳೆಯಬಲ್ಲಳು? ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಚಂಪಾಳ ಬದುಕು ಹೇಗಿದ್ದಿರಬಹುದು ಎನ್ನುವ ಪ್ರಶ್ನೆ, ಊಹೆಗಳೊಂದಿಗೆ ಆತ್ಮಕತೆ ಮುಗಿಯುವುದು ಲೇಖಕಿಗೆ ಮಹಿಳೆಯ ಬಗೆಗಿರುವ ಕಾಳಜಿಯ ಪ್ರತೀಕ.

ಹಿಂದಿಯ ಕೃತಿಯನ್ನು ಕನ್ನಡ ಓದುಗ ಬಳಗಕ್ಕೆ ಪರಿಚಯಿಸಿರುವ ಅನುವಾದಕ ಮತ್ತು ನವಕರ್ನಾಟಕ ಪ್ರಕಾಶನದ ಶ್ರಮ ಸ್ವಾಗತಾರ್ಹ. ಅನುವಾದ ಹಿತವಾಗಿಲ್ಲ. ಕೃತಿಯಲ್ಲಿ ಎಲ್ಲಿಯೂ ಸಂಭಾಷಣಾ ಚಿಹ್ನೆಗಳನ್ನು ಬಳಸಿಲ್ಲ. ಇದರಿಂದ ಓದಿಗೆ ತೊಡಕಾಗುತ್ತದೆ. ಭಾಷೆ ಒಮ್ಮೆ ಶಿಷ್ಟ, ಮತ್ತೊಮ್ಮೆ ಗ್ರಾಮೀಣವಾಗುತ್ತದೆ. 'ಅವಿನಾಶ್ ಎರಡನೆಯ ಮದುವೆ ಮಾಡಿಕೋಬೇಕು ಅಂತಾ ಅದಾನೆ. ಅವನೀಗ ಊರಿಗೆ ಬರ್ತಾ ಅದಾನೆ', ಈ ಬಗೆಯ ಭಾಷಾಬಳಕೆ ಅಲ್ಲಲ್ಲಿ ನುಗ್ಗುತ್ತದೆ. ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಗಾದೆಗಳನ್ನು ಅನುವಾದಿಸುವುದು ಸುಲಭವಲ್ಲ. ಅಕ್ಷರಶಃ ಅನುವಾದಿಸಿದಾಗ ಏನಾಗುತ್ತದೆ ಎನ್ನುವುದಕ್ಕೆ ಇಲ್ಲಿ ನಿದರ್ಶನ ಸಿಗುತ್ತದೆ. 'ಭಗವಾನ್ ಕೆ ಘರ್ ಮೆ ದೇರ್ ಹೈ ಅಂಧೇರ್ ನಹಿ' ಎನ್ನುವ ಹಿಂದಿಗಾದೆ 'ದೇವರ ಮನೆಯಲ್ಲಿ ತಡ ಆಗಬಹುದು ಆದರೆ ಕತ್ತಲೆ ಇಲ್ಲ' ಎನ್ನುವುದರ ಬದಲು 'ದೇವರ ಹತ್ತಿರ ನ್ಯಾಯ ಸಿಗಲು ನಿಧಾನ ಆಗಬಹುದು ಆದರೆ ಅನ್ಯಾಯವಾಗುವುದಿಲ್ಲ' ಎಂದಿದ್ದರೆ ಕನ್ನಡದ ಜಾಯಮಾನಕ್ಕೆ ಹೊಂದುತ್ತಿತ್ತು.



ನಿರಕ್ಷರಿಯ ಆತ್ಮಕತೆ (2009)
ಹಿಂದಿಮೂಲ: ಸುಶೀಲಾರಾಯ್
ಅನು : ಜಿ. ಕುಮಾರಪ್ಪ
ಪುಟ : 88
ಬೆಲೆ : ರೂ. 55/-
ಪ್ರ : ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿ., ಬೆಂಗಳೂರು

ಒಂದು ದಶಕದಿಂದೀಚೆಗೆ ಮಹಿಳೆಯ ಬದುಕು ಆತ್ಮಕತೆಯ ರೂಪದಲ್ಲಿ ಅನಾವರಣ ಗೊಳ್ಳುತ್ತಿದೆ. ಆತ್ಮಕತೆ ಒಂದು ಕಾಲದ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಬದುಕನ್ನು ತೆರೆದಿಡುತ್ತದೆ/ತೆರೆದಿಡಬೇಕು ಎನ್ನುವ ಭಾವನೆ ಇತ್ತು. ಮಹಿಳೆ ಆತ್ಮಕತೆ ಬರೆಯಲು ಪ್ರಾರಂಭಿಸಿದಾಗ ಅವಳ ಬದುಕಿನಲ್ಲಿ ಅಂಥದ್ದೇನಿದೆ ಎಂಬ ಹಗುರ ಭಾವನೆ ಇದ್ದವರ ಸಂಖ್ಯೆ ಕಡಿಮೆ ಏನಿರಲಿಲ್ಲ. ಹೊರಗಿನ ಪಾತಳಿಯಿಂದ ಕಾಣುವುದಷ್ಟೇ ಸತ್ಯವಲ್ಲ ಎನ್ನುವ ಮನೋಧರ್ಮದ ಹಿನ್ನೆಲೆಯಲ್ಲಿ ಮಹಿಳಾ ಆತ್ಮಕತೆಗಳಿಗೆ ಪ್ರಾಧಾನ್ಯವಿದೆ. ಮಹಿಳೆಯ ಇಂದಿನ ಸ್ಥಿತಿಗೆ ಕಾರಣವನ್ನು ಐತಿಹಾಸಿಕ, ಸಾಮಾಜಿಕ, ಸಾಂಸ್ಕೃತಿಕ ಆಯಾಮದಿಂದ ವಿಶ್ಲೇಷಿಸುವ ಅಗತ್ಯವಿದೆ ಎನ್ನುವುದನ್ನು ಇಂಥ ಆತ್ಮಕತೆಗಳು ಸೂಚಿಸುತ್ತವೆ. ❑

Edited, Printed, Published and owned by Rajeshwari H.S., No. 114/5, 9th Cross, 2nd Main, Chamarajpet, Bangalore - 560 018.
Printed at ILA Mudrana, No. 36, 40 Ft. Road, Raghavanagara, New Timberyard Layout, Bangalore - 560 026.
Published at No. 114/5, 9th Cross, 2nd Main, Chamarajpet, Bangalore - 560 018. Editor : Rajeshwari H.S.



ಮುಗಿಲ ಮಲ್ಲಿಗೆಯೋ ತೊಗರಿಯ ಬೇಳೆಯೋ

● *ಪ್ರೊ. ಎಂಡ್ಲೂರಿ ಸುಧಾಕರ್, ಅನು : ಡಾ. ಆಂಜನಪ್ಪ*

ನನ್ನ ತುತ್ತಿನ ಸೂರ್ಯ ಆಕಾಶದಿಂದಲ್ಲ
ರೈತ ಬಜಾರಿನಿಂದ ಹುಟ್ಟಿಬರುತ್ತಾನೆ
ನನ್ನ ಬಾಳಿನ ಚಂದ್ರ
ಪಶ್ಚಿಮ ದಿಕ್ಕಿನಿಂದಲ್ಲ
ಬೆಲೆಗಳ ಮೇಲಿಂದ ಅಸ್ತಮಿಸುತ್ತಾನೆ
ಒಂದೊತ್ತು ಕಳೆದರೆ ಸಾಕು
ಸಂತೃಪ್ತಿ ಪಡುವ ಸಾಮಾನ್ಯ ಮನುಷ್ಯ ನಾನು

ನನಗೆ ಬಂಗಾರದ ಬೆಲೆ ಮುಖ್ಯವಲ್ಲ
ನನ್ನ ಕೂಳ ಬಟ್ಟಲಿನ ತುತ್ತು ಅನ್ನಕ್ಕೆ
ಪ್ರಾಣದಂತಹ ಬೇಳೆಯ ಬೆಲೆ ಮುಖ್ಯ
ನನ್ನ ತಿಂಗಳ ಸಂಬಳವನ್ನೊ
ನನ್ನ ದಿನಗೂಲಿಯನ್ನೊ
ನನ್ನ ಮಡದಿ ಮಕ್ಕಳಿಗಷ್ಟೆ ಅಲ್ಲ
ನನ್ನ ಅಕ್ಕಿಗೂ, ನನ್ನ ತೊಗರಿ ಬೇಳೆಗೂ
ನಾನು ಲೆಕ್ಕ ಕೊಡಬೇಕು
ನನ್ನ ಜೇಬಿಗೂ, ನನ್ನ ಅಡುಗೆ ಕೋಣೆಗೂ ಮಧ್ಯೆ
ನನ್ನ ಬಾಯಿಗೂ, ನನ್ನ ಖರ್ಚಿಗೂ ಮಧ್ಯೆ
ತಿಂಗಳ ದಿನಗಳ ಸೇತುವೆಯಿರುತ್ತೆ
ವ್ಯತ್ಯಾಸವಾಯಿತೋ, ನನ್ನ ಹೊಟ್ಟೆಗೆ ಕತ್ತರಿ ಬೀಳುತ್ತೆ
ಈಗ ನಮ್ಮ ಮನೆಯಲ್ಲಿ ಅಕ್ಕಿಗೂ ಬೇಳೆಗೂ ಮಧ್ಯೆ
ಪೂರ್ವ ಪಶ್ಚಿಮದಷ್ಟು ದೂರ ಬೆಳೆದಿದೆ
ಹಸಿವಿನ ವ್ಯಾಕರಣದಲ್ಲಿ ವೈರಿಸಮಾಸ ಹುಟ್ಟಿದೆ
ಬರ ಜಗತ್ತಿನಲ್ಲಲ್ಲ
ಪ್ರತಿ ಬಡವನ ತಟ್ಟೆಯಲ್ಲಿ ತಾಂಡವಿಸುತ್ತಿದೆ
ಯಾರು ಹೇಳಿದರೋ, ಅದು ನಿಜವೇ
ಈಗ ಹೆಸರು ನೋಡಿಕೊಂಡು
ಒಂದೊಂದೇ ಅಕ್ಕಿ ಕಾಳನ್ನು
ಬೇಯಿಸಿ ತಿನ್ನುವ ಕಾಲ ಬಂದಿದೆ

ಶ್ರೀಮಂತರಿಗೆ ಸಣ್ಣಕ್ಕಿ
ಸಾಮಾನ್ಯರಿಗೆ ದೊಡ್ಡಕ್ಕಿ
ಕಾರ್ಲ್‌ಮಾರ್ಕ್ಸ್‌ಗೂ ತಿಳಿಯದ
ಎರಡು ಬತ್ತಗಳ ಪ್ರಪಂಚಯುದ್ಧ
ನೆನ್ನೆಯ ತನಕ ಕಪ್ಪು ಹಣವನ್ನೆ ಮುಚ್ಚಿಟ್ಟರು
ಇಂದು ಬೇಳೆ ದಿನಸಿಗಳನ್ನು ಸಹ
ಆ ಪಟ್ಟಿಗೆ ಸೇರಿಸಿದ್ದಾರೆ
ಮುಚ್ಚಿಡುವವರು ದೋಚುವವರು
ಹೀಗೇ ಬೆಳೆಯುತ್ತಾ ಹೋದರೆ
ಅಡುಗೆ ಕೋಣೆಗಳಲ್ಲಿನ ಈಳಿಗೆ ಮಣೆಗಳು ಕೂಡ
ನಾಳೆ ವರ್ಗಯುದ್ಧ ಸಾರುತ್ತವೇನೋ!
ಬೇಳೆ ಅನ್ನಗಳಿಗೂ ಕೂಡ
ಜನಗಳನ್ನು ದೂರ ಮಾಡುವ
ಆಳುವ ಪ್ರಭುಗಳಿಗೂ
ರಾಜಕೀಯ ಉಪವಾಸ ತಪ್ಪದು.
ತೊಗರಿ ಬೇಳೆಯ ನೂರು ತಪ್ಪುಗಳ
ಲೆಕ್ಕ ಹಾಕುವ ದಿನಗಳು ಬಂದಿವೆ
ನಾಯಕರೇ ಹುಷಾರ್!
ಇನ್ನು ನಿಮ್ಮ ಬೇಳೆ ಬೇಯಲ್ಲ!!

❑

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2007-09

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ-ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ಣಿನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕ ಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆ ಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳ ಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered
Magazine

Posted on 9th of every month
at Chamarajpet Post Office

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು - 560 018